ಮಂಗಳವಾರ, ಫೆಬ್ರುವರಿ 14, 2023 | ಬೆಂಗಳೂರು | ₹ 6.00 | ಸಂಪುಟ 00 | ಸಂಚಿಕೆ 45 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಬೇಸಿಗೆಯಲ್ಲಿ ದಾಹ ಸಹಜ; ಆದರೆ ಪಾನೀಯಗಳ ಸೇವನೆಯಲ್ಲಿ ವಿವೇಚನೆ ಇರಬೇಕು.

ಆಳ-ಅಗಲ
ಈಶಾನ್ಯ ರಾಜ್ಯಗಳಲ್ಲಿ ಚುನಾವಣಾ ರಂಗು

ಪ್ರಭಾಕರನ್ ಕಾಣಿಸಿಕೊಳ್ಳಲು ಸಕಾಲ: ನೆಡುಮಾರನ್ 11

ಬಾವಿಗಿಳಿದು ಚಿರತೆ ರಕ್ಷಿಸಿದ ಪಶುವೈದ್ಯೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
60,431	17,770	₹58,830 (ಬೆಂಗಳೂರು)	₹68,100 (ಬೆಂಗಳೂರು)

ಕಳೆದ 9 ವರ್ಷಗಳಲ್ಲಿ ರಕ್ಷಣಾ ಕ್ಷೇತ್ರಕ್ಕೆ ಹೊಸ ಆಯಾಮ: ಪ್ರಧಾನಿ ಮೋದಿ

ರಕ್ಷಣಾ ರಫ್ತು: 2024ಕ್ಕೆ ₹41 ಸಾವಿರ ಕೋಟಿ ಗುರಿ

● ಸಚ್ಚಿದಾನಂದ ಕುರಗುಂದ

ಬೆಂಗಳೂರು: ‘2024-25ರ ವೇಳೆಗೆ ಭಾರತವು 5 ಬಿಲಿಯನ್ ಡಾಲರ್ (₹41.34 ಸಾವಿರ ಕೋಟಿ) ಮೌಲ್ಯದ ರಕ್ಷಣಾ ಸರಕುಗಳನ್ನು ರಫ್ತು ಮಾಡುವ ಗುರಿ ಹೊಂದಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಏಷ್ಯಾದ ಅತಿ ದೊಡ್ಡ ವೈಮಾನಿಕ ಪ್ರದರ್ಶನ 14ನೇ ಆವೃತ್ತಿಯ ‘ಏರೋ ಇಂಡಿಯಾ-2023’ಕ್ಕೆ ಯಲಹಂಕ ವಾಯುನೆಲೆಯಲ್ಲಿ ಸೋಮವಾರ ಚಾಲನೆ ನೀಡಿ ಮಾತನಾಡಿದ ಅವರು, ‘ರಕ್ಷಣಾ ಸರಕುಗಳ ರಫ್ತು ವಲಯದಲ್ಲಿ ಜಾಗತಿಕವಾಗಿ ಮುಂಚೂಣಿ ಸ್ಥಾನ ಪಡೆಯುವ ನಿಟ್ಟಿನಲ್ಲಿ ದೇಶವು ಸಾಗುತ್ತಿದೆ. ಸದ್ಯ ₹12.4 ಸಾವಿರ ಕೋಟಿ (1.5 ಬಿಲಿಯನ್ ಡಾಲರ್) ಮೊತ್ತದಷ್ಟು ರಕ್ಷಣಾ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತಿದೆ. ಈ ವಹಿವಾಟು ಹೆಚ್ಚಿಸುವ ನೀತಿಗಳನ್ನು ರೂಪಿಸಲಾಗಿದೆ’ ಎಂದರು.

‘ಕಳೆದ 8-9 ವರ್ಷಗಳಲ್ಲಿ ರಕ್ಷಣಾ ಉತ್ಪಾದನಾ ಕ್ಷೇತ್ರಕ್ಕೆ ಪುನಃಶ್ಚೇತನ ನೀಡುವ ಮೂಲಕ ಹೊಸ ಆಯಾಮ ನೀಡಲಾಗಿದ್ದು, ಜಗತ್ತಿನ ಅತಿ ದೊಡ್ಡ ರಕ್ಷಣಾ ಸಾಮಗ್ರಿಗಳ ತಯಾರಿಕೆಯ ರಾಷ್ಟ್ರವಾಗಲಿದೆ. ದಶಕಗಳ ಕಾಲ ರಕ್ಷಣಾ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿ ದೇಶದಲ್ಲಿತ್ತು. ಆದರೆ, ಈಗ 75 ದೇಶಗಳಿಗೆ ರಕ್ಷಣಾ ಸಾಮಗ್ರಿಗಳನ್ನು ರಫ್ತು ಮಾಡುತ್ತಿದ್ದೇವೆ. ಕಳೆದ ಐದು ವರ್ಷಗಳಲ್ಲಿ ರಫ್ತು ಪ್ರಮಾಣ ಆರು ಪಟ್ಟು ಹೆಚ್ಚಿದೆ’ ಎಂದು ಹೇಳಿದರು.

‘ಒಂದು ಕಾಲದಲ್ಲಿ ಏರೋ ಇಂಡಿಯಾವು ಕೇವಲ ಪ್ರದರ್ಶನಕ್ಕೆ ಸೀಮಿತವಾಗಿತ್ತು.

11ನೇ ಪುಟ ನೋಡಿ

ಇನ್ನಷ್ಟು ಸುದ್ದಿ, ಚಿತ್ರಗಳು 4

‘ಏರೋ ಇಂಡಿಯಾ—2023’ರ ಉದ್ಘಾಟನಾ ದಿನವಾದ ಸೋಮವಾರ ಎಚ್‌ಎಎಲ್‌ನ ಪ್ರದರ್ಶನ ಮಳಿಗೆಯನ್ನು ಪ್ರಧಾನಿ ನರೇಂದ್ರ ಮೋದಿ ವೀಕ್ಷಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದಾರೆ —ಪಿಐಬಿ ಚಿತ್ರ

ಅನಧಿಕೃತ ಸಾಗುವಳಿ: ಅರ್ಜಿ ಸಲ್ಲಿಕೆಗೆ ಮೇ 31 ಕೊನೆ ದಿನ

ಬೆಂಗಳೂರು: ‘2005 ಜನವರಿ 1 ಕ್ಕಿಂತಲೂ ಪೂರ್ವದಲ್ಲಿ ಅನಧಿಕೃತವಾಗಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94 ಎ(4)ರ ಅಡಿ ನಮೂನೆ 57ರಲ್ಲಿ ಅರ್ಜಿ ಸಲ್ಲಿಸಲು ಮೇ 31ರವರೆಗೆ ಅವಕಾಶ ಕಲ್ಪಿಸಲಾಗಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

‘ಷೇರುಪೇಟೆ ನಿಯಂತ್ರಣ ವ್ಯವಸ್ಥೆ ಮೌಲ್ಯಮಾಪನಕ್ಕೆ ಅಭ್ಯಂತರವಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಷೇರುಮಾರುಕಟ್ಟೆಯಲ್ಲಿ ಹೂಡಿಕೆದಾರರ ಹಿತರಕ್ಷಣೆಗೆ ಈಗ ಜಾರಿಯಲ್ಲಿರುವ ನಿಯಂತ್ರಣ ವ್ಯವಸ್ಥೆ ಮತ್ತು ನಿಯಂತ್ರಣ ಸಂಸ್ಥೆಗಳ ಪಾತ್ರದ ಮೌಲ್ಯಮಾಪನಕ್ಕೆ ತಜ್ಞರ ಸಮಿತಿ ರಚಿಸಲು ನಮ್ಮ ಅಭ್ಯಂತರ ವೇನೂ ಇಲ್ಲ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಆದರೆ, ಈ ಸ್ವರೂಪದ ಮೌಲ್ಯಮಾಪನ ಸಮಿತಿ ಇದೆ ಎಂಬ ಸಂದೇಶ ವಿದೇಶಿ ಅಥವಾ ದೇಶಿ ಹೂಡಿಕೆದಾರರಿಗೆ ರವಾನೆ ಯಾದರೆ ಹೂಡಿಕೆ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಬಹುದು ಎಂದೂ ಸರ್ಕಾರವು ಹೇಳಿದೆ.

11ನೇ ಪುಟ ನೋಡಿ

ಮಹದಾಯಿ ಡಿಪಿಆರ್: ಗೋವಾ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಜಲ ಆಯೋಗ ಅನುಮೋದನೆ ನೀಡಿರುವುದನ್ನು ಪ್ರಶ್ನಿಸಿ ಗೋವಾ ಸರ್ಕಾರ ಸಲ್ಲಿಸಿರುವ ತಕರಾರು ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ. ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಂ.ಎಂ. ಸುಂದರೇಶ್ ಅವರಿದ್ದ ದ್ವಿಸದಸ್ಯ ಪೀಠವು ಅರ್ಜಿ ವಜಾಗೊಳಿಸಿತು.

‘ಎಲ್ಲ ಶಾಸನಬದ್ಧ ಅನುಮತಿಗಳನ್ನು ಪಡೆದೇ ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದು ಕೋರ್ಟ್ ಪುನರುಚ್ಚರಿಸಿದೆ’ ಎಂದು ಗೋವಾ ಸಿ.ಎಂ ಪ್ರಮೋದ್ ಸಾವಂತ್ ತಿಳಿಸಿದರು.

ಡಬ್ಲ್ಯುಪಿಎಲ್: ಸ್ಮೃತಿಗೆ ಬಂಪರ್

ಮುಂಬೈನಲ್ಲಿ ಸೋಮವಾರ ನಡೆದ ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಕ್ರಿಕೆಟ್ ಟೂರ್ನಿಯ ಆಟಗಾರ್ತಿಯರ ಹರಾಜು ಪ್ರಕ್ರಿಯೆಯಲ್ಲಿ ಭಾರತದ ಬ್ಯಾಟರ್ ಸ್ಮೃತಿ ಮಂದಾನ ಅತ್ಯಧಿಕ ಮೌಲ್ಯ ಗಳಿಸಿದರು. ವಿದೇಶಿ ಆಟಗಾರ್ತಿಯರಲ್ಲಿ ಆ್ಯಶ್ಲೆ ಗಾರ್ಡನರ್ ಮತ್ತು ನಥಾಲಿ ಸಿವರ್ ಬ್ರಂಟ್ ಅವರಿಗೆ ಬಂಪರ್ ಒಲಿಯಿತು.

ನಥಾಲಿ ಸಿವರ್ ಬ್ರಂಟ್ (ಇಂಗ್ಲೆಂಡ್) ₹ 3.20 ಕೋಟಿ ಮುಂಬೈ ಇಂಡಿಯನ್ಸ್

ಆ್ಯಶ್ಲೆ ಗಾರ್ಡನರ್ (ಆಸ್ಟ್ರೇಲಿಯಾ) ₹ 3.20 ಕೋಟಿ ಗುಜರಾತ್ ಜೈಂಟ್ಸ್

- ದೀಪ್ತಿ ಶರ್ಮಾ (ಭಾರತ) ₹ 2.60 ಕೋಟಿ ಯುಪಿ ವಾರಿಯರ್ಸ್
- ಜೆಮಿಮಾ ರಾಡ್ರಿಗಸ್ (ಭಾರತ) ₹ 2.20 ಕೋಟಿ ಡೆಲ್ಲಿ ಕ್ಯಾಪಿಟಲ್ಸ್
- ಶಫಾಲಿ ವರ್ಮಾ (ಭಾರತ) ₹ 2 ಕೋಟಿ ಡೆಲ್ಲಿ ಕ್ಯಾಪಿಟಲ್ಸ್



ಸ್ಮೃತಿ ಮಂದಾನ (ಭಾರತ) ₹ 3.40 ಕೋಟಿ ಆರ್‌ಸಿಬಿ

ಹರ್ಮನ್‌ಪ್ರೀತ್ ಕೌರ್ (ಭಾರತ) ₹ 1.80 ಕೋಟಿ ಮುಂಬೈ ಇಂಡಿಯನ್ಸ್

ವಿವರ ಪುಟ: 12

ಜನವರಿಯಲ್ಲಿ ಗರಿಷ್ಠ ಮಟ್ಟ ಮೀರಿದ ಬೆಲೆ ಏರಿಕೆ ಪ್ರಮಾಣ

ಮತ್ತೆ ಜಿಗಿದ ಹಣದುಬ್ಬರ

ನವದೆಹಲಿ (ಪಿಟಿಐ/ರಾಯಿಟರ್ಸ್): ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಮಟ್ಟವನ್ನು ಮತ್ತೆ ಮೀರಿದೆ. ಜನವರಿಯಲ್ಲಿ ಹಣದುಬ್ಬರ ಪ್ರಮಾಣವು ಶೇಕಡ 6.52ಕ್ಕೆ ಏರಿಕೆ ಆಗಿದೆ. ಆಹಾರ ವಸ್ತುಗಳ ಬೆಲೆಯಲ್ಲಿ ಆದ ಹೆಚ್ಚಳ ಇದಕ್ಕೆ ಮುಖ್ಯ ಕಾರಣ.

ನವೆಂಬರ್ ಹಾಗೂ ಡಿಸೆಂಬರ್ ಹೊರತುಪಡಿಸಿದರೆ, ಚಿಲ್ಲರೆ ಹಣದುಬ್ಬರ ಪ್ರಮಾಣವು 2022ರ ಜನವರಿಯಿಂದಲೂ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದೆ. ಹಣದುಬ್ಬರ ಪ್ರಮಾಣವನ್ನು ಆರ್‌ಬಿಐ ಶೇ 6ಕ್ಕಿಂತ ಕಡಿಮೆ ಮಟ್ಟದಲ್ಲಿ ನಿಯಂತ್ರಿಸಬೇಕು. ಇದು ಸರ್ಕಾರವು ಆರ್‌ಬಿಐಗೆ ನೀಡಿರುವ ಗುರಿ. ಆದರೆ, 2022ರಲ್ಲಿ ಆರ್‌ಬಿಐ ಈ ಹಣದುಬ್ಬರ ನಿಯಂತ್ರಿಸುವಲ್ಲಿ ವಿಫಲವಾಗಿದೆ.

ಜನವರಿಯಲ್ಲಿ ತರಕಾರಿ ಬೆಲೆ ತಗ್ಗಿದ್ದರೂ, ಇತರ ಬಹುತೇಕ ಉತ್ಪನ್ನಗಳ ಬೆಲೆಯು ಏರಿಕೆ ಆಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 6.85 ಆಗಿದೆ. ನಗರ ಪ್ರದೇಶಗಳಲ್ಲಿ ಇದು ಶೇ 6ರಷ್ಟು ಇದೆ.

ಹಣದುಬ್ಬರ ನಿಯಂತ್ರಣದ ಉದ್ದೇಶದಿಂದ ಆರ್‌ಬಿಐ ರೆಪೊ ದರವನ್ನು ಫೆ. 8ರಂದು ಶೇ 0.25ರಷ್ಟು ಹೆಚ್ಚು ಮಾಡಿದೆ. ಈಗ ರೆಪೊ ದರವು ಶೇ 6.50ರಷ್ಟಾಗಿದೆ. ಈಗ ಚಿಲ್ಲರೆ ಹಣದುಬ್ಬರ ಪ್ರಮಾಣವು ಹೆಚ್ಚಾಗಿರುವ ಕಾರಣದಿಂದಾಗಿ ಆರ್‌ಬಿಐ ರೆಪೊ ದರವನ್ನು ಮತ್ತೆ ಶೇ 0.25ರಷ್ಟು ಹೆಚ್ಚಿಸಬಹುದು ಎಂದು ಕೋಟಕ್ ಮಹೀಂದ್ರ ಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಉಪಾಸನಾ ಭಾರದ್ವಾಜ್ ಅಂದಾಜಿಸಿದ್ದಾರೆ.

ರಾಯಿಟರ್ಸ್ ಸುದ್ದಿಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಅರ್ಥಶಾಸ್ತ್ರಜ್ಞರು, ಜನವರಿಯಲ್ಲಿ ಹಣದುಬ್ಬರ ಪ್ರಮಾಣವು ಶೇ 5.9 ಆಗಬಹುದು ಎಂದು ಅಂದಾಜಿಸಿದ್ದರು. ಆದರೆ, ಈಗ ಹಣದುಬ್ಬರ ಪ್ರಮಾಣವು ಆ ಅಂದಾಜನ್ನೂ ಮೀರಿದೆ.

‘ಸತತ ಎರಡು ತಿಂಗಳ ಅವಧಿಯಲ್ಲಿ ಹಣದುಬ್ಬರ ಪ್ರಮಾಣದಲ್ಲಿ ಕಂಡುಬಂದ ಇಳಿಕೆಯು ದೀರ್ಘಕಾಲ ಉಳಿಯುವಂಥದ್ದಾಗಿರಲಿಲ್ಲ. ಜನವರಿಯ ಪ್ರಮಾಣವು ನಾವು ಸಮಸ್ಯೆಯಿಂದ ಹೊರಬಂದಿಲ್ಲ ಎಂಬುದನ್ನು ಸೂಚಿಸುತ್ತಿದೆ’ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಅರ್ಥಶಾಸ್ತ್ರಜ್ಞೆ ಸಾಕ್ಷಿ ಗುಪ್ತ ಹೇಳಿದ್ದಾರೆ.



ಆಘಾತಕ್ಕೆ ಈಡಾದ ಸಂಬಂಧಿ ಮಹಿಳೆ ಸಾವು; ಗುಂಡಿಟ್ಟು ಹುಲಿ ಕೊಲ್ಲಲು ಆಗ್ರಹ

ಹುಲಿ ದಾಳಿಗೆ ಮತ್ತೊಂದು ಬಲಿ

ಪ್ರಜಾವಾಣಿ ವಾರ್ತೆ

ಗೋಣಿಕೊಪ್ಪಲು/ಹುಣಸೂರು: ಇಲ್ಲಿನ ಕೇರಳ ಗಡಿಭಾಗ ಕೆ.ಬಾಡಗ ಸಮೀಪದ ಚೂರಿಕಾಡು ಎಂಬಲ್ಲಿ ಹುಲಿ ದಾಳಿಗೆ ಸಿಲುಕಿ ರಾಜು (75) ಸೋಮವಾರ ಮೃತಪಟ್ಟರು. ಅವರ ಮೊಮ್ಮಗ ಚೇತನ್ (18) ಭಾನುವಾರವಷ್ಟೇ ಹುಲಿ ದಾಳಿಯಿಂದ ಸಾವನ್ನಪ್ಪಿದ್ದರು. ದಾಳಿ ತಡೆಯಲು ಮುಂದಾದ ಚೇತನ್ ತಂದೆ ಮಧು ಗಾಯಗೊಂಡಿದ್ದಾರೆ.

ಮೊಮ್ಮಗನ ಅಂತಿಮ ದರ್ಶನಕ್ಕೆಂದು ರಾಜು ಅವರು ಚೂರಿಕಾಡಿಗೆ ತೆರಳಿದ್ದರು. ಬಹಿರ್ದೆಸೆಗೆ ಹೋಗಿದ್ದಾಗ ಹುಲಿಯು ಕುತ್ತಿಗೆ ಭಾಗವನ್ನು ಕಚ್ಚಿ ಅವರು ಸ್ಥಳದಲ್ಲೇ ಮೃತಪಟ್ಟರು. ಮೊಮ್ಮಗ ಮತ್ತು ಸಹೋದರಿಯ ಪತಿಯ ಸಾವಿನಿಂದ ಆಘಾತಕ್ಕೆ ಒಳಗಾದ ಜಯಮ್ಮ (54), ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕೊಳವಿಗೆ ಹಾಡಿಯಲ್ಲಿ ಮೃತಪಟ್ಟರು.

ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿಟ್ಟಿದ್ದ ಮೊಮ್ಮಗನ ಶವ ಹಾಗೂ ಮತ್ತೊಂದೆಡೆ ಇದ್ದ ಅಜ್ಜನ ಶವದ ಮುಂದೆ ಕುಳಿತ ಕಾಫಿ ತೋಟದ ಲೈನ್ ಮನೆಯ ಸಂಬಂಧಿಕರಲ್ಲಿ ಆಕ್ರಂದನ ಮುಗಿಲು ಮುಟ್ಟಿತ್ತು.

ಆಕ್ರೋಶಗೊಂಡ ಸ್ಥಳೀಯರು ‘ಹುಲಿಯನ್ನು ಕಂಡಲ್ಲಿ ಗುಂಡಿಕ್ಕಿ ಕೊಲ್ಲಬೇಕು’ ಎಂದು ಆಗ್ರಹಿಸಿದರು. ‘ಹುಲಿಯನ್ನು ಸೆರೆ ಹಿಡಿದು ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಕರೆದೊಯ್ದು, ಮತ್ತೆ ಕಾಡಿಗೆ ಬಿಡುತ್ತಿರುವುದರಿಂದ ಪುನಃ ಮನುಷ್ಯರ ಮೇಲೆರಗುತ್ತಿದೆ. ಅರಣ್ಯ ಇಲಾಖೆ ನಿಷ್ಕ್ರಿಯವಾಗಿದ್ದು, ಹುಲಿ ಸೆರೆ ಎಂಬುದೇ ದೊಡ್ಡ ನಾಟಕ’ ಎಂದು ಸ್ಥಳೀಯರು ಆರೋಪಿಸಿದರು.

ಸ್ಥಳಕ್ಕೆ ಬಂದ ವನ್ಯಜೀವಿ ವಿಭಾಗದ ಎಪಿಸಿಸಿಎಫ್ ಕುಮಾರ್ ಪುಷ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ನಾಗರಹೊಳೆ ಸಿಸಿಎಫ್ ಹರ್ಷಕುಮಾರ್, ಕೊಡಗು ಜಿಲ್ಲೆಯ ಸಿಸಿಎಫ್ ಬಿ.ಎನ್.ಮೂರ್ತಿ, ‘ಹುಲಿ ಸೆರೆ ಹಿಡಿಯಲಾಗುವುದು’ ಎಂದು ಜನರ ಮನವೊಲಿಸಲು ಯತ್ನಿಸಿದರು.

‘ಮೃತರ ಕುಟುಂಬದವರಿಗೆ ತಲಾ ₹ 5 ಲಕ್ಷದ ಪರಿಹಾರದ ಚೆಕ್ ನೀಡಿದ್ದು, ಅಂತ್ಯ ಸಂಸ್ಕಾರಕ್ಕೆ ತಲಾ ₹ 30 ಸಾವಿರ ನೀಡಿದ್ದಾರೆ’ ಎಂದು ಮೈಸೂರು ಜಿಲ್ಲಾ ಜೇನು ಕುರುಬ ಅಭಿವೃದ್ಧಿ ಸಮಿತಿ ಅಧ್ಯಕ್ಷ ಜೆ.ಕೆ.ರಾಜಪ್ಪ ತಿಳಿಸಿದ್ದಾರೆ.

4 ಸಾಕಾನೆಗಳೊಂದಿಗೆ ಅರಣ್ಯ ಇಲಾಖೆಯ ಸುಮಾರು 150 ಸಿಬ್ಬಂದಿಯು, ಹುಲಿ ದಾಳಿ ನಡೆಸಿದ ಸ್ಥಳದ ಆಸುಪಾಸಿನಲ್ಲಿ ದಿನವಿಡೀ ಕಾರ್ಯಾಚರಣೆ ನಡೆಸಿದರು. ಹುಲಿ ಕಾಣಿಸಿದರೂ ಸೆರೆ ಸಿಕ್ಕಲಿಲ್ಲ. ‘ಹುಲಿಯ ಸೆರೆಗಾಗಿ ಮತ್ತೆರಡು ಸಾಕಾನೆಗಳನ್ನೂ ಕರೆಸಿಕೊಳ್ಳಲಾಗುತ್ತಿದೆ’ ಎಂದು ಸಿಸಿಎಫ್ ಮೂರ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು
- ಹುಲಿ ಕೊಲ್ಲಬೇಕೆಂದು ಸ್ಥಳೀಯರ ಆಗ್ರಹ
- ಹುಲಿ ಸೆರೆಗೆ ಸಾಕಾನೆಗಳ ಬಳಕೆ
- ರಕ್ಷಣೆ ಕೊಡಿ ಎಂದು ಆಗ್ರಹಿಸಿ ಪ್ರತಿಭಟನೆ

ಶಾಸಕ ನೆಹರೂ ಓಲೇಕಾರ್‌ಗೆ ಶಿಕ್ಷೆ: ಜಾಮೀನು ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಸಭೆಗೆ ಮಂಜೂರಾದ ಒಂದು ಕೋಟಿ ರೂಪಾಯಿ ಅನುದಾನದ ಹಂಚಿಕೆಯಲ್ಲಿ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಹಾವೇರಿ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ನೆಹರೂ ಓಲೇಕಾರ್ ಮತ್ತು ಅವರ ಇಬ್ಬರು ಪುತ್ರರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ದೋಷಿ ಎಂದು ತೀರ್ಮಾನಿಸಿ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಈ ಸಂಬಂಧ ಹಾವೇರಿಯ ಶಶಿಧರ ಮಹಾದೇವಪ್ಪ ಹಳ್ಳಿಕೇರಿ ಎಂಬುವರು ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ‘ದ ನ್ಯಾಯಾಧೀಶ ಬಿ.ಜಯಂತ್ ಕುಮಾರ್ ಶಿಕ್ಷೆ ವಿಧಿಸಿ ಸೋಮವಾರ ಆದೇಶಿಸಿದ್ದಾರೆ.

ಪ್ರಕರಣದ ಆರೋಪಿಗಳಾದ ನೆಹರೂ ಓಲೇಕಾರ್, ಅವರ ಪುತ್ರರಾದ ಮಂಜುನಾಥ ಸಿ. ಓಲೇಕಾರ್ ಮತ್ತು ದೇವರಾಜ ಎನ್. ಓಲೇಕಾರ್ ಸೇರಿದಂತೆ ಒಟ್ಟು ಒಂಬತ್ತು ಜನ ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿದೆ. ಶಿಕ್ಷೆ ಮೂರು ವರ್ಷಗಳಿಗಿಂತ ಕಡಿಮೆ ಇದ್ದು ಎರಡು ವರ್ಷಗಳಿರುವ ಕಾರಣ ಇದೇ ನ್ಯಾಯಾಲಯ ನೆಹರೂ ಓಲೇಕಾರ್ ಅವರಿಗೆ ಜಾಮೀನು ಮಂಜೂರು ಮಾಡಿ ಆದೇಶಿಸಿದೆ.

ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13 (2) ಮತ್ತು ಭಾರತೀಯ ದಂಡ ಸಂಹಿತೆಯ ಕಲಂ 420, 197,198 ಮತ್ತು 409ರ ಅನ್ವಯ ಶಿಕ್ಷೆ ಘೋಷಿಸಲಾಗಿದೆ.

ಖಾಸಗಿ ದೂರು ದಾಖಲು

‘ನಗರಸಭೆಗೆ ಒಂದು ಕೋಟಿ ರೂಪಾಯಿ ಅನುದಾನ ಬಂದಿತ್ತು. ಈ ಮೊತ್ತದ ಹಂಚಿಕೆಯಲ್ಲಿ ಶಾಸಕರು ಸ್ವಜನ ಪಕ್ಷಪಾತ ಎಸಗಿದ್ದಾರೆ. ಅನುದಾನ ಹಂಚಿಕೆಯಲ್ಲಿ ಭ್ರಷ್ಟಾಚಾರ ಎಸಗಲಾಗಿದೆ‘ ಎಂದು ಖಾಸಗಿ ದೂರು ದಾಖಲಿಸಲಾಗಿತ್ತು. ದಾವಣಗೆರೆ ವಿಭಾಗದ ಲೋಕಾಯುಕ್ತ ಎಸ್‌ಪಿ ನೇತೃತ್ವದ ತಂಡವು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನಂತರ ಈ ಪ್ರಕರಣ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆಯಾಗಿತ್ತು.

ಶಾಸಕ ಎಂ.ಪಿ. ಕುಮಾರಸ್ವಾಮಿ ತಪ್ಪಿತಸ್ಥ: ಹಣ ಪಾವತಿ ಇಲ್ಲವೇ ಜೈಲು ಶಿಕ್ಷೆ

ಬೆಂಗಳೂರು: ಚೆಕ್ ಬೌನ್ಸ್‌ಗೆ ಸಂಬಂಧಿಸಿದ ಎಂಟು ಪ್ರತ್ಯೇಕ ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿಯಾಗಿದ್ದ ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಎಂ.ಪಿ.ಕುಮಾರಸ್ವಾಮಿ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಒಟ್ಟು ₹ 1.36 ಕೋಟಿಗೂ ಹೆಚ್ಚಿನ ಮೊತ್ತವನ್ನು ಫಿರ್ಯಾದುದಾರರಿಗೆ ಪಾವತಿಸುವಂತೆ ಘೋಷಿಸಿದೆ. ತಪ್ಪಿದಲ್ಲಿ ಪ್ರತಿ ಪ್ರಕರಣದಲ್ಲಿ ತಲಾ ಆರು ತಿಂಗಳ ಸಾದಾ ಜೈಲು ಶಿಕ್ಷೆ ಅನುಭವಿಸುವಂತೆ ಆದೇಶಿಸಿದೆ.

ಈ ಕುರಿತ ಎಂಟು ಪ್ರತ್ಯೇಕ ಪ್ರಕರಣಗಳ ಮೇಲಿನ ಆದೇಶವನ್ನು ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ದ ನ್ಯಾಯಾಧೀಶೆ ಜೆ.ಪ್ರೀತ್ ಅವರು ಸೋಮವಾರ ಪ್ರಕಟಿಸಿದರು. ಕುಮಾರಸ್ವಾಮಿ ಅವರು ವಿವಿಧ ಪ್ರಕರಣಗಳಲ್ಲಿ ಒಟ್ಟು ₹ 1,38,65,000 ಮೊತ್ತಕ್ಕೆ ಮರುಪಾವತಿಯ ಚೆಕ್ ನೀಡಿದ್ದರು. ಇದರಲ್ಲಿ ₹ 1,36,50,000 ಬಾಕಿ ಉಳಿಸಿಕೊಂಡಿದ್ದರು. ಈ ಕುರಿತಂತೆ ಫಿರ್ಯಾದುಗಳು ಸಲ್ಲಿಕೆಯಾಗಿದ್ದವು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾ ಧೀಶರು ಈ ಆದೇಶ ನೀಡಿದ್ದಾರೆ.

ಭೂಕಂಪ: 36,000 ದಾಟಿದ ಸಾವು

ಅಂಟಾಕ್ಯಾ (ರಾಯಿಟರ್ಸ್): ಟರ್ಕಿ ಮತ್ತು ಸಿರಿಯಾ ದೇಶಗಳನ್ನು ತತ್ತರಗೊಳಿಸಿದ ಭೀಕರ ಭೂಕಂಪದಲ್ಲಿ ಮೃತರ ಸಂಖ್ಯೆ ಸೋಮವಾರ 36 ಸಾವಿರದ ಹತ್ತಿರಕ್ಕೆ ತಲುಪಿದೆ.

ಈವರೆಗೆ ಟರ್ಕಿಯಲ್ಲಿ 31,643 ಮತ್ತು ಸಿರಿಯಾದಲ್ಲಿ 4,300 ಜನರು ಮೃತಪಟ್ಟಿದ್ದಾರೆ. ಸಿರಿಯಾದಲ್ಲಿ ಗಾಯಾಳುಗಳ ಸಂಖ್ಯೆ 7,600ಕ್ಕೆ ಮುಟ್ಟಿದೆ. ದುರಂತ ಸಂಭವಿಸಿ ಎಂಟು ದಿನಗಳು ಕಳೆದರೂ ಅಲ್ಲಲ್ಲಿ ಅವಶೇಷಗಳಡಿ ಜನರು ಪವಾಡದಂತೆ ಬದುಕಿರುವುದು ಪತ್ತೆಯಾಗುತ್ತಲೇ ಇದೆ. ಅಂಟಾಕ್ಯಾದಲ್ಲಿ ಮೂರು ಅಂತಸ್ತಿನ ವಸತಿ ಸಮುಚ್ಚಯ ಕುಸಿದು, 176 ಗಂಟೆಗಳ ಕಾಲ ಸಿಲುಕಿದ್ದ ಒಂದೇ ಕುಟುಂಬದ ಅಜ್ಜಿ, ತಾಯಿ, ಮಗಳನ್ನು ರಕ್ಷಿಸಲಾಯಿತು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರಾ ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/168/2022-23 ದಿನಾಂಕ: 13.02.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೆ. ಟಿ. ಕೃಷ್ಣಪ್ಪ ಬಿನ್ ಲೇಟ್ ತಿಮ್ಮಹನುಮಯ್ಯ	ದೊಡ್ಡಬಳ್ಳಾಪುರ	ಕಸಬಾ	ರಘುನಾಥಪುರ	120/4	1-01	ವ್ಯವಸಾಯ	ವಸತಿ

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವಸತಿ ಉಪಯೋಗಕ್ಕಾಗಿ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು ಲಭ್ಯವಾಗುತ್ತದೆ. ಆದ್ದರಿಂದ ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/RO4655/AAPL/2022-23

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099.
ದೂ.: 080-27835122 ಫ್ಯಾಕ್ಸ್ : 080-27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/111/2022-23 ದಿನಾಂಕ: 13.02.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ-ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಕೃಷ್ಣಪ್ಪ, ಶ್ರೀ ಮುನಿಯಪ್ಪ, ಶ್ರೀ ವೆಂಕಟರಮಣಪ್ಪ, ಶ್ರೀ ರಾಜಪ್ಪ ಬಿನ್ ಲೇ. ನಾಗಪ್ಪ	ಆನೇಕಲ್	ಸರ್ಜಾಪುರ	ಮಾದಪ್ಪನಹಳ್ಳಿ	16	1-09	ಕೃಷಿ	ವಸತಿ	
2	ಶ್ರೀ ಕೃಷ್ಣಪ್ಪ, ಶ್ರೀ ಮುನಿಯಪ್ಪ, ಶ್ರೀ ವೆಂಕಟರಮಣಪ್ಪ, ಶ್ರೀ ರಾಜಪ್ಪ ಬಿನ್ ಲೇ. ನಾಗಪ್ಪ	ಆನೇಕಲ್	ಸರ್ಜಾಪುರ	ಮಾದಪ್ಪನಹಳ್ಳಿ	17	2-00	ಕೃಷಿ	ವಸತಿ	
3	ಶ್ರೀಮತಿ ಹೆಚ್. ಲಕ್ಷ್ಮೀದೇವಿ ಕೋಂ. ಕೆ. ಜಗದೀಶ್	ಆನೇಕಲ್	ಸರ್ಜಾಪುರ	ಮಾದಪ್ಪನಹಳ್ಳಿ	18/3	0-30	ಕೃಷಿ	ವಸತಿ	

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ದೊರಕುತ್ತದೆ. ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ದೊರಕುತ್ತವೆ ಹಾಗೂ ಕಾನೂನುಬದ್ಧ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-,
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/4671/2022-23

ಸಾಲ ವಸೂಲಾತಿ ಮೇಲ್ಮನವಿ ನ್ಯಾಯಮಂಡಳಿ ಶಾಸ್ತ್ರಿಭವನ, ಚೆನ್ನೈ

AIR.253 OF 2022

ಚಿಂತಾಮಣಿಯಲ್ಲಿ ತನ್ನ ಶಾಖೆಯನ್ನು ಹೊಂದಿರುವ ಮತ್ತು ತನ್ನ ವ್ಯವಸ್ಥಾಪಕ ನಿರ್ದೇಶಕರಿಂದ ಪ್ರತಿನಿಧಿಸಲ್ಪಟ್ಟ **ಕರ್ನಾಟಕ ರಾಜ್ಯ ಉಗ್ರಾಣ ನಿಗಮ,** "ಉಗ್ರಾಣ ಭವನ", ನಂ.43, ಪ್ರಿಮ್‌ರೋಸ್ ರಸ್ತೆ, ಬೆಂಗಳೂರು-25.

ಮೇಲ್ಮನವಿದಾರರು/3ನೇ ಪ್ರತಿವಾದಿ

1. ದಿ ಫೆಡರಲ್ ಬ್ಯಾಂಕ್ ಲಿ. ಬೆಂಗಳೂರು ಗ್ರಾಮಾಂತರ ಹೊಸಕೋಟೆ ಶಾಖೆ ಅದರ ವ್ಯವಸ್ಥಾಪಕ ಶ್ರೀ ರಾಜೇಶ್ ನಾಯಕ್ ಕೆ. ಹಾಗೂ ಇನ್ನೂ 2 ಇತರ ವ್ಯಕ್ತಿಗಳಿಂದ ಪ್ರತಿನಿಧಿಸಲ್ಪಟ್ಟಿದ್ದು

...ಪ್ರತಿವಾದಿ/ಅರ್ಜಿದಾರ

ಇವರಿಗೆ

1. ಶ್ರೀಮತಿ ಪಾರ್ವತಮ್ಮ ವೆಂಕಟಗಿರಿಯಪ್ಪ ಅವರ ಪತ್ನಿ ನಂ.1 ಮತ್ತು 2, ಹೊಸಕೋಟೆ ತಾಲೂಕು ನಿವಾಸ ತಗಳ್ಳಿ ಹೊಸಹಳ್ಳಿ ಜಡಿಗೇನಹಳ್ಳಿ ಬೆಂಗಳೂರು ಗ್ರಾಮಾಂತರ-562 114

...ಪ್ರತಿವಾದಿ/1ನೇ ಪ್ರತಿವಾದಿ

2. ಶ್ರೀ ವೆಂಕಟಗಿರಿಯಪ್ಪ ಮಲೇಯಪ್ಪ ಅವರ ಮಗ ನಂ.1 ಮತ್ತು 2, ಹೊಸಕೋಟೆ ತಾಲೂಕು ನಿವಾಸ ತಗಳ್ಳಿ ಹೊಸಹಳ್ಳಿ ಜಡಿಗೇನಹಳ್ಳಿ ಬೆಂಗಳೂರು ಗ್ರಾಮಾಂತರ-562 114

...ಪ್ರತಿವಾದಿ/2ನೇ ಪ್ರತಿವಾದಿ

ಅದಾಗಿ, ದಿನಾಂಕ 05.10.2020 ರ ಆದೇಶವನ್ನು ತಳ್ಳಿಹಾಕಲು IA.No.1970 of 2020 ಮನವಿಯನ್ನು ವಜಾ ಮಾಡುತ್ತ ಸಾಲ ವಸೂಲಾತಿ ನ್ಯಾಯುಮಂಡಳಿ, II ಬೆಂಗಳೂರು ಇಲ್ಲಿನ ಪೀಠಾಸೀನ ಅಧಿಕಾರಿ ಹೊರಡಿಸಿದ OA.73 of 2020 ನಲ್ಲಿ 01.04.2022 ದಿನಾಂಕದ ಹೊರಡಿಸಲಾದ ಆದೇಶವನ್ನು ತಳ್ಳಿಹಾಕಲು ಚೆನ್ನೈನ ಗೌರವಾನ್ವಿತ ಸಾಲ ವಸೂಲಾತಿ ಮೇಲ್ಮನವಿ ನ್ಯಾಯಮಂಡಳಿಯ ಮುಂದೆ ಮೇಲೆ ತಿಳಿಸಿರುವ ಮೇಲ್ಮನವಿದಾರರು ಮೇಲ್ಮನವಿ ಸಲ್ಲಿಸಿರುತ್ತಾರೆ.

ಪರ್ಯಾಯ ಸೇವೆ ಮೂಲಕ ಪ್ರತಿವಾದಿಗಳಿಗೆ ಸಮನ್ಸ್ ಸಾಧಾರಣ ವಿಧಾನದ ಮೂಲಕ ಸಮನ್ಸ್ ನೀಡಲು ಸಾಧ್ಯವಾಗದಿರುವ ಕಾರಣ ಮತ್ತು ಈ ಮೇಲ್ಮನವಿ ನ್ಯಾಯುಮಂಡಳಿಯಿಂದ ಪರ್ಯಾಯ ಸೇವೆ ಆದೇಶಿಸಲ್ಪಟ್ಟಿರುವ ಹಿನ್ನೆಲೆಯಲ್ಲಿ, ಪತ್ರಿಕಾ ಪ್ರಕಟಣೆ ಮೂಲಕ ಈ ಸೂಚನೆ ಹೊರಡಿಸಲಾಗಿರುತ್ತದೆ.

ಆದ ಕಾರಣ, ತಾವು ಈ ಗೌರವಾನ್ವಿತ ಸಾಲ ವಸೂಲಾತಿ ಮೇಲ್ಮನವಿ ನ್ಯಾಯಮಂಡಳಿಯ ಚೆನ್ನೈ ಎದುರು ಖುದ್ದು ಅಥವಾ ಅಧಿಕೃತ ವಕೀಲರ ಮೂಲಕ **21-02-2023 ದಿನಾಂಕದಂದು ಬೆಳಿಗ್ಗೆ 11.00 ಗಂಟೆಗೆ** ಹಾಜರಾಗಲು ಸೂಚಿಸಲಾಗಿದೆ.

ಒಂದೊಮ್ಮೆ ನೀವು ಗೈರುಹಾಜರಾದ ಪಕ್ಷದಲ್ಲಿ, ಕಾನೂನಿನ ಪ್ರಕಾರ ಸದರಿ ಮೇಲ್ಮನವಿಯನ್ನು ನಿಮ್ಮ ಗೈರುಹಾಜರಿಯಲ್ಲಿ ಆಲಿಸಿ ನಿರ್ಧರಿಸಲಾಗುತ್ತದೆ ಎಂದು ತಮಗೆ ತಿಳಿಸಲ್ಪಟ್ಟಿದೆ.

ಮೆ॥ ಐಯರ್ ಮತ್ತು ಡೋಲಿಯ ಹಾಗೂ
ಕೆ. ನಿಖೇಶ್ ಖರಿವಾಲ್, ವಕೀಲರು,
29, ಲಾ ಚೆಂಭರ್ಸ್,
ಉಚ್ಚ ನ್ಯಾಯಾಲಯ, ಚೆನ್ನೈ-104

DIPR/CP/RO4609/AAPL/2022-23

ಕಾರ್ಮಿಕರ ಇಬ್ಬರು ಮಕ್ಕಳಿಗೆ ಪ್ರೋತ್ಸಾಹಧನ

ಬೆಂಗಳೂರು: ಕಾರ್ಮಿಕರ ಮಕ್ಕಳಿಗೆ ನೀಡುವ ಶೈಕ್ಷಣಿಕ ಪ್ರೋತ್ಸಾಹಧನವನ್ನು ಕುಟುಂಬದ ಇಬ್ಬರು ಮಕ್ಕಳಿಗೆ ನೀಡಲು ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ನಿರ್ಧರಿಸಿದೆ.

ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ನೇತೃತ್ವದಲ್ಲಿ ಸೋಮವಾರ ನಡೆದ ಮಂಡಳಿಯ 95ನೇ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಕಾರ್ಮಿಕರು ಮೃತಪಟ್ಟಾಗ ನೀಡುವ ಅಂತ್ಯಸಂಸ್ಕಾರದ ವೆಚ್ಚವನ್ನು ₹10 ಸಾವಿರದಿಂದ ₹20 ಸಾವಿರಕ್ಕೆ ಹೆಚ್ಚಿಸುವುದು, ವೈದ್ಯಕೀಯ ನೆರವು ಯೋಜನೆಗೆ ಇನ್ನು ಕೆಲವು ಶಸ್ತ್ರಚಿಕಿತ್ಸೆಗಳನ್ನು ಸೇರ್ಪಡೆಗೊಳಿಸುವ ಬಗ್ಗೆಯೂ ಚರ್ಚೆಗಳು ನಡೆದವು.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು-560001. ದೂ.: 25310039/25310038

ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಶಾಖೆಗಳಿಗಾಗಿ ವಾಣಿಜ್ಯ ಸ್ಥಳವನ್ನು ಹೊಂದಿರುವ ಮಾಲೀಕರಿಂದ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಅಶೋಕ ಪಿಲ್ಲರ್, ಬೆಂಗಳೂರು	2500 ಚ.ಅಡಿಗಳು
ಎಸ್‌ಎಂಇ ಸುಲಭ್, ಮಾಲೂರು, ಕೋಲಾರ	2500 ಚ.ಅಡಿಗಳು
ಅಬ್ಬೇನಹಳ್ಳಿ ಕ್ರಾಸ್, ಮಾಲೂರು	1500 ಚ.ಅಡಿಗಳು

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **07-03-2023 ರಂದು ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 14-02-2023

ಸಹಿ/-
ಸಹಾಯಕ ಮಹಾ ಪ್ರಬಂಧಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯೋಜನೆ ಕೇಂದ್ರ-2,
ಅನೆಕ್ಸ್-2 ಕಟ್ಟಡ, ಬಿಬಿಎಂಪಿ, ಬೆಂಗಳೂರು-560 002.

ಸಂಖ್ಯೆ: ಕಾಅ/ಯೋಕೇ-2/ಟೆಂಡರ್/17/2022-23 ದಿನಾಂಕ: 13-02-2023

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ-2, ಬೃಬೆಂಮಪಾ, ಬೆಂಗಳೂರು ರವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆ ಹೆಸರು	ಇಎಂಡಿ ಮೊತ್ತ (ರೂ.ಗಳಲ್ಲಿ)
1)	ಲಕ್ಕಸಂದ್ರ, ಅರೇಹಳ್ಳಿ, ಗಾರ್ವೆಭಾವಿಪಾಳ್ಯ (ಮಂಗಮ್ಮನ ಪಾಳ್ಯ), ಮತ್ತು ಉತ್ತರಹಳ್ಳಿ, ಬೆಂಗಳೂರು ನಗರದಲ್ಲಿ ಬೃಬೆಂಮಪಾ ಶಾಲೆಗಳು ಮತ್ತು ಕಾಲೇಜು ಕಟ್ಟಡಗಳಿಗೆ ಹೊಸ ಮತ್ತು ಹೆಚ್ಚುವರಿ ಮಹಡಿಗಳ ನಿರ್ಮಾಣದ ಮೇಲ್ವಿಚಾರಣೆ, ಯೋಜನಾ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕಾಗಿ ಪುರಾವೆ ಪರಿಶೀಲನೆ ಸೇರಿದಂತೆ ಸಲಹಾ ಸೇವೆಗಳು.	32000/- (ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ).

ಟೆಂಡರ್ ಕಾರ್ಯಸೂಚಿ: 1) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 17-02-2023 ರಂದು ಸಂಜೆ 5:30 ಗಂಟೆಯವರೆಗೆ. 2) ಪೂರ್ವ ಬಿಡ್ ಸಭೆಯು ಮುಖ್ಯ ಅಭಿಯಂತರರವರ ಕಛೇರಿ, ಯೋಜನೆ ಕೇಂದ್ರ ಇಲ್ಲಿ ದಿನಾಂಕ: 20-02-2023 ರಂದು ಸಂಜೆ 4:00 ಗಂಟೆಗೆ ನಡೆಸಲಾಗುವುದು. 3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ: 22-02-2023ರ ಸಂಜೆ 5:30 ಗಂಟೆ ಅಥವಾ ಅದಕ್ಕೂ ಮುಂಚಿತವಾಗಿ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24-02-2023ರ ಸಂಜೆ 4:00 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ-ಕೇಂದ್ರ-2, ಬೃಬೆಂಮಪಾ.

ಪ್ರವಾಸೋದ್ಯಮ ಮೇಳ 17ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಣ ಮತ್ತು ಪ್ರವಾಸೋದ್ಯಮ ಮೇಳ (ಟಿಟಿಎಫ್) ಇದೇ 17ರಂದು ನಗರದ ತ್ರಿಪುರ ವಾಸಿನಿ ಅರಮನೆ ಮೈದಾನದಲ್ಲಿ ನಡೆಯಲಿದೆ.

ಕೋವಿಡ್ ಬಳಿಕ ಪ್ರಯಾಣ, ಪ್ರವಾಸೋದ್ಯಮ ಮತ್ತು ಅತಿಥ್ಯ ಕ್ಷೇತ್ರಗಳಿಗೆ ದೊಡ್ಡಮಟ್ಟದ ಬೇಡಿಕೆ ಇದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆದ್ಯತೆಯ ಕ್ಷೇತ್ರಗಳಾಗಿವೆ. ಟಿಟಿಎಫ್ ಬೆಂಗಳೂರು 2023ರ ಮೇಳದಲ್ಲಿ 120ಕ್ಕೂ ಹೆಚ್ಚು ಪ್ರದರ್ಶಕರು, ಹಲವಾರು ರಾಜ್ಯ ಮತ್ತು ದೇಶಗಳ ಪ್ರದರ್ಶಕರು ಪಾಲ್ಗೊಳ್ಳಲಿದ್ದಾರೆ.

ಟಿಟಿಎಫ್ ಬೆಂಗಳೂರು 2023ರ ಮೇಳವನ್ನು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಉದ್ಘಾಟಿಸಲಿದ್ದಾರೆ. ಪ್ರವಾಸೋದ್ಯಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್, ನಿರ್ದೇಶಕ ರಾಮ್ ಪ್ರಸಾತ್ ಮನೋಹರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನೈಋತ್ಯ ರೈಲ್ವೆ G20

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ-ಟೆಂಡರು ಸೂಚನೆ ಸಂ.: Y/E.29/2022-23/57 ದಿನಾಂಕ: 07.02.2023

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಅಶೋಕಪುರಂ ನಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಸಶಕ್ತಗೊಳಿಸುವುದು.	ರೂ. 71,71,042.20

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.03.2023, 11:00 ಗಂಟೆಯವರೆಗೆ

ಇ-ಟೆಂಡರು ಸೂಚನೆ ಸಂ.: Y/E.29/2022-23/58 ದಿನಾಂಕ: 08.02.2023

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹರಿಹರ - ಸಿಕ್-ಲೈನ್‌ನಿಂದ ಆವೃತವಾಗಿರುವ ಶೆಡ್‌ಗೆ ಬೇಕಾದ ಕ್ರೇನ್ ಸೌಲಭ್ಯವನ್ನು ಒದಗಿಸುವುದು.	ರೂ. 12,34,884.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.03.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್
ಮೈಸೂರು

PUB/668/AAD/PRB/SWR/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಇ-ಟೆಂಡರು ಸೂಚನೆ ಸಂ. 42 UBL 2022-23
ದಿನಾಂಕ: 07.02.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿಯಲ್ಲಿರುವ ಕಚೇರಿ ಕಾಲೊನಿ ಮತ್ತು ಬ್ರೂಕ್ ರೂಡ್‌ಗಳಲ್ಲಿ 1539 ಮತ್ತು 1515 ಬ್ಲಾಕ್‌ಗಳಲ್ಲಿ ಆರ್‌ವಿಎನ್‌ಎಲ್ ಮೂಲಕ ನಿರ್ಮಿಸಲಾದ ಒಳಚರಂಡಿ ಲೈನ್, ಸ್ಯಾನಿಟೆರಿ ಲೈನ್, ಬೌಂಡರಿ ಗೋಡೆ, ಫೆನ್ಸಿಂಗ್ ಮತ್ತು ಪಾರ್ಕಿಂಗ್ ಪ್ರದೇಶಗಳಿಗೆ ಬೇಕಾದ ದುರಸ್ತಿ ಕೆಲಸಗಳು.	ರೂ. 34,95,286/-
2	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿಯ ಗದಗ ರಸ್ತೆ ಉಪ ನಿಲ್ದಾಣದಲ್ಲಿ ಹೊಸ ಸ್ವಿಚ್ ರೂಂ ಮತ್ತು ಉಪ ನಿಲ್ದಾಣದ ಸಾಮರ್ಥ್ಯವನ್ನು ವೃದ್ಧಿಗೊಳಿಸುವ ಕೆಲಸಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಕೆಲಸಗಳು.	ರೂ. 95,63,203/-
3	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಗದಗ ಉಪ ವಿಭಾಗ ಇಲ್ಲಿ ಪ್ಲಾಟ್‌ಫಾರ್ಮ್‌ನ ಮೇಲ್ಮೈನ ಮೇಲಿನ ಅಭಿವೃದ್ಧಿ ಕೆಲಸ - ಕಣಗಿನಹಾಳ, ಹರ್ಲಾಪುರ, ಕೊಪ್ಪಳ, ಮುನಿರಾಬಾದ ಮತ್ತು ವ್ಯಾಸನಕೇರಿ ನಿಲ್ದಾಣಗಳು (ಒಟ್ಟು 05 ನಿಲ್ದಾಣಗಳು).	ರೂ.1,40,66,052/-
4	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಬಳ್ಳಾರಿ ಉಪ ವಿಭಾಗ ಇಲ್ಲಿ ಪ್ಲಾಟ್‌ಫಾರ್ಮ್‌ನ ಮೇಲ್ಮೈನ ಮೇಲಿನ ಅಭಿವೃದ್ಧಿ ಕೆಲಸ - ಕಾರಿಗನೂರು, ತೋರಣಗಲ್ಲು, ಬಳ್ಳಾರಿ ಮತ್ತು ಗಾದಿಗನೂರು ನಿಲ್ದಾಣಗಳು (ಒಟ್ಟು 04 ನಿಲ್ದಾಣಗಳು).	ರೂ. 1,12,81,745/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.03.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ ಸಂಯೋಜನೆ
ಹುಬ್ಬಳ್ಳಿ

PUB/670/AAD/PRB/SWR/2022-23

S.W.Railways SWRRLY SWRRLY

ಆಶಾ ಕಾರ್ಯಕರ್ತೆಯರ ಸಮಾವೇಶ ಇಂದು

ಬೆಂಗಳೂರು: ಬಾಕಿ ಗೌರವಧನ ಬಿಡುಗಡೆಗೆ ಒತ್ತಾಯಿಸಿ ಆಶಾ ಕಾರ್ಯಕರ್ತೆಯರ ರಾಜ್ಯಮಟ್ಟದ ಸಮಾವೇಶ ಶಿಕ್ಷಕರ ಸದನದಲ್ಲಿ ಮಂಗಳವಾರ ಬೆಳಿಗ್ಗೆ 11ಕ್ಕೆ ನಡೆಯಲಿದೆ.

ಆರೋಗ್ಯ ಸಚಿವ ಕೆ. ಸುಧಾಕರ್ ಅವರನ್ನು ಆಹ್ವಾನಿಸಲಾಗಿದೆ. ಗಂಭೀರ ಸಮಸ್ಯೆಗಳ ಪರಿಹಾರಕ್ಕಾಗಿ ಹಲವು ವರ್ಷಗಳಿಂದ ಚಳವಳಿ ನಡೆಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘವು ತಿಳಿಸಿದೆ.

ನಿಧನ ವಾರ್ತೆ

ಅ.ಬ. ಶಿವಕುಮಾರ್

ಯಲಹಂಕ: ಯಲಹಂಕ ನಾಗರಿಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಅ.ಬ. ಶಿವಕುಮಾರ್ 63) ಹೃದಯಾಘಾತದಿಂದ ಸೋಮವಾರ ನಿಧನರಾದರು. ಮೃತರಿಗೆ ಪತ್ನಿ ಮತ್ತು ಪುತ್ರ, ಪುತ್ರಿ ಇದ್ದಾರೆ.

ಶಿವಕುಮಾರ್ ಸಾಹಿತ್ಯ, ನಾಟಕ, ಚಲನಚಿತ್ರ, ಪರಿಸರ, ಸಾಂಸ್ಕೃತಿಕ ಕ್ಷೇತ್ರಗಳೂ ಸೇರಿದಂತೆ ಸಾಮಾಜಿಕ ಕಾರ್ಯದಲ್ಲಿ ಸಕ್ರಿಯರಾಗಿದ್ದರು. ಜಲಸಿರಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಯಲಹಂಕ ಕೆರೆಯ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿದ್ದರು. ಅಸ್ತಿತ್ವಂ ಥಿಯೇಟರ್ ಫೌಂಡೇಷನ್ ಗೌರವ ಕಾರ್ಯದರ್ಶಿ, ಸರ್ಕಾರಿ ಪದವಿ ಹಾಗೂ ಪದವಿಪೂರ್ವ ಕಾಲೇಜಿನ ನಿರ್ವಹಣಾ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಆ್ಯಸ್ಟರ್ ಸಿಎಂಐ ಆಸ್ಪತ್ರೆಗೆ ಅಂಗಾಂಗ ದಾನ ಮಾಡಲಾಯಿತು. ವೀರಸಾಗರ ಬಳಿಯಿರುವ ಕೆಂಪನಹಳ್ಳಿಯಲ್ಲಿ ಸೋಮವಾರ ಸಂಜೆ ಮೃತರ ಅಂತ್ಯಕ್ರಿಯೆ ನೆರವೇರಿತು.

ULB Code : 803162

ಸ್ವಾತಂತ್ರ್ಯದ ಅಮೃತಮಹೋತ್ಸವ | ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯೆಡೆಗೆ | ಕರ್ನಾಟಕ ಸರ್ಕಾರ | ಬಿಬಿಎಂಪಿ | BSWML ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ತ್ಯಾಜ್ಯದ ಸಮರ್ಪಕ ವಿಲೇವಾರಿ

ಪ್ರತಿಯೊಬ್ಬರ ಜವಾಬ್ದಾರಿ

ಸರಿಯಾಗಿ ವಿಲೇವಾರಿ ಆಗದ ತ್ಯಾಜ್ಯಗಳು ಅಶುಚಿಯ ಅಶುದ್ಧ ವಾತಾವರಣ ಉಂಟು ಮಾಡುತ್ತದೆ. ಮತ್ತು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತದೆ.

ತರಕಾರಿ / ಹಣ್ಣಿನ ಸಿಪ್ಪೆಗಳು / ಬೇಯಿಸಿದ ಆಹಾರ / ಉಳಿಕೆಗಳು / ಮೊಟ್ಟೆಯ ಚಿಪ್ಪುಗಳು / ಕೋಳಿ / ಮೀನಿನ ಮೂಳೆಗಳು / ಕೊಳೆತ ಹಣ್ಣುಗಳು

ಪ್ಲಾಸ್ಟಿಕ್ ಕವರ್‌ಗಳು / ಬಾಟಲಿಗಳು / ಪೆಟ್ಟಿಗೆಗಳು / ಚಿಪ್ಸ್, ಚಾಕಿ ಕವರ್‌ಗಳು, ಪ್ಲಾಸ್ಟಿಕ್ ಕಪ್‌ಗಳು / ಹಾಲು / ಮೊಸರು ಪ್ಯಾಕೆಟ್‌ಗಳು / ಪತ್ರಿಕೆ / ನಿಯತಕಾಲಿಕೆಗಳು / ಸ್ಟೇಷನರಿ / ಜಂಕ್ ಮೇಲ್ / ರಟ್ಟಿನ ಪೆಟ್ಟಿಗೆಗಳು

ಡೈಪರ್‌ಗಳು / ಸ್ಯಾನಿಟರಿ ನ್ಯಾಪ್ಕಿನ್‌ಗಳು / ಬ್ಯಾಂಡೇಜ್‌ಗಳು / ಕಾಂಡೋಮ್‌ಗಳು / ಕೂದಲು / ಬಳಸಿದ ಚಿಟ್ಟುಗಳು / ಉಗುರು / ಅವಧಿ ಮೀರಿದ ಔಷಧಿಗಳು / ಮುರಿದ ಗಾಜಿನ ತುಂಡುಗಳು

ಸುಡಲ್ಪಡುತ್ತಿರುವ ಕಸದಿಂದ ಹೊರಬರುವ ವಿಷಾನಿಲಗಳು ತೀವ್ರ ಶ್ವಾಸಕೋಶದ ತೊಂದರೆಗಳನ್ನು ಉಂಟುಮಾಡುವುದಲ್ಲದೆ, ಬೆಂಕಿಯ ಜ್ವಾಲೆಯು ಅಕ್ಕ-ಪಕ್ಕ ಪರಿಸರಕ್ಕೆ ಹಬ್ಬುವ ಸಾಧ್ಯತೆ ಬಹಳ ಹೆಚ್ಚಾಗಿರುತ್ತದೆ.

ತ್ಯಾಜ್ಯದ ನಿರ್ವಹಣೆ

ಸರಿ | ತಪ್ಪು



ಮೂಲದಲ್ಲಿಯೇ ಹಸಿ ತ್ಯಾಜ್ಯ, ಒಣ ತ್ಯಾಜ್ಯ ಮತ್ತು ಸ್ಯಾನಿಟರಿ ತ್ಯಾಜ್ಯ ವಿಂಗಡಿಸಿ

ಹಸಿ ತ್ಯಾಜ್ಯವನ್ನು ಮನೆ ಹಂತದಲ್ಲಿಯೇ ಗೊಬ್ಬರವನ್ನಾಗಿಸಿ

ಒಣ ತ್ಯಾಜ್ಯವನ್ನು ಪ್ರತ್ಯೇಕಿಸಿ ಹಾಗೂ ಕಸ ಸಂಗ್ರಹಿಸುವ ಗಾಡಿಗೆ ನೀಡಿ

ಕಸವನ್ನು ಎಲ್ಲೆಂದರಲ್ಲಿ ಎಸೆಯಬೇಡಿ

ಕಸವನ್ನು ಸುಡಬೇಡಿ

ವೈದ್ಯಕೀಯ ತ್ಯಾಜ್ಯ, ಸ್ಯಾನಿಟರಿ ಪ್ಯಾಡ್‌ಗಳನ್ನು ಶೌಚಾಲಯದಲ್ಲಿ ಎಸೆಯಬೇಡಿ

ಬೆಂಗಳೂರು ನಮ್ಮ ಅಚ್ಚುಮೆಚ್ಚಿನ ನಗರ. ನಮ್ಮ ಮನೆಯನ್ನು ಮಾತ್ರ ಸ್ವಚ್ಛವಾಗಿ ಇಟ್ಟುಕೊಳ್ಳುವುದರಿಂದ ನಮ್ಮ ಬೀದಿಗಳು ಮತ್ತು ನೆರೆಹೊರೆಯೂ ಸಹ ಸ್ವಚ್ಛಮಯ ವಾಗಿರುತ್ತದೆ ಎಂದು ನಾವು ಖಚಿತಪಡಿಸಿಕೊಳ್ಳುವಂತಿಲ್ಲ. ನಮ್ಮ ಪರಿಸರವನ್ನು ಸ್ವಚ್ಛ ಮತ್ತು ಸುಂದರವಾಗಿ ಇಡಲು ನಮ್ಮಲ್ಲಿ ಪ್ರತಿಯೊಬ್ಬರೂ ತ್ಯಾಜ್ಯ ಯೋಧರಾಗಬೇಕು (Waste Warriors) ಮತ್ತು ನಮ್ಮೆಲ್ಲರ ಪ್ರಯತ್ನಗಳನ್ನು ಒಂದು ಅಭಿಯಾನವಾಗಿ ಪ್ರಾರಂಭಿಸುವ ಅಗತ್ಯ ಇದೆ.

ನಗರವನ್ನು ಸ್ವಚ್ಛವಾಗಿ ಮತ್ತು ಸುಂದರವಾಗಿಡಲು ಬಿಬಿಎಂಪಿ ಶಕ್ತಿಮೀರಿ ಪ್ರಯತ್ನಿಸುತ್ತಿದೆ.

ಆದರೆ, ಪ್ರತಿಯೊಬ್ಬ ನಾಗರಿಕರಿಂದ ಇನ್ನೂ ಹೆಚ್ಚಿನ ಪ್ರಯತ್ನವನ್ನು ನಿರೀಕ್ಷಿಸುತ್ತೇವೆ. ತ್ಯಾಜ್ಯ ಯೋಧರುಗಳು ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಎಸೆಯುವುದಿಲ್ಲವೆಂದು ತಿಳಿಸುತ್ತಾರೆ. ಇತರರಿಗೆ ತ್ಯಾಜ್ಯ ತೊಟ್ಟಿಗಳನ್ನು ಬಳಸುವ ಪ್ರಾಮುಖ್ಯತೆಯ ಬಗ್ಗೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ತಮ್ಮ ಮನೆಗಳಲ್ಲಿ ತ್ಯಾಜ್ಯವನ್ನು ಬೇರ್ಪಡಿಸುತ್ತಾರೆ.

ಒಂದು ಕೋಟಿಗೂ ಹೆಚ್ಚು ತ್ಯಾಜ್ಯ ಯೋಧರೊಂದಿಗೆ ಒಟ್ಟಾಗಿ ಕೆಲಸ ಮಾಡುವುದರಿಂದ ಖಂಡಿತವಾಗಿಯೂ ನಮ್ಮ ಉದ್ಯಾನ ನಗರಿಯ ಎಲ್ಲಾ ಗತ ವೈಭವವನ್ನು ಮರು ಸ್ಥಾಪಿಸಬಹುದು ಮತ್ತು ಅದಕ್ಕಿಂತ ಹೆಚ್ಚಿನದನ್ನು ಸಾಧಿಸಬಹುದು.



ಸ್ವಚ್ಛ ಸರ್ವೇಕ್ಷಣ್-2023 - ನಮ್ಮ ನಗರ ನಮ್ಮ ಹೆಮ್ಮೆ | ನಿಮ್ಮ ನಗರಕ್ಕೆ ಮತ ನೀಡಿ

ಸ್ವಚ್ಛ ಬೆಂಗಳೂರು, ಸ್ವಸ್ಥ ಬೆಂಗಳೂರು - ಆಗಲಿ ನಮ್ಮೆಲ್ಲರ ಉಸಿರು

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಆಡಳಿತಗಾರರು ಬಿಬಿಎಂಪಿ | ಮುಖ್ಯ ಆಯುಕ್ತರು ಬಿಬಿಎಂಪಿ

ಸಮರ್ಥರಿಗೆ ಟಿಕೆಟ್: ಗೆಲ್ಲಲು 'ಕೈ' ತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವ್ಯಾಪ್ತಿಯ 28 ಕ್ಷೇತ್ರಗಳಲ್ಲಿ, ಅತಿಹೆಚ್ಚು ಕ್ಷೇತ್ರಗಳನ್ನು ಗೆಲ್ಲಲು ಕಾರ್ಯತಂತ್ರ ರೂಪಿಸುತ್ತಿರುವ ಕಾಂಗ್ರೆಸ್ ನಾಯಕರು, ನಗರದ ಏಟ್ರಿಯಾ ಹೋಟೆಲ್‌ನಲ್ಲಿ ಸೋಮವಾರ ಸಭೆ ಸೇರಿ ಚರ್ಚೆ ನಡೆಸಿದರು.

ಬೆಂಗಳೂರಿನ ಎಲ್ಲ ಶಾಸಕರು, ವಿಧಾನಪರಿಷತ್ ಸದಸ್ಯರು, ಸಂಸದ ಡಿ.ಕೆ. ಸುರೇಶ್, ರಾಜ್ಯಸಭೆ ಸದಸ್ಯರು, ಬೆಂಗಳೂರು ವಿಭಾಗದ ಉಸ್ತುವಾರಿ ಹೊಂದಿರುವ ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ತ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಭೆಯಲ್ಲಿದ್ದರು. ಹಾಲಿ ಎಲ್ಲ ಶಾಸಕರಿಗೆ ಟಿಕೆಟ್ ನೀಡುವ ಜೊತೆಗೆ, ಇತರ ಕ್ಷೇತ್ರಗಳಲ್ಲಿ ಸಮರ್ಥರನ್ನು ಕಣಕ್ಕಿಳಿಸಲು ಸಭೆಯಲ್ಲಿ ಚರ್ಚೆ ನಡೆದಿದೆ.

'ಹೆಬ್ಬಾಳ (ಬೈರತಿ ಸುರೇಶ್), ಬಿಟಿಎಂ ಲೇಔಟ್ (ರಾಮಲಿಂಗಾರೆಡ್ಡಿ), ಜಯನಗರ (ಸೌಮ್ಯಾರೆಡ್ಡಿ,) ಶಿವಾಜಿನಗರ (ರಿಜ್ವಾನ್ ಅರ್ಷದ್), ಪುಲಕೇಶಿನಗರ (ಅಖಂಡ ಶ್ರೀನಿವಾಸಮೂರ್ತಿ), ಸರ್ವಜ್ಞನಗರ (ಕೆ.ಜೆ. ಜಾರ್ಜ್), ಶಾಂತಿನಗರ (ಎನ್.ಎ. ಹ್ಯಾರೀಸ್), ಚಾಮರಾಜಪೇಟೆ (ಜಮೀರ್ ಅಹ್ಮದ್), ಬ್ಯಾಟರಾಯನಪುರ (ಕೃಷ್ಣ ಬೈರೇಗೌಡ), ವಿಜಯನಗರ (ಎಂ. ಕೃಷ್ಣಪ್ಪ), ಆನೇಕಲ್ (ಬಿ. ಶಿವಣ್ಣ) ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿದ್ದು, ಅವರಿಗೇ ಟಿಕೆಟ್ ಖಚಿತವಾಗಿದೆ. ಗೋವಿಂದರಾಜ ನಗರ (ಪ್ರಿಯಾಕೃಷ್ಣ), ಆರ್.ಆರ್. ನಗರ (ಕುಸುಮಾ ಎಚ್.) ಕ್ಷೇತ್ರದಲ್ಲಿ ಕಳೆದ ಚುನಾವಣೆಯಲ್ಲಿ ಸೋಲು ಕಂಡವರಿಗೇ ಟಿಕೆಟ್ ಬಹುತೇಕ ಖಚಿತವಾಗಿದೆ. ಬಸವನಗುಡಿಯಿಂದ ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಕಣಕ್ಕಿಳಿಯುವ ಸಾಧ್ಯತೆಯಿದೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಪದ್ಮನಾಭನಗರ ಕ್ಷೇತ್ರಕ್ಕೆ ರಘುನಾಥ ನಾಯ್ಡು, ಗುರುವಪ್ಪ ನಾಯ್ಡು, ಬೊಮ್ಮನಹಳ್ಳಿಗೆ ಉಮಾಪತಿ ಶ್ರೀನಿವಾಸಗೌಡ ಮತ್ತು ಕವಿತಾ ರೆಡ್ಡಿ, ದಾಸರಹಳ್ಳಿಗೆ ಧನಂಜಯ, ಎಚ್.ಎಂ. ರೇವಣ್ಣ, ನಾಗಲಕ್ಷ್ಮಿ ಚೌಧುರಿ, ಮಲ್ಲೇಶ್ವರಕ್ಕೆ ರಶ್ಮಿ ರವಿಕಿರಣ್, ಅನೂಪ್ ಅಯ್ಯಂಗಾರ್, ರಾಜಾಜಿನಗರಕ್ಕೆ ರಘುವೀರ್ ಎಸ್. ಗೌಡ, ಜಿ. ಪದ್ಮಾವತಿ, ಬಿ.ಎಸ್. ಪುಟ್ಟರಾಜು, ಮನೋಹರ್, ಕೆ.ಆರ್.ಪುರಕ್ಕೆ ಎಂ.ನಾರಾಯಣಸ್ವಾಮಿ ಮತ್ತು ಡಿ.ಕೆ. ಮೋಹನ್, ಸಿ.ವಿ. ರಾಮನ್ ನಗರಕ್ಕೆ ಆನಂದ್‌ಕುಮಾರ್, ಸಂಪತ್‌ರಾಜ್, ವಿ. ಶಂಕರ್, ಮಹದೇವಪುರಕ್ಕೆ ಎಚ್. ನಾಗೇಶ್, ಚಿಕ್ಕಪೇಟೆಗೆ ಆರ್.ವಿ. ದೇವರಾಜ್, ಗಂಗಾಂಬಿಕೆ ಹಾಗೂ ಬೆಂಗಳೂರು ದಕ್ಷಿಣಕ್ಕೆ ಆರ್.ಕೆ. ರಮೇಶ್ ಅವರ ಹೆಸರು ಸಂಭವನೀಯ ಅಭ್ಯರ್ಥಿಗಳ ಪಟ್ಟಿಯಲ್ಲಿದೆ. ಯಲಹಂಕ, ಯಶವಂತಪುರ ಮತ್ತು ಮಹಾಲಕ್ಷ್ಮೀ ಲೇಔಟ್ ಕ್ಷೇತ್ರಕ್ಕೆ ಅಭ್ಯರ್ಥಿ ಹೆಸರು ಚರ್ಚೆಯಲ್ಲಿದೆ' ಎಂದೂ ಮೂಲಗಳು ಹೇಳಿವೆ.

'ಕೆ-ಸೆಟ್ ಉತ್ತರಪತ್ರಿಕೆ ವೆಬ್‌ಸೈಟ್‌ನಲ್ಲಿ ಲಭ್ಯ'

ಬೆಂಗಳೂರು: 'ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಲಿರುವ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆ-ಸೆಟ್) ಉತ್ತರ ಪತ್ರಿಕೆಗಳ ಒಎಂಆರ್ ಶೀಟ್‌ಗಳನ್ನು ಸಾರ್ವಜನಿಕ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಇದರಿಂದ ಅಕ್ರಮಗಳಿಗೆ ಕಡಿವಾಣ ಬೀಳಲಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಮಧು ಜಿ. ಮಾದೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಸಹಾಯಕ ಪ್ರಾಧ್ಯಾಪಕರು ಗುಣಮಟ್ಟದ ಪರೀಕ್ಷಾ ಪದ್ಧತಿಯಲ್ಲಿ ಆಯ್ಕೆಯಾಗಬೇಕು' ಎಂದರು.

ಶಿವಮೂರ್ತಿ ಶರಣರ ಅರ್ಜಿ 16ಕ್ಕೆ ಮುಂದೂಡಿಕೆ

ಬೆಂಗಳೂರು: 'ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ ಅಡಿಯಲ್ಲಿ ಬಂಧನಕ್ಕೊಳಗಾದ ಮಠದ ಪೀಠಾಧಿಪತಿಗಳ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿದ ಬಗ್ಗೆ ಯಾವುದಾದರೂ ಹೈಕೋರ್ಟ್, ಸುಪ್ರೀಂ ಕೋರ್ಟ್, ಸಂಸತ್ತಿನ ಚರ್ಚೆ ಇಲ್ಲವೇ ಕಾನೂನು ಆಯೋಗಗಳು ನೀಡಿರುವ ಅಭಿಪ್ರಾಯ, ತೀರ್ಪು ಅಥವಾ ವರದಿಗಳಿದ್ದರೆ ಅವುಗಳನ್ನು ಹಾಜರುಪಡಿಸಿ' ಎಂದು ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ಪರ ವಕೀಲರಿಗೆ ಹೈಕೋರ್ಟ್ ಆದೇಶಿಸಿದೆ.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೊಕ್ಸೊ), ಅತ್ಯಾಚಾರ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯಾಗಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿರುವ ಚಿತ್ರದುರ್ಗ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಶರಣರ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ. ನಾಗೇಶ್ ಅವರು, 'ತನಿಖಾಧಿಕಾರಿ ನ್ಯಾಯಾಲಯಕ್ಕೆ ಕೇವಲ ಅಂತಿಮ ವರದಿ ಸಲ್ಲಿಸಿದ್ದಾರೆ. ಈ ವರದಿ ಆಧರಿಸಿ ಕೆಲವರು ನ್ಯಾಯಾಲಯದ ಮೆಟ್ಟಿಲೇರಿ ಅಧಿಕಾರ ನಿರ್ಬಂಧಿಸುವಂತೆ ಕೋರಿರುವುದು ಮತ್ತು ಇದನ್ನು ಮಾನ್ಯ ಮಾಡಿ ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ–1988ರ ಕಲಂ 8 (2)ರ ಅನ್ವಯ ಶರಣರು ತಮ್ಮ ಅಧಿಕಾರ ಚಲಾಯಿಸಲು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ನಿರ್ಬಂಧ ವಿಧಿಸಿರವುದು ಸಂಪೂರ್ಣ ಕಾನೂನು ಬಾಹಿರ' ಎಂದು ಪ್ರತಿಪಾದಿಸಿದರು.

ಕೋರ್ಟ್ ಕಲಾಪದ ಅವಧಿ ಮೀರುತ್ತಿದ್ದ ಕಾರಣ ವಾದ ಮಂಡನೆ ಅಪೂರ್ಣಗೊಂಡಿದ್ದು, ವಿಚಾರಣೆಯನ್ನು ಫೆಬ್ರುವರಿ 16ಕ್ಕೆ ಮುಂದೂಡಲಾಗಿದೆ.

ಪತ್ರ ಬರೆಯುವ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ ಸಾನ್ವಿ ಅವರಿಗೆ ಸೋಮವಾರ ಅಂಚೆ ಅಧೀಕ್ಷಕ ಹರೀಶ್ ಅವರು ಬಹುಮಾನ ವಿತರಿಸಿದರು. ಸಹಾಯಕ ಅಧೀಕ್ಷಕಿ ರೇಖಾ ಇದ್ದಾರೆ.

ಪತ್ರ ಸ್ಪರ್ಧೆ: ಸಾನ್ವಿ ದ್ವಿತೀಯ

ಬೆಂಗಳೂರು: ಅಂಚೆ ಇಲಾಖೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪತ್ರ ಬರೆಯುವ ಸ್ಪರ್ಧೆಯಲ್ಲಿ ಬಸವನಗುಡಿ ಶಂಕರಪುರಂನ ಜ್ಞಾನೋದಯ ಶಾಲೆಯ ಬಿ.ಸಾನ್ವಿ ದ್ವಿತೀಯ ಬಹುಮಾನ ಪಡೆದಿದ್ದಾರೆ.

ಭಾರತದ ಮುನ್ನೋಟ– 2047ರ ಅಂಗವಾಗಿ ಮಕ್ಕಳಲ್ಲಿ ಪತ್ರ ಬರೆಯುವ ಹವ್ಯಾಸ ರೂಢಿಸಲು ರಾಷ್ಟ್ರಮಟ್ಟದಲ್ಲಿ 'ಢೈ ಅಖರ್' ಪತ್ರ ಬರೆಯುವ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಅದರ ಅಂಗವಾಗಿ ಬೆಂಗಳೂರು ದಕ್ಷಿಣ ವಿಭಾಗದ ಅಂಚೆ ಕಚೇರಿ ಈಚೆಗೆ ರಾಜ್ಯಮಟ್ಟದ ಸ್ಪರ್ಧೆ ಆಯೋಜಿಸಿತ್ತು. ಬಹುಮಾನ ವಿಜೇತರನ್ನು ಸೋಮವಾರ ಅಭಿನಂದಿಸಲಾಯಿತು.

ದುಡಿದು ಜೀವನಾಂಶ ನೀಡಿ, ಸಬೂಬು ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತ್ನಿ ಮತ್ತು ಮಗುವಿಗೆ ಜೀವನಾಂಶ ನೀಡುವುದು ಪತಿಯ ಕರ್ತವ್ಯ. ಒಂದು ವೇಳೆ ಪತಿಗೆ ಕೆಲಸವಿಲ್ಲದಿದ್ದರೆ, ಕೆಲಸ ಹುಡುಕಿಕೊಂಡು ಜೀವನಾಂಶ ನೀಡಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಪತ್ನಿ ಹಾಗೂ ಮಗುವಿಗೆ ಜೀವನಾಂಶ ನೀಡುವಂತೆ ಮೈಸೂರಿನ ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಪತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಎಂ.ನಾಗಪ್ರಸನ್ನ ಅವರಿದ್ದ ಏಕ ಸದಸ್ಯಪೀಠ ವಜಾಗೊಳಿಸಿದೆ.

'ನನಗೆ ಸರಿಯಾದ ಉದ್ಯೋಗವಿಲ್ಲ. ಯಕೃತ್ ಸಂಬಂಧಿತ ಕಾಯಿಲೆಯಿಂದ ನರಳುತ್ತಿದ್ದೇನೆ. ನನ್ನ ತಿಂಗಳ ಸಂಪಾದನೆ ₹ 15 ಸಾವಿರಕ್ಕಿಂತ ಹೆಚ್ಚಿಲ್ಲ. ಹಾಗಾಗಿ ಜೀವನಾಂಶ ಪಾವತಿಸಲು ಸಾಧ್ಯವಿಲ್ಲ' ಎಂಬ ಪತಿಯ ವಾದವನ್ನು ನ್ಯಾಯಪೀಠ ತಳ್ಳಿಹಾಕಿದೆ.

'ದುಡಿಯಲು ಸಮರ್ಥನಿರುವ ಪತಿ ಉದ್ಯೋಗ ಇಲ್ಲ ಎಂದಾದರೆ ಯಾವುದಾದರೂ ಬೇರೆ ಉದ್ಯೋಗವನ್ನು ಹುಡುಕಿಕೊಳ್ಳಬೇಕು. ಆ ಮೂಲಕ ಪತ್ನಿ ಹಾಗೂ ಮಗುವಿಗೆ ಜೀವನಾಂಶ ನೀಡಲೇಬೇಕು' ಎಂದು ನ್ಯಾಯಪೀಠ ತಾಕೀತು ಮಾಡಿದೆ. ಸಿಆರ್‌ಪಿಸಿ ಕಲಂ 125ರಡಿ ಪತ್ನಿಗೆ ₹ 6 ಸಾವಿರ, ಮಗುವಿಗೆ ₹ 4 ಸಾವಿರ ಜೀವನಾಂಶ ನೀಡುವಂತೆ ಆದೇಶಿಸಿದೆ.

ನಗರದಲ್ಲಿ ಇಂದು

'ಅಂಗಾಂಗ ದಾನ' ಜಾಗೃತಿ ವಾಕಥಾನ್: ಚಾಲನೆ: ಡಾ. ಮನೀಶ್ ಮಟ್ಟೋ, ಅತಿಥಿಗಳು: ಡಾ. ಮನೋಹರ್ ಟಿ., ಡಾ. ವಸಂತ ಕುಮಾರ್, ಡಾ. ನವೀನ್ ಎಂ. ನಾಯಕ್, ಡಾ. ಅರುಣ್ ಕುಮಾರ್ ಎನ್., ಆಯೋಜನೆ: ಅಪೊಲೋ ಆಸ್ಪತ್ರೆ, ಸ್ಥಳ: ಸರ್ಕಾರಿ ಶಾಲೆ ಮೈದಾನ, ಮಲ್ಲೇಶ್ವರ, ಬೆಳಿಗ್ಗೆ 10

ಪ್ರವಚನ ವಾಹಿನಿ ಕಾರ್ಯಕ್ರಮ: 'ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಹಾಗೂ ಪ್ರವಚನ' ಕುರಿತು ಉಪನ್ಯಾಸ: ಅರಳು ಮಲ್ಲಿಗೆ ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಪ್ರೀತಿಯ ಹಬ್ಬ: ಸಂಗೀತ– ನೀಲಿಮಾ ಪಿ. ಆರ್ಯನ್, ಪ್ರೀತಿಯೂ ರಾಜಕೀಯವೇ– ಸುನಿಲ್ ಮೋಹನ್, ಅರವಿಂದ್ ನರೇನ್, ಒಲವಿನ ಓದು–ಮಮತಾ ಸಾಗರ್, ದು. ಸರಸ್ವತಿ, ಪ್ರೇಮಕಾವ್ಯ–ವಿವಿಧ ಕವಿಗಳು. ಆಯೋಜನೆ–ಮರ, ಕ್ವೀರ್ ಕಲೆಕ್ಟಿವ್, ಸ್ಥಳ ಮರ, ಇಂದಿರಾನಗರ, ಸಂಜೆ 6



'ಏರೋ ಇಂಡಿಯಾ–2023'ರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ವಿದೇಶಿ ಪ್ರತಿನಿಧಿಗಳು ಚರ್ಚೆಯಲ್ಲಿ ತೊಡಗಿದ್ದರು (ಎಡಚಿತ್ರ) ವೈಮಾನಿಕ ಪ್ರದರ್ಶನದಲ್ಲಿ ಕಸರತ್ತು ನಡೆಸಿದ ಯುದ್ಧ ವಿಮಾನಗಳು

ರಕ್ಷಣಾ ಉಪಕರಣಗಳ ಸಾಮರ್ಥ್ಯ ಅನಾವರಣ

ಮೊದಲ ದಿನ 700ಕ್ಕೂ ಹೆಚ್ಚು ಕಂಪನಿಗಳು ಭಾಗಿ • ಲಘು ಯುದ್ಧ ವಿಮಾನಗಳ ಕಾರ್ಯಾಚರಣೆ, ಸಾಮರ್ಥ್ಯದ ಮಾಹಿತಿ ಪಡೆದ ಪ್ರೇಕ್ಷಕರು

• ಆದಿತ್ಯ ಕೆ.ಎ.

ಬೆಂಗಳೂರು: ಇಲ್ಲಿನ ಯಲಹಂಕದ ವಾಯುನೆಲೆಯಲ್ಲಿ ಆರಂಭವಾಗಿರುವ 'ಏರೋ ಇಂಡಿಯಾ' ಪ್ರದರ್ಶನದಲ್ಲಿ ದೇಶ, ವಿದೇಶಗಳ ವೈಮಾನಿಕ ಹಾಗೂ ರಕ್ಷಣಾ ಪರಿಕರಗಳು ಮೇಳೈಸಿ, ಈ ಕ್ಷೇತ್ರದ ಸಾಮರ್ಥ್ಯವನ್ನು ಅನಾವರಣ ಮಾಡಿವೆ.

ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಉಪಕರಣ ಖರೀದಿ, ಒಡಂಬಡಿಕೆ ಹಾಗೂ ತಂತ್ರಜ್ಞಾನದ ತಿಳಿವಳಿಕೆಗೆ ಈ ಪ್ರದರ್ಶನವು ವೇದಿಕೆ ಒದಗಿಸುತ್ತಿದೆ.

ರಷ್ಯಾ, ಫ್ರಾನ್ಸ್, ಇಸ್ರೇಲ್ ಸೇರಿದಂತೆ ಹಲವು ರಾಷ್ಟ್ರಗಳ ರಕ್ಷಣಾ ಉಪಕರಣಗಳ ಮಾದರಿಗಳು ಪ್ರದರ್ಶನ ಮಳಿಗೆಯಲ್ಲಿವೆ. ಐದು ದಿನಗಳ ಕಾಲ ನಡೆಯುವ ಪ್ರದರ್ಶನದಲ್ಲಿ, ಮೊದಲ ದಿನವಾದ ಸೋಮವಾರ 700ಕ್ಕೂ ಹೆಚ್ಚು ಕಂಪನಿಗಳು ಬಂದಿದ್ದವು. ಮಂಗಳವಾರ ಮತ್ತಷ್ಟು ಪ್ರದರ್ಶಕರು ಪಾಲ್ಗೊಳ್ಳಲಿದ್ದಾರೆ ಎಂದು ಆಯೋಜಕರು ತಿಳಿಸಿದರು.

ಅತ್ತ ಸೂರ್ಯಕಿರಣ್, ಸುಖೋಯ್, ತೇಜಸ್, 'ಪ್ರಚಂಡ' ಬಾನೆತ್ತರದಲ್ಲಿ ಚಿತ್ತಾರ ಮೂಡಿಸಿದ್ದನ್ನು ಕಣ್ರೆಪ್ಪೆ ಮುಚ್ಚದೆಯೇ ನೋಡಿದ್ದ ಪ್ರೇಕ್ಷಕರು ಪ್ರದರ್ಶನ ಮಳಿಗೆಗಳತ್ತ ಲಗ್ಗೆಯಿಟ್ಟರು.

ಭಾರತದ ಪ್ರದರ್ಶನ ಮಳಿಗೆಯ ಬಳಿ ಇರಿಸಲಾಗಿದ್ದ ಎಚ್‌ಎಎಲ್‌ನ ಪ್ರಚಂಡ ಹೆಲಿಕಾಪ್ಟರ್ ಆಕರ್ಷಣೆಯಾಗಿತ್ತು. ಆ ಹೆಲಿಕಾಪ್ಟರ್ ಎದುರು ಪ್ರೇಕ್ಷಕರು ನಿಂತು ಫೋಟೊ ತೆಗೆಸಿಕೊಂಡು ಸಂಭ್ರಮಿಸಿದರು.

ಇಸ್ರೇಲ್ ವೈಮಾನಿಕ ಸಂಸ್ಥೆ, ಬ್ರಹ್ಮೋಸ್ ಏರೋಸ್ಪೇಸ್, ಆರ್ಮಿ ಏವಿಯೇಷನ್, ಎಚ್.ಸಿ.ರೊಬೊಟಿಕ್ಸ್, ಎಚ್‌ಎಎಲ್, ಬಿಇಎಲ್, ಬಿಇಎಂಎಲ್... ಹೀಗೆ ನಾನಾ ಸಂಸ್ಥೆಗಳ ಮಳಿಗೆಗಳಿವೆ. ಈ ಸಂಸ್ಥೆಗಳು ತಯಾರಿಸಿದ ರಕ್ಷಣಾ ಉಪಕರಣಗಳು ಪ್ರದರ್ಶನಕ್ಕೆ ಇಡಲಾಗಿದೆ.

ದೇಶ ಹಾಗೂ ವಿದೇಶದ ಲಘು ಯುದ್ಧ ವಿಮಾನ (ಎಲ್.ಸಿ.ಎ) ಹಾಗೂ ಲಘು ಯುಟಿಲಿಟಿ ಹೆಲಿಕಾಪ್ಟರ್, ಯುದ್ಧ ಟ್ಯಾಂಕರ್ ಮಾದರಿಗಳು ಇವೆ. ಅವುಗಳ ಕಾರ್ಯಕ್ಷಮತೆ, ವೇಗ, ಕಾರ್ಯಾಚರಣೆಯ ಬಗ್ಗೆ ಪ್ರೇಕ್ಷಕರು ಮಾಹಿತಿ ಪಡೆದುಕೊಂಡರು.

ರಸ್ತೆಯ ಬದಿಯಲ್ಲೂ ವೀಕ್ಷಣೆ: ಬಾನಂಗಳದಲ್ಲಿ ಹೆಲಿಕಾಪ್ಟರ್‌ಗಳು ಕಸರತ್ತು ನಡೆಸಿದ್ದು ಬಳ್ಳಾರಿ ರಸ್ತೆಗೂ ಕಾಣಿಸುತ್ತಿತ್ತು. ಸಾವಿರಾರು ಜನರು ರಸ್ತೆಯ ಎರಡೂ ಬದಿಯಲ್ಲಿ ನಿಂತು ವೈಮಾನಿಕ ಕಸರತ್ತು ವೀಕ್ಷಿಸಿದರು. ಫೆ.17ರ ವರೆಗೆ ಈ ವೈಮಾನಿಕ ಪ್ರದರ್ಶನ ನಡೆಯಲಿದೆ. ಫೆ.16 ಹಾಗೂ 17ರಂದು ಮಾತ್ರ ಸಾರ್ವಜನಿಕರಿಗೆ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.

ವೈಮಾನಿಕ ಪ್ರದರ್ಶನದಲ್ಲಿ ಸೋಮವಾರ ಸೂರ್ಯಕಿರಣ್ ವಿಮಾನಗಳ ಕಸರತ್ತು ಮೈನವಿರೇಳಿಸಿತು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

2023 ಏರೋ ಇಂಡಿಯಾ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಎಲ್ಲೆಲ್ಲೂ ಮೋದಿ ಫೋಟೊ

ಯಲಹಂಕದ ವಾಯುನೆಲೆಯ ಎಲ್ಲೆಡೆ ಪ್ರಧಾನಿ ನರೇಂದ್ರ ಮೋದಿ ಅವರ ಫೋಟೊಗಳು ರಾರಾಜಿಸುತ್ತಿದ್ದವು. ಊಟದ ಕೌಂಟರ್, ಪ್ರದರ್ಶನ ಮಳಿಗೆ, ಪ್ರವೇಶ ದ್ವಾರ, ವೈಮಾನಿಕ ಪ್ರದರ್ಶನ ನಡೆದ ಆವರಣದ ಬಳಿ ಹಾಕಲಾಗಿದ್ದ ಬೃಹತ್ ಫ್ಲೆಕ್ಸ್‌ಗಳಲ್ಲಿ ಮೋದಿ ಫೋಟೊ ಹಾಕಲಾಗಿತ್ತು.

ಉದ್ಘಾಟನೆಗೆ ಪ್ರಧಾನಿ ಆಗಮಿಸಿದ್ದ ಕಾರಣಕ್ಕೆ ವಾಯುನೆಲೆಯ ಸುತ್ತಲೂ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಮೂರು ಹಂತದಲ್ಲಿ ಪ್ರೇಕ್ಷಕರನ್ನು ತಪಾಸಣೆ ನಡೆಸಿ, ವೈಮಾನಿಕ ಪ್ರದರ್ಶನಕ್ಕೆ ಸ್ಥಳಕ್ಕೆ ಬಿಡಲಾಯಿತು. ಲಗೇಜ್ ಸ್ಕ್ರೀನಿಂಗ್ ವ್ಯವಸ್ಥೆಯಿತ್ತು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ವಿದೇಶಿ ವಿಮಾನಗಳ ಪ್ರದರ್ಶನ ಇರಲಿಲ್ಲ. ಮೊದಲ ದಿನ ನಮ್ಮ ದೇಶದ ಲಘು ವಿಮಾನ ಹಾಗೂ ಹೆಲಿಕಾಪ್ಟರ್ ಪ್ರದರ್ಶನ ಮನಸೂರೆಗೊಳಿಸಿತು

ಉಲ್ಲಾಳ್, ಮಂಗಳೂರು

ಏರೋ ಇಂಡಿಯಾ ಯಶಸ್ಸು ಮೋದಿಗೆ: ಕಾಂಗ್ರೆಸ್ ವ್ಯಂಗ್ಯ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್, 'ಫ್ಯಾನ್ಸಿ ಡ್ರೆಸ್‌ನಲ್ಲಿರುವ ಮನುಷ್ಯ' ಏರೋ ಇಂಡಿಯಾದ ಹಿರಿಮೆ ತನ್ನದೆಂದು ಹೇಳಿಕೊಂಡಿದ್ದಾರೆ ಎಂದು ಹೇಳಿದೆ.

ಯಲಹಂಕ ವಾಯುನೆಲೆಯಲ್ಲಿ ಏರೋ ಇಂಡಿಯಾದ 14ನೇ ಆವೃತ್ತಿಯನ್ನು ಪ್ರಧಾನಿ ಮೋದಿ ಉದ್ಘಾಟಿಸಿದ ನಂತರ ಪ್ರತಿಪಕ್ಷ ವಾಗ್ದಾಳಿ ನಡೆಸಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಏರೋ ಇಂಡಿಯಾ ವೈಮಾನಿಕ ಪ್ರದರ್ಶನದ ಯಶಸ್ಸು ತನ್ನದೆಂದು ಫ್ಯಾನ್ಸಿ ಡ್ರೆಸ್ ಧರಿಸಿದ ವ್ಯಕ್ತಿ ಹೇಳಿಕೊಂಡಿದ್ದಾರೆ. ಸತ್ಯವೇನೆಂದರೆ ಇದು 1996 ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಯಿತು ಮತ್ತು ನಂತರದ ವರ್ಷಗಳಲ್ಲಿ ಬಲ ಪಡೆದುಕೊಂಡಿತು. ನೆಹರೂ ಯುಗದ ಮೂಲ ಪತ್ತೆ ಹಚ್ಚುವ ಸಂಸ್ಥೆಗಳ ಉಪಸ್ಥಿತಿಯಿಂದಾಗಿ ಇದನ್ನು ಬೆಂಗಳೂರಿನಲ್ಲಿ ನಡೆಸಲಾಗುತ್ತದೆ' ಎಂದು ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT
And Finance Available
On Low Interest
Against Properties,
Land&
Building,Sites,Flats,
Converted&
Agriculture Lands
Call:7204995189

WANTED BUSINESS
Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

REAL ESTATE SELLING

Commerical

Mysore

PRIME COMMERCIAL
converted property 88400 Square Feet on Mysore express highway near Mysore is for sale contact 9731433641 / 9741019028

OTHERS

For Sale

IMMEDIATE SALE LEATHER SOFA DIWAN TEAK DINING COT MATTRESS ALL NEW CONDITION. Call: 9845414482/ 7975436976

PERSONAL

Change of Name

CHANGE OF NAME
I, JAGADEESH KUMAR B G Residing at B007, Baldota Elegant, NGEF Layout, Marathahalli, Bangalore North, Bangalore-560056, have changed my name to **JAGADISH KUMAR B G** vide affidavit dated 31.01.2023, before notary Devaraja.E, Bangalore. Henceforth I shall be called **JAGADISH KUMAR B G** only.

I, YATISH KUMAR VYAS and father of LIKITH VYAS previously called LIKITH, R/at No.407, JR Layout, Chelekere, Kalyananagar, Bangalore-560043, Karnataka, have changed my minor son's name from LIKITH to LIKITH VYAS vide affidavit dated: 13.02.2023 before notary A.S.NARAYANA REDDY, Bangalore

Book Your Classifieds Ads
Online
Log in to
dhclassifieds.com

DH DECCAN HERALD
ಪ್ರಜಾವಾಣಿ

Contact :
9845114560 : 9731810277
9901641752 : 9886213331
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement.
This newspaper does not vouch or subscribe to the claims and representations made by advertisers.
GM-Advertisement

ಗಡಿಪ್ರದೇಶಕ್ಕೆ 50 ಕೆ.ಜಿಯಷ್ಟು ಆಹಾರ ಸಾಗಣೆ ಸಾಮರ್ಥ್ಯ • ಬೆಂಗಳೂರಿನ ಸ್ಕ್ಯಾನ್‌ಡ್ರೋನ್ ಕಂಪನಿ ಆವಿಷ್ಕಾರ

ಯೋಧರಿಗೆ ಆಹಾರ ಪೂರೈಸಲು 'ಕಾರ್ಗೊ ಡ್ರೋನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಬೆಳೆಗಳಿಗೆ ತಗುಲಿದ್ದ ರೋಗ ನಿವಾರಿಸಲು ಔಷಧಿ ಸಿಂಪಡಣೆಗೆ ನೆರವಾಗಿದ್ದ ಡ್ರೋನ್, ಈಗ ಗಡಿಪ್ರದೇಶದಲ್ಲಿ ದೇಶ ಕಾಯುತ್ತಿರುವ ಯೋಧರಿಗೂ ಅಗತ್ಯ ವಸ್ತುಗಳನ್ನು ಪೂರೈಸಲು ಕಾರ್ಗೊ ರೂಪದಲ್ಲಿ ಆವಿಷ್ಕಾರಗೊಂಡಿದೆ. ಅದು ಏರೋ ಇಂಡಿಯಾ 2023ರಲ್ಲಿ ರಕ್ಷಣಾ ಕ್ಷೇತ್ರದ ಗಮನ ಸೆಳೆಯುತ್ತಿದೆ.

ಎತ್ತರದ ಬೆಟ್ಟದ ತುದಿಮುಟ್ಟುವ ಸಾಮರ್ಥ್ಯದ ಡ್ರೋನ್, ಯಲಹಂಕದ ವಾಯುನೆಲೆಯಲ್ಲಿ ನಡೆಯುತ್ತಿರುವ ಏರೋ ಇಂಡಿಯಾಕ್ಕೂ ಬಂದಿದೆ.

ಈ ಡ್ರೋನ್ ಯೋಧರು ಕಾರ್ಯ ನಿರ್ವಹಿಸುವ ಸ್ಥಳಕ್ಕೆ ಆಹಾರ, ನೀರು ಸೇರಿದಂತೆ ಅಗತ್ಯ ಸಾಮಗ್ರಿಗಳನ್ನು ಸುಲಭವಾಗಿ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ ಎಂದು ಹೇಳುತ್ತಾರೆ ಪ್ರದರ್ಶಕರು.

ವಿವಿಧ ರಾಜ್ಯಗಳು, ವಿದೇಶದ ಕಂಪನಿಗಳ ರಕ್ಷಣಾ ಸಾಮಗ್ರಿಗಳ ನಡುವೆ ಬೆಂಗಳೂರಿನ ಸ್ಕ್ಯಾನ್‌ಡ್ರೋನ್ ಕಂಪನಿ ಆವಿಷ್ಕರಿಸಿದ ಕಾರ್ಗೊ ಡ್ರೋನ್ ಪ್ರದರ್ಶನ ಮಳಿಗೆಯಲ್ಲಿದೆ. ಈ ಕಂಪನಿ ನಗರದ ವೈಟ್‌ಫೀಲ್ಡ್ ಬಳಿಯಿದ್ದು, ದೇಶದ ರಕ್ಷಣಾ ಇಲಾಖೆ ನಡೆಸಿದ ಬಿಡ್ಡಿಂಗ್‌ನಲ್ಲಿ ಡ್ರೋನ್ ಪೂರೈಸಲು ಆಯ್ಕೆಯಾಗಿದೆ. ಅಂತಿಮ ಹಂತದ ಒಡಂಬಡಿಕೆ ಬಾಕಿಯಿದೆ ಎಂದು ಸಂಸ್ಥೆಯ ಮಾರುಕಟ್ಟೆ ವಿಭಾಗದ ಮುಕೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಒಂದು ಡ್ರೋನ್‌ಗೆ ₹ 1 ಕೋಟಿಗೂ ಹೆಚ್ಚು ಬೆಲೆಯಿದೆ. 50 ಕೆ.ಜಿ ಸಾಮರ್ಥ್ಯದ ಪದಾರ್ಥಗಳನ್ನು ಸುಲಭವಾಗಿ ಕೊಂಡೊಯ್ಯಲಿದೆ. ಬ್ಯಾಟರಿ ಆಧರಿಸಿ ಡ್ರೋನ್ ಚಲಿಸುತ್ತದೆ. ಒಮ್ಮೆ ರೀಚಾರ್ಜ್ ಮಾಡಿದರೆ, 30 ಕಿ.ಮೀನಷ್ಟು ದೂರ ಕ್ರಮಿಸಲಿದೆ' ಎಂದು ಅವರು ಹೇಳುತ್ತಾರೆ.

'ಗಡಿಯಲ್ಲಿ ಮಳೆ, ಚಳಿ, ಬಿಸಿಲನ್ನೂ ಲೆಕ್ಕಿಸದೆ ಯೋಧರು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ. ಗಡಿಭಾಗದಲ್ಲಿ ರಸ್ತೆ ಮಾರ್ಗವಿಲ್ಲದ ಕಾರಣಕ್ಕೆ ಆಹಾರ ಪೂರೈಕೆ ಈಗಲೂ ಕಷ್ಟವಾಗುತ್ತಿದೆ. ಈ ಸಂಕಷ್ಟ ನಿವಾರಣೆ ಮಾಡಬೇಕು, ಯೋಧರಿಗೆ ಬಿಸಿಯಾದ ಆಹಾರ ತಕ್ಷಣವೇ ದೊರೆಯಬೇಕು ಎಂಬ ಉದ್ದೇಶದಿಂದ ಈ ಪುಟ್ಟ ಯಂತ್ರ ಆವಿಷ್ಕಾರ ಮಾಡಲಾಗಿದೆ. ರೈತರೂ ಕೃಷಿ ಪದಾರ್ಥಗಳ ಸಾಗಣೆಗೆ ಈ ಡ್ರೋನ್ ಬಳಕೆ ಮಾಡಿಕೊಳ್ಳಬಹುದು' ಎಂದು ಆಪರೇಟರ್ ಪುನೀತ್ ಅವರು ಹೇಳಿದರು.

'ಏರೋ ಇಂಡಿಯಾ–2023'ರ ಪ್ರದರ್ಶನ ಮಳಿಗೆಯಲ್ಲಿ ಇರಿಸಲಾಗಿದ್ದ ಡ್ರೋನ್ (ಎಡಚಿತ್ರ) ಎಫ್–35 ಯುದ್ಧ ವಿಮಾನ – ಪ್ರಜಾವಾಣಿ ಚಿತ್ರಗಳು



ರಷ್ಯಾ ಕಂಪನಿಯ ಮಾದರಿಗಳನ್ನು ಜನರು ವೀಕ್ಷಿಸಿದರು (ಎಡಚಿತ್ರ) ಏರೋಸ್ಪೇಸ್ ಟೆಕ್ನಾಲಜೀಸ್‌ನ ವಿನಾಯಕ್ ಹಾಗೂ ಮಾನಸ ಅವರು ನವೋದ್ಯಮದ ಅಡಿ ತಯಾರಿಸಿದ ಉಪಕರಣದ ಮಾಹಿತಿ ನೀಡಿದರು

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052. ದೂರವಾಣಿ: 22263479

ಸಂಖ್ಯೆ: STRRPA/TP/CLU/164/2022-23 ದಿನಾಂಕ: 13–02–2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ಕೈಗಾರಿಕೆ'** ವಲಯದಿಂದ **'ವಾಣಿಜ್ಯ'** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ರಮೇಶ್ ಎಂ. ಬಿನ್ ಮುನಿರೆಡ್ಡಿ ಎಂ., #52, ಕಾಡ ಅಗ್ರಹಾರ ಸರ್ಜಾಪುರ ಹೋಬಳಿ, ಬೆಂಗಳೂರು ನಗರ ಜಿಲ್ಲೆ.	ಆನೇಕಲ್	ಸರ್ಜಾಪುರ	ತಿಂಡ್ಲು	120/1	1–20 ಪೈಕಿ 0–20	ಕೈಗಾರಿಕೆ	ವಾಣಿಜ್ಯ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳು ಭೂಉಪಯೋಗ ಬದಲಾವಣೆಯಿಂದ ಉದ್ಯೋಗ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಕೈಗಾರಿಕೆ ವಲಯ'** ದಿಂದ **'ವಾಣಿಜ್ಯ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾ.ಪ್ರ/4668/ಅಡ್ವರ್ಟೋರ್/2022–23

ಪ್ರಧಾನಿ ನರೇಂದ್ರ ಮೋದಿ ಬಳಿ ಯಶ್, ರಿಷಬ್ ಶೆಟ್ಟಿ ಮನವಿ

'ಶೀಘ್ರದಲ್ಲೇ ಚಿತ್ರನಗರಿ ನಿರ್ಮಾಣವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಆದಷ್ಟು ಶೀಘ್ರವಾಗಿ ಚಿತ್ರನಗರಿ (ಫಿಲ್ಮ್‌ಸಿಟಿ) ನಿರ್ಮಾಣವಾಗಬೇಕು ಎಂದು ನಟರಾದ ಯಶ್ ಹಾಗೂ ರಿಷಬ್ ಶೆಟ್ಟಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿಯಿಟ್ಟಿದ್ದಾರೆ.

ಏರೋ ಇಂಡಿಯಾ–2023ರ ಉದ್ಘಾಟನೆಗಾಗಿ ಭಾನುವಾರ ರಾತ್ರಿ ಬೆಂಗಳೂರಿಗೆ ಆಗಮಿಸಿದ್ದ ಮೋದಿ ಅವರು ರಾಜಭವನದಲ್ಲಿ ನಟರಾದ ಯಶ್ ಹಾಗೂ ರಿಷಬ್ ಶೆಟ್ಟಿ, ನಟಿ ಶ್ರದ್ಧಾ ಜೈನ್, ನಿರ್ಮಾಪಕ ವಿಜಯ್ ಕಿರಗಂದೂರು, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರೊಂದಿಗೆ ಸುಮಾರು 15 ನಿಮಿಷಗಳ ಕಾಲ ಮಾತುಕತೆ ನಡೆಸಿದ್ದರು.

ಈ ವೇಳೆ ಕನ್ನಡ ಚಿತ್ರರಂಗಕ್ಕೆ ಬೇಕಾದ ಸೌಲಭ್ಯಗಳ ಬಗ್ಗೆ ಚರ್ಚೆ ನಡೆದಿದೆ. ಈ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ನಟ ರಿಷಬ್ ಶೆಟ್ಟಿ, 'ಹಲವು ವರ್ಷಗಳಿಂದ ಚಿತ್ರನಗರಿ ನಿರ್ಮಾಣ ವಿಚಾರ ನನೆಗುದಿಗೆ ಬಿದ್ದಿದೆ. ಸರ್ಕಾರ ಬದಲಾದಂತೆ ಚಿತ್ರನಗರಿ ನಿರ್ಮಾಣದ ಜಾಗವೂ ಬದಲಾಗುತ್ತಿದೆ. ಈ ಕಾರಣದಿಂದಾಗಿ ಚಿತ್ರೀಕರಣಕ್ಕಾಗಿ ನಾವು ಬೇರೆ ರಾಜ್ಯಗಳಿಗೆ ಅಲೆದಾಡಬೇಕಾಗಿದೆ. ಎಲ್ಲಿಯೇ ಆದರೂ ಸರಿ ಆದಷ್ಟು ಶೀಘ್ರದಲ್ಲಿ ರಾಜ್ಯದಲ್ಲಿ ಚಿತ್ರನಗರಿ ನಿರ್ಮಾಣವಾಗಬೇಕು ಎಂದು ಮನವಿ ಸಲ್ಲಿಸಿದ್ದೇವೆ' ಎಂದರು.

'ಈಗಾಗಲೇ ಹಲವು ಯಶಸ್ವಿ ಪ್ಯಾನ್ ಇಂಡಿಯಾ ಸಿನಿಮಾಗಳನ್ನು ಕನ್ನಡ ಚಿತ್ರರಂಗ ನೀಡಿದೆ. ಪ್ರಸ್ತುತ ಚಿತ್ರರಂಗ ಎನ್ನುವುದು ಕೇವಲ ಮನರಂಜನೆಯ ಕ್ಷೇತ್ರವಾಗಷ್ಟೇ ಉಳಿದಿಲ್ಲ. ಇದರಿಂದಾಗಿ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗುತ್ತಿದ್ದು, ಆರ್ಥಿಕತೆ ಚಿತ್ರರಂಗ ನೀಡುತ್ತಿರುವ ಕೊಡುಗೆ, ಏಕಪರದೆ ಚಿತ್ರಮಂದಿರಗಳ ಅವನತಿ, ಇದನ್ನು ಉಳಿಸಿಕೊಳ್ಳಲು ಆಗಬೇಕಾದ ಕಾರ್ಯಕ್ರಮಗಳ ಬಗ್ಗೆಯೂ ಚರ್ಚೆ ನಡೆಸಿದೆವು' ಎಂದು ರಿಷಬ್ ತಿಳಿಸಿದರು.

ಮೋದಿ ಅವರೊಂದಿಗೆ ವಿಜಯ್ ಕಿರಗಂದೂರು, ಯಶ್, ರಿಷಬ್ ಶೆಟ್ಟಿ, ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ಶ್ರದ್ಧಾ ಜೈನ್

'ಮೋದಿಯವರನ್ನು ನಾನು ಮಹಾನ್ ನಾಯಕರಾಗಿ ಕಾಣುತ್ತೇನೆ. 'ಕಾಂತಾರ' ಸಿನಿಮಾದ ಬಗ್ಗೆಯೂ ಮೋದಿ ಅವರು ಚರ್ಚಿಸಿ, ಅಭಿನಂದಿಸಿದರು. ಹಲವು ಬಾರಿ 'ಕಾಂತಾರ' ಎನ್ನುವ ಪದ ಅವರ ಬಾಯಿಂದ ಬಂದಿದ್ದನ್ನು ಕೇಳಿ ಖುಷಿಪಟ್ಟೆ' ಎಂದರು.

'ನಮ್ಮೆಲ್ಲರ ಮಾತುಗಳನ್ನು ಬಹಳ ಸೂಕ್ಷ್ಮವಾಗಿ ಮೋದಿ ಅವರು ಕೇಳಿದರು. ನಮ್ಮ ಕೆಲಸವನ್ನು ಶ್ಲಾಘಿಸಿದರು. ನಂತರದಲ್ಲಿ ಕನ್ನಡ ಚಿತ್ರರಂಗದ ಬಗ್ಗೆ ತಮಗಿದ್ದ ಮಾಹಿತಿ ಹಾಗೂ ಕಲ್ಪನೆ, ದೂರದೃಷ್ಟಿಯನ್ನು ಹಂಚಿಕೊಂಡರು. ಚಿತ್ರರಂಗವು ದೇಶಕ್ಕಾಗಿ ಏನು ಮಾಡಬಹುದು ಎನ್ನುವ ಬಗ್ಗೆಯೂ ಚರ್ಚೆ ಮಾಡುವ ಅವಕಾಶ ಸಿಕ್ಕಿತು. ಚಿತ್ರರಂಗದ ಬಗ್ಗೆ ಮೋದಿ ಅವರಿಗೆ ತಿಳಿದಿದ್ದ ಸೂಕ್ಷ್ಮ ವಿಷಯಗಳನ್ನು ಕಂಡು ಆಶ್ಚರ್ಯಪಟ್ಟೆ' ಎಂದು ಯಶ್ ಹೇಳಿದರು.

‘ಲಾಲ್‌ಬಾಗ್ ಗುತ್ತಿಗೆ ಅಕ್ರಮ: 2 ಸಂಸ್ಥೆಗಳ ವಿರುದ್ಧ ಕ್ರಮ, ₹ 64 ಕೋಟಿ ನಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನ ಒಳಭಾಗದಲ್ಲಿ ದಿ. ನರ್ಸರಿ ಮೆನ್ ಕೋ ಆಪರೇಟಿವ್ ಸೊಸೈಟಿ ಮತ್ತು ಮೈಸೂರು ಉದ್ಯಾನ ಕಲಾ ಸಂಘಗಳಿಗೆ ಅಕ್ರಮವಾಗಿ ಜಮೀನು ಗುತ್ತಿಗೆಗೆ ನೀಡಿರುವುದರಿಂದ ₹ 64.01 ಕೋಟಿ ನಷ್ಟವಾಗಿದೆ ಎಂದು ತೋಟಗಾರಿಕಾ ಸಚಿವ ಮುನಿರತ್ನ ತಿಳಿಸಿದರು.

ಖಾಸಗಿ ಸೊಸೈಟಿಗಳಿಗೆ ಲಾಲ್‌ಬಾಗ್‌ನ ಒಳ ಭಾಗದಲ್ಲಿ ಸರ್ಕಾರಿ ಜಮೀನನ್ನು ಸುದೀರ್ಘ ಕಾಲದಿಂದ ಗುತ್ತಿಗೆಗೆ ನೀಡಿರುವುದರಲ್ಲಿ ಆಗಿರುವ ಅಕ್ರಮ ಕುರಿತು ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ವಿಧಾನ ಪರಿಷತ್‌ನಲ್ಲಿ ಸೋಮವಾರ ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಸಚಿವರು ಉತ್ತರ ನೀಡಿದರು.

> **ಲಾಲ್‌ಬಾಗ್‌ನ ಒಳಗೆ ಖಾಸಗಿ ಸಂಸ್ಥೆಗಳ ಕಾರ್ಯಾಚರಣೆ ಮುಂದುವರಿದಿರುವುದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ಕಾನೂನು ಕ್ರಮ ಅಗತ್ಯ.**
> **ಯು.ಬಿ. ವೆಂಕಟೇಶ್**
> ಕಾಂಗ್ರೆಸ್ ಸದಸ್ಯ

ನರ್ಸರಿ ಮೆನ್ ಕೋ ಆಪರೇಟಿವ್ ಸೊಸೈಟಿಗೆ 1 ಎಕರೆ 29 ಗುಂಟೆ ಮತ್ತು ಮೈಸೂರು ಉದ್ಯಾನ ಕಲಾ ಸಂಘಕ್ಕೆ 28 ಗುಂಟೆ ಜಮೀನನ್ನು 1991ರಲ್ಲಿ ಗುತ್ತಿಗೆಗೆ ನೀಡಲಾಗಿತ್ತು. 25 ವರ್ಷಗಳ ಗುತ್ತಿಗೆ ಅವಧಿಯು 2016ರ ಮಾರ್ಚ್‌ಗೆ ಮುಕ್ತಾಯವಾಗಿದೆ. ಏಳು ವರ್ಷಗಳಿಂದ ಅಕ್ರಮವಾಗಿ ಎರಡೂ ಸಂಸ್ಥೆಗಳು ಸರ್ಕಾರಿ ಜಮೀನನ್ನು ಸ್ವಾಧೀನದಲ್ಲಿರಿಸಿಕೊಳ್ಳಲು ಅವಕಾಶ ನೀಡಲಾಗಿದೆ ಎಂದರು.

ಏಳು ವರ್ಷಗಳ ಅವಧಿಯಲ್ಲಿ ಗರಿಷ್ಠ ಬಾಡಿಗೆ ದರವನ್ನು ಗಣನೆಗೆ ತೆಗೆದುಕೊಂಡರೆ ನರ್ಸರಿ ಮೆನ್ ಕೋ ಆಪರೇಟಿವ್ ಸೊಸೈಟಿ ₹ 44.01 ಕೋಟಿ ಹಾಗೂ ಮೈಸೂರು ಉದ್ಯಾನ ಕಲಾ ಸಂಘದಿಂದ ₹ 20.07 ಕೋಟಿ ಬಾಕಿ ಇದೆ. ಎರಡೂ ಸಂಸ್ಥೆಗಳ ಸ್ವಾಧೀನದಲ್ಲಿದ್ದ ಜಮೀನು ಹಿಂಪಡೆಯಲು 2022ರ ಅಕ್ಟೋಬರ್ 18ರಂದು ಆದೇಶ ಹೊರಡಿಸಲಾಗಿದೆ. ಆದರೆ, ಹೈಕೋರ್ಟ್‌ನಲ್ಲಿ ವ್ಯಾಜ್ಯ ಇರುವುದರಿಂದ ತೆರವು ಕಾರ್ಯ ಬಾಕಿ ಉಳಿದಿದೆ ಎಂದು ಮುನಿರತ್ನ ವಿವರಿಸಿದರು.

ಸರ್ಕಾರಿ ಸಿಬ್ಬಂದಿ ಬಳಸಿ ಲಾಭ: ‘ನರ್ಸರಿ ಮೆನ್ ಕೋ ಆಪರೇಟಿವ್ ಸೊಸೈಟಿಯು ರಾಜ್ಯದ ರೈತರು ಮತ್ತು ಸಾರ್ವಜನಿಕರಿಗೆ ಗಿಡಗಳನ್ನು ವಿತರಿಸುವ ಕೆಲಸ ಮಾಡುವುದಾಗಿ ಜಮೀನು ಪಡೆದಿತ್ತು. ಆದರೆ, ನಗರದ ಉದ್ಯಾನಗಳ ನಿರ್ವಹಣೆ ಕಾಮಗಾರಿಯ ಗುತ್ತಿಗೆ ಪಡೆದು, ಕೆಲಸ ಮಾಡಿದೆ. ಈವರೆಗೆ ₹ 708 ಕೋಟಿ ವಹಿವಾಟು ನಡೆಸಿದ್ದು, ₹ 255 ಕೋಟಿ ಲಾಭ ಗಳಿಸಿದೆ. ಕೆಲವೇ ವ್ಯಕ್ತಿಗಳು ಈ ಮೊತ್ತವನ್ನು ಬಳಸಿಕೊಂಡಿರುವುದು ಪರಿಶೀಲನೆಯಲ್ಲಿ ಪತ್ತೆಯಾಗಿದೆ’ ಎಂದರು.

‘ಮೈಸೂರು ಉದ್ಯಾನ ಕಲಾ ಸಂಘವು ಲಾಲ್‌ಬಾಗ್‌ನಲ್ಲಿ ನಡೆಯುವ ಫಲ, ಪುಷ್ಪ ಪ್ರದರ್ಶನವನ್ನು ದುರ್ಬಳಕೆ ಮಾಡಿಕೊಂಡು ಹಣ ಗಳಿಸಿದೆ. ತೋಟಗಾರಿಕಾ ಇಲಾಖೆ ಹಾಗೂ ಲಾಲ್ ಬಾಗ್ ಸಿಬ್ಬಂದಿ ಶ್ರಮವಹಿಸಿ ಪ್ರದರ್ಶನ ಆಯೋಜಿಸುತ್ತಿದ್ದರು. ಆದರೆ, ಸಂಗ್ರಹವಾದ ಹಣದಲ್ಲಿ ಶೇಕಡ 95ರಷ್ಟು ಮೈಸೂರು ಉದ್ಯಾನ ಕಲಾ ಸಂಘಕ್ಕೆ ಪಾವತಿಯಾಗುತ್ತಿತ್ತು. ಈ ಕಾರಣದಿಂದ 2023ರ ಗಣ ರಾಜ್ಯೋತ್ಸವದಿಂದ ರಾಜ್ಯ ಸರ್ಕಾರ ಸ್ವತಂತ್ರವಾಗಿ ಪ್ರದರ್ಶನ ಆಯೋಜಿಸುತ್ತಿದೆ’ ಎಂದು ತಿಳಿಸಿದರು.

ಅಧಿಕಾರಿಗಳು ಸೇರಿದಂತೆ ಅಕ್ರಮಕ್ಕೆ ಕಾರಣವಾದ ಎಲ್ಲರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಭರವಸೆ ನೀಡಿದರು.

ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆ: ₹60 ಸಂಗ್ರಹ ಸಮರ್ಥನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆಯ ಪಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲು ಪ್ರತಿ ವಿದ್ಯಾರ್ಥಿಯಿಂದ ₹ 60 ಸಂಗ್ರಹಿಸಲು ಹೊರಡಿಸಿದ್ದ ಸುತ್ತೋಲೆ ಹಿಂಪಡೆಯಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ನಿರಾಕರಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ, ಕೆ.ಎ.ತಿಪ್ಪೇಸ್ವಾಮಿ, ಮೊದಲು ಪರೀಕ್ಷೆಗಳನ್ನು ನಡೆಸುತ್ತಿದ್ದ ಶಿಕ್ಷಕರ ಸಂಘಟನೆಗಳು ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ, ಪೂರೈಸಲು ವಿದ್ಯಾರ್ಥಿಗಳಿಂದ ಅಧಿಕ ಹಣ ಸಂಗ್ರಹಿಸುತ್ತಿದ್ದವು. ವಿರೋಧ ವ್ಯಕ್ತವಾದ ನಂತರ ಸರ್ಕಾರವೇ ಹೊಣೆ ವಹಿಸಿಕೊಂಡಿದೆ. ಆದರೂ, ಶುಲ್ಕ ಸಂಗ್ರಹ ನಡೆಯುತ್ತಿದೆ. ಒಂದು ಪತ್ರಿಕೆಗೆ ₹ 6 ಸಹ ಖರ್ಚಾಗುವುದಿಲ್ಲ. ₹ 60 ಸಂಗ್ರಹಿಸಲಾಗುತ್ತಿದೆ. ಬಡ ವಿದ್ಯಾರ್ಥಿಗಳಿಗೆ ಹೊರೆಯಾಗುವ ಸುತ್ತೋಲೆ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

‘ಪ್ರಶ್ನೆಪತ್ರಿಕೆಗಳನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಲಾಗಿನ್‌ಗೆ ಪೂರೈಸಲಾಗುತ್ತದೆ. ಪತ್ರಿಕೆಗಳನ್ನು ಮುದ್ರಿಸಿದ ನಂತರ ಶಾಲೆಗಳಿಗೆ ಸರಬರಾಜು ಮಾಡಲಾಗುತ್ತದೆ. 12 ಪುಟಗಳ ಎಲ್ಲ ಪ್ರಶ್ನೆಪತ್ರಿಕೆಗಳೂ ಸೇರಿ ₹ 60 ಸಂಗ್ರಹಿಸಲು ಅನುಮತಿ ನೀಡಲಾಗಿದೆ. ಪ್ರತಿ ಪ್ರಶ್ನೆಪತ್ರಿಕೆಗೆ ಅಲ್ಲ’ ಎಂದು ಸಚಿವ ನಾಗೇಶ್ ಹೇಳಿದರು.

ಫೆ.23ರಿಂದ ಮಾರ್ಚ್ 1ರವರೆಗೆ, ಪ್ರತಿದಿನ ಬೆಳಿಗ್ಗೆ 10.30ರಿಂದ 1.30 ಅವಧಿಯಲ್ಲಿ ಪೂರ್ವ ಸಿದ್ಧತಾ ಪರೀಕ್ಷೆಗಳು ನಡೆಯಲಿವೆ.

5,8 ನೇ ತರಗತಿ ಮಾದರಿ ಪ್ರಶ್ನೆಪತ್ರಿಕೆ ಪ್ರಕಟ

ಬೆಂಗಳೂರು: ಐದು ಮತ್ತು ಎಂಟನೇ ತರಗತಿ ವಿದ್ಯಾರ್ಥಿಗಳ ಮೌಲ್ಯಾಂಕನದ ಮಾದರಿ ಪ್ರಶ್ನೆಪತ್ರಿಕೆಗಳನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಐದನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತಿಯ ಭಾಷಾ ವಿಷಯಗಳ ಜತೆಗೆ ಗಣಿತ, ಪರಿಸರ ಅಧ್ಯಯನದ ವಿಷಯಗಳು, ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷಾ ವಿಷಯಗಳ ಜತೆಗೆ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಗಳ ಕುರಿತು ಪರೀಕ್ಷೆಗಳು ನಡೆಯಲಿವೆ.

ಪ್ರತಿ ಪತ್ರಿಕೆಯು ತಲಾ 40 ಅಂಕಗಳ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಒಂದು ಅಂಕದ 20 ಬಹು ಆಯ್ಕೆಯ ಪ್ರಶ್ನೆಗಳು, 20 ಅಂಕಗಳಿಗೆ ವಿವರಾಣಾತ್ಮಕ ಉತ್ತರ ಬರೆಯುವ ಪ್ರಶ್ನೆಗಳಿರುತ್ತವೆ. ಅವುಗಳಲ್ಲಿ ಎರಡು ಅಂಕದ ಐದು ಪ್ರಶ್ನೆಗಳು, ಮೂರು ಅಂಕದ ಎರಡು ಪ್ರಶ್ನೆಗಳು, ನಾಲ್ಕು ಅಂಕದ ಒಂದು ಪ್ರಶ್ನೆಯನ್ನು ಪತ್ರಿಕೆಗಳು ಒಳಗೊಂಡಿರುತ್ತವೆ. ಉತ್ತರಿಸಲು ಎರಡು ಗಂಟೆ ಸಮಯ ನಿಗದಿಮಾಡಲಾಗಿದೆ. ನಂತರ 10 ಅಂಕಗಳಿಗೆ ಮೌಖಿಕ ಪರೀಕ್ಷೆ ಇರುತ್ತದೆ.

‘ಮಾರ್ಚ್ 9ರಿಂದ 18ರವರೆಗೆ ಮೌಲ್ಯಾಂಕನ ಪರೀಕ್ಷೆಗಳು ನಡೆಯಲಿವೆ. ರಾಜ್ಯಪಠ್ಯಕ್ಕೆ ಅನುಗುಣವಾಗಿ ಏಕರೂಪದ ಪ್ರಶ್ನೆಪತ್ರಿಕೆಗಳು ಸಿದ್ಧವಾಗಿದ್ದು, ಐದನೇ ತರಗತಿಯ 57,933 ಹಾಗೂ ಎಂಟನೇ ತರಗತಿಯ 24,400 ಮಕ್ಕಳು ಪರೀಕ್ಷೆ ಬರೆಯುವರು. ವೇಳಾಪಟ್ಟಿಯಂತೆ ನಡೆಸಲು ಎಲ್ಲ ಮುಖ್ಯ ಶಿಕ್ಷಕರಿಗೆ ಸೂಚಿಸಲಾಗಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ತಿಳಿಸಿದೆ.

ಪೀಣ್ಯ 2ನೇ ಹಂತದ ಜೆಕೆಡಬ್ಲ್ಯೂ ಬಡಾವಣೆ ಬಳಿ ಆಯೋಜಿಸಿದ್ದ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ನಂಜಾವಧೂತ ಸ್ವಾಮೀಜಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ ಮರಿಸ್ವಾಮಿ, ಎನ್‌. ಲೋಕೇಶ್ ಗೌಡ ದಂಪತಿ ಭಾಗವಹಿಸಿದ್ದರು. ದಾಸರಹಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಎನ್‌. ಲೋಕೇಶ್‌ಗೌಡ ನೇತೃತ್ವ ವಹಿಸಿದ್ದರು. ಸುಮಾರು 12 ಸಾವಿರ ತಿರುಪತಿ ಲಡ್ಡು ಹಾಗೂ ಪ್ರಸಾದ ವಿತರಿಸಲಾಯಿತು. ಜತೆಗೆ, ಹತ್ತು ಸಾವಿರ ಮಂದಿಗೆ ವಸ್ತ್ರ ನೀಡಲಾಯಿತು.

ವಿದ್ಯಾರ್ಥಿ ಸಾವು: ಜಾತಿ ತಾರತಮ್ಯದ ಆರೋಪ

ಮುಂಬೈ: ಇಲ್ಲಿನ ಪೊವೈನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ವಸತಿನಿಲಯದ ಸಂಕೀರ್ಣದಲ್ಲಿ ವಿದ್ಯಾರ್ಥಿಯೊಬ್ಬನ ಮೃತದೇಹ ಭಾನುವಾರ ಪತ್ತೆಯಾಗಿದೆ.

ಮೃತನನ್ನು ಬಿ.ಟೆಕ್ ಮೊದಲ ವರ್ಷದ ವಿದ್ಯಾರ್ಥಿ ದರ್ಶನ್ ಸೋಲಂಕಿ ಎನ್ನಲಾಗಿದೆ. ಬಾಂಬೆ ಐಐಟಿಯ ಅಂಬೇಡ್ಕರ್ ಪೆರಿಯಾರ್ ಪುಲೆ ಸ್ಟಡಿ ಸರ್ಕಲ್ (ಎಪಿಪಿಎಸ್‌ಸಿ) ವಿದ್ಯಾರ್ಥಿಯು ಜಾತಿತಾರತಮ್ಯದ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಟ್ವೀಟ್‌ನಲ್ಲಿ ಆರೋಪಿಸಿದೆ. ಯಾವುದೇ ಆತ್ಮಹತ್ಯಾ ಪತ್ರ ಪತ್ತೆಯಾಗಿಲ್ಲ. ಅಪಘಾತ ಮರಣ ವರದಿ ಪ್ರಕರಣ ದಾಖಲಾಗಿದೆ.

ಕ್ಯಾಂಟರ್ ಚಕ್ರ ಹರಿದು ಮಹಿಳೆ ಸಾವು

ಬೆಂಗಳೂರು: ಕಸ್ತೂರ್ ಬಾ ರಸ್ತೆಯಲ್ಲಿ ಸೋಮವಾರ ಅಪಘಾತ ಸಂಭವಿಸಿದ್ದು, ಕ್ಯಾಂಟರ್ ಚಕ್ರ ಮೈ ಮೇಲೆ ಹರಿದು ಸುಧಾ (37) ಎಂಬುವರು ಮೃತಪಟ್ಟಿದ್ದಾರೆ.

ಸುಧಾ

‘ಭಾರತಿನಗರ ನಿವಾಸಿ ಸುಧಾ, ದ್ವಿಚಕ್ರ ವಾಹನದಲ್ಲಿ ಮಗಳನ್ನು ಶಾಲೆಗೆ ಬಿಟ್ಟು ವಾಪಸು ಮನೆಯತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಸಿದ್ದಲಿಂಗಯ್ಯ ವೃತ್ತದಿಂದ ಕ್ವೀನ್ಸ್ ಜಂಕ್ಷನ್ ಕಡೆಗಿನ ರಸ್ತೆಯಲ್ಲಿ ಸುಧಾ ಅವರು ಬೆಳಿಗ್ಗೆ 8.30 ಗಂಟೆ ಸುಮಾರಿಗೆ ಹೊರಟಿದ್ದರು. ಎಚ್‌.ಪಿ ಪೆಟ್ರೋಲ್ ಬಂಕ್ ಎದುರು ದ್ವಿಚಕ್ರ ವಾಹನ ಸಹಿತ ಅವರು ಉರುಳಿಬಿದ್ದಿದ್ದರು. ಅದೇ ಮಾರ್ಗದಲ್ಲಿ ಅತೀ ವೇಗವಾಗಿ ಹೊರಟಿದ್ದ ಕ್ಯಾಂಟರ್‌ನ ಚಕ್ರ ಸುಧಾ ಮೈ ಮೇಲೆ ಹರಿದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

‘ಕ್ಯಾಂಟರ್ ಚಾಲಕನ ನಿರ್ಲಕ್ಷ್ಯ ಹಾಗೂ ಅತೀ ವೇಗದ ಚಾಲನೆಯೇ ಸುಧಾ ಸಾವಿಗೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಚಾಲಕ ಸೈಯದ್ ಅಲ್ಲಾಭಕ್ಷ (51) ಎಂಬಾತನನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

ಸದನದಿಂದ ಹೊರನಡೆದ ಕಾಂಗ್ರೆಸ್ ಶಾಸಕರು

ಬೆಂಗಳೂರು: ಬಿಜೆಪಿ ಶಾಸಕ ಪಿ.ರಾಜೀವ್ ಅವರು ಸೋಮವಾರ ವಿಧಾನಸಭೆಯಲ್ಲಿ ತುರ್ತುಪರಿಸ್ಥಿತಿ ಮತ್ತು ಇಂದಿರಾಗಾಂಧಿ ಬಗ್ಗೆ ಸುದೀರ್ಘವಾಗಿ ಮಾತನಾಡಿದ್ದರಿಂದ ಬೇಸತ್ತ ಕೆಲ ಕಾಂಗ್ರೆಸ್ ಸದಸ್ಯರು ಕಲಾಪದಿಂದ ಅಸಮಾಧಾನಗೊಂಡು ಮೌನವಾಗಿ ಹೊರನಡೆದರು.

ರಾಜ್ಯಪಾಲರ ಭಾಷಣ ವಂದನಾ ನಿರ್ಣಯದ ಪ್ರಸ್ತಾವ ಅನುಮೋದಿಸಿ ಮಾತನಾಡಿದ ‘ಬಿಜೆಪಿ ಸಂವಿಧಾನ ಬದಲಿಸಲು ಯತ್ನಿಸುತ್ತಿದೆ’ ಎಂದು ಕಾಂಗ್ರೆಸ್ ನಾಯಕರು ಪದೇ ಪದೇ ಸುಳ್ಳು ಹೇಳುತ್ತಿದ್ದಾರೆ. ಇತಿಹಾಸದಲ್ಲಿ ತಮ್ಮ ಕುರ್ಚಿ ಉಳಿಸಿಕೊಳ್ಳಲು ಸಂವಿಧಾನ ಬದಲು ಮಾಡಿದ್ದು ಯಾರಾದರೂ ಇದ್ದರೆ ಅದು ಇಂದಿರಾಗಾಂಧಿ. ಬಿಜೆಪಿಯವರು ಎಂದೂ ಆ ಕೆಲಸ ಮಾಡಿಲ್ಲ’ ಎಂದು ರಾಜೀವ್ ಹೇಳಿದರು.

ಈ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಎಂ.ಕೃಷ್ಣಪ್ಪ, ‘ಎಷ್ಟು ಬಾರಿ ತುರ್ತುಪರಿಸ್ಥಿತಿ ಬಗ್ಗೆ ಮಾತನಾಡುತ್ತೀರಿ. ಅವೆಲ್ಲ ಎಲ್ಲರಿಗೂ ಗೊತ್ತು. ಪದೇ ಪದೇ ಮಾತನಾಡುವ ಅಗತ್ಯವಿದೆಯೇ’ ಎಂದು ಪ್ರಶ್ನಿಸಿದರು. ಇದಕ್ಕೆ ಕಾಂಗ್ರೆಸ್‌ನ ಶ್ರೀನಿವಾಸಮಾನೆ ಅವರೂ ಧ್ವನಿಗೂಡಿಸಿದರು.

‘ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಹಕ್ಕು ಇದೆ. ಅದನ್ನು ಮೊಟಕುಗೊಳಿಸಲು ಯಾರಿಗೂ ಸಾಧ್ಯವಿಲ್ಲ’ ಎಂದು ಹೇಳಿದ ರಾಜೀವ್ ಅವರು ತಮ್ಮ ಮಾತು ಮುಂದುವರಿಸಿದರು. ಆಗ ಬೇಸತ್ತ ಕೃಷ್ಣಪ್ಪ ಮತ್ತು ಇನ್ನೂ ಕೆಲವರು ಗೊಣಗುತ್ತಾ ಸದನದಿಂದ ಹೊರನಡೆದರು.

‘ರಾಜ್ಯದ ಚಿತ್ರಣ ಬದಲು’: ‘ಡಬಲ್ ಎಂಜಿನ್’ ಸರ್ಕಾರದಿಂದಾಗಿ ರಾಜ್ಯದ ಚಿತ್ರಣವೇ ಸಂಪೂರ್ಣ ಬದಲಾಗಿದೆ ಎಂದು ಬಿಜೆಪಿಯ ಸಿ.ಟಿ. ರವಿ ತಿಳಿಸಿದರು.

ವಿಧಾನಸಭೆಯಲ್ಲಿ ಸೋಮವಾರ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸಿ ಮಾತನಾಡಿ, ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯೂ ಸೇರಿ ಹಲವು ಯೋಜನೆಗಳು ರಾಜ್ಯ ಅಭಿವೃದ್ಧಿಯ ಪಥದಲ್ಲಿ ದಾಪುಗಾಲಿಟ್ಟಿದೆ . ರಾಜ್ಯಪಾಲರ ಭಾಷಣವೇ ನಮ್ಮ ರಿಪೋರ್ಟ್ ಕಾರ್ಡ್’ ಎಂದು ಅವರು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸಿ ಬಿಜೆಪಿಯ ತೇಜಸ್ವಿನಿ ಗೌಡ ಮಾತನಾಡಿದರು. ಬಿಜೆಪಿಯ ಡಿ.ಎಸ್. ಅರುಣ್ ನಿರ್ಣಯ ಮಂಡನೆಯ ಪ್ರಸ್ತಾವವನ್ನು ಅನುಮೋದಿಸಿದರು.

‘ನಮ್ಮದು ರಾಜ್ಯದ ಸರ್ವರಿಗಾಗಿ ಕೆಲಸ ಮಾಡುತ್ತಿರುವ ಸರ್ಕಾರ. ರೈತರು, ವಿದ್ಯಾರ್ಥಿಗಳು, ಅಲ್ಪಸಂಖ್ಯಾತರು, ಮಹಿಳೆಯರು ಎಲ್ಲರ ಅಭಿವೃದ್ಧಿಗಾಗಿ ಸರ್ಕಾರ ಶ್ರಮಿಸುತ್ತಿದೆ. ಅದನ್ನೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ’ ಎಂದರು.

ಬೈಕ್‌ನಿಂದ ಬಿದ್ದು ವೈದ್ಯ ಸಾವು

ದೇವನಹಳ್ಳಿ: ಚಿಕ್ಕಬಳ್ಳಾಪುರ ಕಡೆಯಿಂದ ದೇವನಹಳ್ಳಿ ಮಾರ್ಗವಾಗಿ ಬೆಂಗಳೂರಿನತ್ತ ಹೊರಟಿದ್ದ ವೈದ್ಯರೊಬ್ಬರ ಬೈಕ್ ಸೋಮವಾರ ರಸ್ತೆ ಉಬ್ಬಿನಲ್ಲಿ ನಿಯಂತ್ರಣ ತಪ್ಪಿ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವೈದ್ಯ ಆಶಿಶ್

ಬೆಂಗಳೂರಿನ ಆಶಿಶ್ ಮೃತ ವೈದ್ಯ. ಹೆಲ್ಮೆಟ್ ಧರಿಸಿದ್ದರೂ ತಲೆಗೆ ಗಂಭೀರ ಗಾಯವಾಗಿ, ತೀವ್ರ ರಕ್ತ ಸ್ರಾವವಾಗಿದೆ. ಸ್ಥಳದಲ್ಲಿದ್ದವರು ಅವರನ್ನು ಆಸ್ಪತ್ರೆಗೆ ಸೇರಿಸಿದರು. ಅದಾಗಲೇ ಅವರು ಮೃತಪಟ್ಟಿದ್ದರು.

ಕೋಟೆ ಕ್ರಾಸ್ ಬಳಿ ಇರುವ ಅವೈಜ್ಞಾನಿಕ ರಸ್ತೆ ಉಬ್ಬಿನ ಬಳಿ ನಿತ್ಯ ಅಪಘಾತ ಸಂಭವಿಸುತ್ತಿವೆ ಎಂದು ಸ್ಥಳೀಯರು ದೂರಿದ್ದಾರೆ.

ಮಾಂಗಲ್ಯ ಕಿತ್ತೊಯ್ದಿದ್ದ ಬಾವ–ಬಾಮೈದ ಬಂಧನ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಚಿನ್ನದ ಮಾಂಗಲ್ಯ ಸರ ಕಿತ್ತೊಯ್ದಿದ್ದ ಆರೋಪದಡಿ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಮೈಸೂರು ಏಕಲವ್ಯ ನಗರದ ಚಂದು ಅಲಿಯಾಸ್ ಕಬ್ಬಾಳು (27) ಮತ್ತು ರವಿ ಅಲಿಯಾಸ್ ರಘು (37) ಬಂಧಿತರು. ಇವರಿಬ್ಬರು ಬಾವ–ಬಾಮೈದ. ಇವರಿಂದ ₹ 6 ಲಕ್ಷ ಮೌಲ್ಯದ ಚಿನ್ನದ ಸರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಆದಿಲಕ್ಷ್ಮಿ ಎಂಬುವರು ಪೊಲೀಸರಿಗೆ ದೂರು ನೀಡಿದ್ದರು.

ಶಿಕ್ಷಣ ಸಂಸ್ಥೆಗಳಿಗೆ ವೇತನಾನುದಾನ ಸಿ.ಎಂ ಉತ್ತರದ ಭರವಸೆ

ಬೆಂಗಳೂರು: 1987ರಿಂದ 1994–95ರ ಅವಧಿಯಲ್ಲಿ ಪ್ರಾರಂಭವಾದ 114 ಖಾಸಗಿ ಶಾಲೆಗಳನ್ನು ವೇತನಾನುದಾನದ ವ್ಯಾಪ್ತಿಗೆ ತರುವ ಬೇಡಿಕೆ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದಲೇ ಸದನಕ್ಕೆ ಉತ್ತರ ಕೊಡಿಸುವುದಾಗಿ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ವಿಧಾನ ಪರಿಷತ್‌ನಲ್ಲಿ ಸೋಮವಾರ ಭರವಸೆ ನೀಡಿದರು.

114 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವಂತೆ ಆಗ್ರಹಿಸಿ ನಿಯಮ 330ರ ಅಡಿಯಲ್ಲಿ ಚರ್ಚೆ ನಡೆಸಿದ ಬಿಜೆಪಿಯ ಪುಟ್ಟಣ್ಣ, ಎಸ್.ವಿ. ಸಂಕನೂರ, ಜೆಡಿಎಸ್‌ನ ಮರಿತಿಬ್ಬೇಗೌಡ, ಎಸ್.ಎಲ್. ಭೋಜೇಗೌಡ ಮತ್ತು ಕಾಂಗ್ರೆಸ್‌ನ ಮಧು ಜಿ. ಮಾದೇಗೌಡ, ‘ಮುಖ್ಯಮಂತ್ರಿ ಹಾಗೂ ವಿಧಾನ ಪರಿಷತ್ ಸಭಾಪತಿಯವರ ನೇತೃತ್ವದಲ್ಲಿ 2021ರಲ್ಲಿ ನಡೆದ ಸಭೆಯಲ್ಲಿ ಈ ಶಿಕ್ಷಣ ಸಂಸ್ಥೆಗಳನ್ನು ಅನುದಾನದ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿತ್ತು.

ಅದನ್ನು ತಿರಸ್ಕರಿಸುವ ತೀರ್ಮಾನವನ್ನು ಆರ್ಥಿಕ ಇಲಾಖೆ ಕೈಗೊಂಡಿದೆ’ ಎಂದು ಆಕ್ಷೇಪಿಸಿದರು. ಹಿಂದಿನ ತೀರ್ಮಾನದಂತೆ ವೇತನಾನುದಾನ ನೀಡುವಂತೆ ಎಲ್ಲರೂ ಆಗ್ರಹಿಸಿದರು.

ಉತ್ತರ ನೀಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್, ಆರ್ಥಿಕ ಇಲಾಖೆಯ ಅಭಿಪ್ರಾಯವನ್ನೇ ಓದಿದರು. ಪುನಃ ಆರ್ಥಿಕ ಇಲಾಖೆಗೆ ಪ್ರಸ್ತಾವ ಕಳುಹಿಸಿ, ಅನುಮೋದನೆ ಪಡೆಯಲು ಪ್ರಯತ್ನಿಸುವುದಾಗಿ ತಿಳಿಸಿದರು. ಆದರೆ, ಸಚಿವರ ಉತ್ತರವನ್ನು ವಿರೋಧಿಸಿ ಪುಟ್ಟಣ್ಣ, ಮರಿತಿಬ್ಬೇಗೌಡ ಮತ್ತು ಕಾಂಗ್ರೆಸ್‌ನ ಎಂ. ನಾಗರಾಜು ಸಭಾಪತಿಯವರ ಪೀಠದ ಎದುರು ಧರಣಿ ಅರಂಭಿಸಿದರು. ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಸಭಾ ನಾಯಕರು ಭರವಸೆ ನೀಡಿದ ಬಳಿಕ ಅವರು ಧರಣಿಯನ್ನು ಅಂತ್ಯಗೊಳಿಸಿದರು.

ಕತ್ತು ಕೊಯ್ದು ಮಹಿಳೆ ಕೊಲೆ: ಪತಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತಿನಗರ ನಂಜಪ್ಪ ವೃತ್ತ ಬಳಿಯ ಮನೆಯೊಂದರಲ್ಲಿ ಕೌಸರ್ ಮುಬೀನ್ (35) ಎಂಬುವರನ್ನು ಕತ್ತು ಕೊಯ್ದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿ ಕೌಸರ್ ಅವರನ್ನು ನದೀಮ್ ಎಂಬಾತ ಮದುವೆಯಾಗಿದ್ದ. ದಂಪತಿಗೆ ಮಗಳಿದ್ದಾಳೆ. ಕೌಟುಂಬಿಕ ಕಾರಣದಿಂದಾಗಿ ದಂಪತಿ ಕೆಲ ತಿಂಗಳ ಹಿಂದೆಯಷ್ಟೇ ದೂರವಾಗಿದ್ದರು. ಕೌಸರ್, ನಂಜಪ್ಪ ವೃತ್ತ ಬಳಿ ಇರುವ ತಮ್ಮ ತವರು ಮನೆಯಲ್ಲಿ ಮಗಳ ಜೊತೆ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ಕೌಸರ್ ಮನೆ ಬಳಿ ಸೋಮವಾರ ಬಂದಿದ್ದ ನದೀಮ್, ಜಗಳ ತೆಗೆದಿದ್ದ. ಕುಟುಂಬದವರ ಎದುರೇ ಚಾಕುವಿನಿಂದ ಪತ್ನಿಯ ಕುತ್ತಿಗೆ ಕೊಯ್ದು ಓಡಿ ಹೋಗಿದ್ದು,. ತೀವ್ರ ಗಾಯಗೊಂಡಿದ್ದ ಕೌಸರ್, ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟಿದ್ದಾರೆ’ ಎಂದರು

ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಬಿಸಿಯೂಟ ತಯಾರಿಕೆ ಮಹಿಳೆಯರು ಸೋಮವಾರ ಪ್ರತಿಭಟನೆ ನಡೆಸಿದರು (ಎಡ ಚಿತ್ರ). ರಾಜ್ಯ ಸಂಜೀವಿನಿ ನೌಕರರ ಹಾಗೂ ಫಲಾನುಭವಿಗಳ ಸಂಘದ ನೇತೃತ್ವದಲ್ಲಿ ಮಹಿಳಾ ಸಿಬ್ಬಂದಿ ಪ್ರತಿಭಟನೆ ಕೈಗೊಂಡಿದ್ದರು – ಪ್ರಜಾವಾಣಿ ಚಿತ್ರಗಳು

ಅಕ್ಷರ ದಾಸೋಹ, ಗ್ರಂಥಾಲಯ, ಸಂಜೀವಿನಿ ನೌಕರರ ಹೋರಾಟ

ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಲು ಸಾಲು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಮಂಡಲ ಅಧಿವೇಶನ ಶುರುವಾದ ಬೆನ್ನಲ್ಲೇ ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಹಲವು ಸಂಘಟನೆಗಳ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಆರಂಭಿಸಿದ್ದಾರೆ.

ರಾಜ್ಯದ ಹಲವು ಜಿಲ್ಲೆಗಳಿಂದ ನಗರಕ್ಕೆ ಬಂದಿರುವ ಪದಾಧಿಕಾರಿಗಳು, ಬೇಡಿಕೆಗಳ ಫಲಕಗಳನ್ನು ಪ್ರದರ್ಶಿಸು-ತ್ತಿದ್ದಾರೆ. ಬೇಡಿಕೆ ಈಡೇರಿಸುವವರೆಗೂ ಪ್ರತಿಭಟನೆ ಕೈಬಿಟ್ಟುವುದಿಲ್ಲವೆಂದು ಪಟ್ಟು ಹಿಡಿದು ಉದ್ಯಾನದಲ್ಲಿ ಮೊಕ್ಕಾಂ ಹೂಡಿದ್ದಾರೆ.

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್‌ಎಚ್‌ಎಂ ಸಿಬ್ಬಂದಿ ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಅಕ್ಷರ ದಾಸೋಹ ನೌಕರರ ಸಂಘ: ‘ನಿವೃತ್ತಿ ಹೊಂದಿದ ಹಾಗೂ ನಿವೃತ್ತಿ ಅಂಚಿನಲ್ಲಿರುವ ಬಿಸಿಯೂಟ ಸಿಬ್ಬಂದಿಗೆ ₹1 ಲಕ್ಷ ಇಡಿಗಂಟು ನೀಡಬೇಕು’ ಎಂದು ಒತ್ತಾಯಿಸಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಬಿಸಿಯೂಟ ತಯಾರಿಕೆ ಮಹಿಳೆಯರು ಸೋಮವಾರ ಪ್ರತಿಭಟನೆ ನಡೆಸಿದರು.

‘ಬಿಸಿಯೂಟ ಯೋಜನೆ ಕಾಯಂ ಗೊಳಿಸಿ, ಕೆಲಸ ನಿರತ ಮಹಿಳೆಯರನ್ನು ಕಾರ್ಮಿಕರೆಂದು ಗುರುತಿಸಬೇಕು. ಯೋಜನೆ ಉಸ್ತುವಾರಿಯನ್ನು ಖಾಸಗಿ ಸಂಸ್ಥೆಗಳಿಗೆ ನೀಡಬಾರದು. ಬೇಸಿಗೆ ಹಾಗೂ ದಸರಾ ರಜೆಗಳ ವೇತನ ನೀಡಬೇಕು. ಅಪಘಾತದಲ್ಲಿ ಮರಣ ಹೊಂದಿದ್ದ ಸಿಬ್ಬಂದಿ ಕುಟುಂಬಸ್ಥರಿಗೆ ಕೆಲಸ ನೀಡಬೇಕು’ ಎಂದು ಒತ್ತಾಯಿಸಿದರು.

ಗ್ರಾಮೀಣ ಗ್ರಂಥಾಲಯಗಳ ನೌಕರರ ಸಂಘ: ‘ಕಾರ್ಮಿಕ ಇಲಾಖೆಯ ಅಧಿಸೂಚನೆ ಅನ್ವಯ ₹13,200 ಕನಿಷ್ಠ ವೇತನ ನೀಡಬೇಕು’ ಎಂದು ಒತ್ತಾಯಿಸಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಾಮೀಣ ಗ್ರಂಥಾಲಯಗಳ ನೌಕರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

‘ನೌಕರರಿಗೆ ಗ್ರ್ಯಾಚ್ಯುಟಿ ನೀಡಬೇಕು. ಗ್ರಂಥಾಲಯಗಳ ಮೇಲ್ವಿಚಾರಕರು ಅಕಾಲಿಕ ನಿಧನರಾದ ಸಂದರ್ಭದಲ್ಲಿ, ಅವರ ಕುಟುಂಬದವರನ್ನು ನೇಮಕ ಮಾಡಿಕೊಳ್ಳುವ ವಯೋಮಿತಿ ಹಾಗೂ ವಿದ್ಯಾರ್ಹತೆ ಸಡಿಲಗೊಳಿಸಬೇಕು’ ಎಂದು ನೌಕರರು ಒತ್ತಾಯಿಸಿದರು.

ರಾಜ್ಯ ಸಂಜೀವಿನಿ ನೌಕರರ ಸಂಘ: ‘ಗ್ರಾಮ ಪಂಚಾಯಿತಿ ಹಾಗೂ ವಾರ್ಡ್ ಮಟ್ಟಗಳಲ್ಲಿ ಮಹಿಳಾ ಸಬಲೀಕರಣದ ಸಂಜೀವಿನಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವೇತನ ಹೆಚ್ಚಳ ಮಾಡಬೇಕು’ ಎಂದು ಒತ್ತಾಯಿಸಿ ರಾಜ್ಯ ಸಂಜೀವಿನಿ ನೌಕರರ ಹಾಗೂ ಫಲಾನುಭವಿಗಳ ಸಂಘದಿಂದ ಪ್ರತಿಭಟನೆ ನಡೆಯಿತು.

‘ಯೋಜನೆಯ ಪುಸ್ತಕ ಬರಹಗಾರರಿಗೆ ₹15 ಸಾವಿರ, ಸಂಪನ್ಮೂಲ ಸಹಾಯಕರಿಗೆ ₹13 ಸಾವಿರ ಹಾಗೂ ಸಖಿ ಕಾರ್ಯಕರ್ತೆಯರಿ-ಗೆ ₹8 ಸಾವಿರ ಕನಿಷ್ಠ ವೇತನ ನೀಡಬೇಕು. ಗಣತಿ ಕಾರ್ಯಕ್ಕೆ ₹500 ದಿನ ಭತ್ಯೆ ಪಾವತಿಸಬೇಕು. ಮಹಿಳೆಯರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಎನ್‌ಎಚ್‌ಎಂ ಒಳಗುತ್ತಿಗೆ ನೌಕರರು: ‘ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ಒಳ ಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕು’ ಎಂದು ಒತ್ತಾಯಿಸಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್‌ಎಚ್‌ಎಂ ಸಿಬ್ಬಂದಿ ಪ್ರತಿಭಟನೆ ನಡೆಸಿದರು.

‘ಅಭಿಯಾನದಡಿ 30 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಮಣಿಪುರ, ಒಡಿಶಾ, ರಾಜಸ್ಥಾನ, ಪಂಜಾಬ್ ರಾಜ್ಯಗಳಲ್ಲಿ ಸಿಬ್ಬಂದಿ ಕೆಲಸವನ್ನು ಕಾಯಂಗೊಳಿಸಲಾಗಿದೆ’ ಎಂದು ಪ್ರತಿಭಟನಕಾರರು ಹೇಳಿದರು.

ಕುಂಬಾರರ ಯುವಸೈನ್ಯ: ‘ಕುಂಬಾರರ ಅಭಿವೃದ್ಧಿ ನಿಗಮ ರಚಿಸಬೇಕು ಹಾಗೂ ವಿಶೇಷ ಮೀಸಲಾತಿ ಕಲ್ಪಿಸಬೇಕು’ ಎಂದು ಒತ್ತಾಯಿಸಿ ಕರ್ನಾಟಕ ಕುಂಬಾರರ ಯುವಸೈನ್ಯ ವತಿಯಿಂದ ಕುಂಬಾರ ಸಮುದಾಯದವರು ನಡೆಸುತ್ತಿರುವ ಪ್ರತಿಭಟನೆ ಸೋಮವಾರ 14ನೇ ದಿನ ಪೂರೈಸಿತು.

ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ: ‘ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ (ಪಿಟಿಸಿಎಲ್) ಸಮಗ್ರ ತಿದ್ದುಪಡಿ ಮಾಡಬೇಕು’ ಎಂದು ಒತ್ತಾಯಿಸಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ಪದಾಧಿಕಾರಿಗಳು ನಡೆಸುತ್ತಿರುವ ಪ್ರತಿಭಟನೆ ಸೋಮವಾರ 39ನೇ ದಿನ ಪೂರೈಸಿತು.

ಗರ್ಭಕೋಶ ಶಸ್ತ್ರಚಿಕಿತ್ಸೆ ಸಂತ್ರಸ್ತರು, ಬಿ.ಆರ್‌. ಅಂಬೇಡ್ಕರ್‌, ಮಹಾತ್ಮಾ ಗಾಂಧಿ ಹಾಗೂ ಪುನೀತ್ ರಾಜ್‌ಕುಮಾರ್ ಭಾವಚಿತ್ರ ಪ್ರದರ್ಶಿಸಿದರು

ಸಿ.ಎಂ ಮನೆಗೆ ಹೋಗದಂತೆ ತಡೆ

‘ನಿಯಮಬಾಹಿರ ಗರ್ಭಕೋಶ ಶಸ್ತ್ರಚಿಕಿತ್ಸೆಯಿಂದ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ 1,522 ಮಹಿಳೆಯರಿಗೆ ವಿಶೇಷ ಪ್ಯಾಕೇಜ್ ನೀಡಬೇಕು’ ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ನೀಡಲು ಹೊರಟಿದ್ದ ಸಂತ್ರಸ್ತರನ್ನು ವಶಕ್ಕೆ ಪಡೆದ ಪೊಲೀಸರು, ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಟ್ಟಿದ್ದಾರೆ.

ರಾಣೆಬೆನ್ನೂರಿನಿಂದ ಸೋಮವಾರ ನಗರದ ರೈಲು ನಿಲ್ದಾಣಕ್ಕೆ ಬಂದ ಸಂತ್ರಸ್ತರನ್ನು ಪೊಲೀಸರು ನಿಲ್ದಾಣದಲ್ಲೇ ತಡೆದರು. ಶಾಂತಿಯುತವಾಗಿ ಸಿ.ಎಂ. ಮನೆಗೆ ಹೋಗಿ ಮನವಿ ನೀಡುವುದಾಗಿ ಪ್ರತಿಭಟನಕಾರರು ಹೇಳಿದರು.

ಪೊಲೀಸರು, ‘ಸಿ.ಎಂ ಮನೆಗೆ ಹೋಗಲು ಅವಕಾಶವಿಲ್ಲ. ದಯವಿಟ್ಟು ಸ್ಥಳದಿಂದ ಹೋಗಿ’ ಎಂದರು. ಅದಕ್ಕೆ ಸಂತ್ರಸ್ತರು ಒಪ್ಪಲಿಲ್ಲ. ನಂತರ, ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ್ ಹೆಬ್ಬಾರ್ ಅವರು ಸಂತ್ರಸ್ತರ ನಿಯೋಗವನ್ನು ಭೇಟಿ ಮಾಡಿ ಬೇಡಿಕೆ ಈಡೇರಿಸುವ ಭರವಸೆ ನೀಡಿದರು.

ಅದಾದ ನಂತರವೂ ಪ್ರತಿಭಟನಕಾರರು ನಿಲ್ದಾಣದಲ್ಲಿ ಕುಳಿತಿದ್ದರು. ಸ್ಥಳ ಬಿಟ್ಟು ಹೋಗುವುದಿಲ್ಲವೆಂದು ಪಟ್ಟು ಹಿಡಿದಿದ್ದರು. ಅವರನ್ನು ವಶಕ್ಕೆ ಪಡೆದ ಪೊಲೀಸರು, ಉದ್ಯಾನಕ್ಕೆ ತಂದು ಬಿಟ್ಟರು. ‘ನಮ್ಮೂರಿನ ಸಿ.ಎಂ ಭೇಟಿಯಾಗಲು ಪೊಲೀಸರು ಅಡ್ಡಿಪಡಿಸಿದ್ದಾರೆ. ಒತ್ತಾಯದಿಂದ ಎಳೆದುತಂದು ಉದ್ಯಾನಕ್ಕೆ ತಂದು ಬಿಟ್ಟಿದ್ದಾರೆ’ ಎಂದು ಸಂತ್ರಸ್ತರು ಆರೋಪಿಸಿದರು.

ಪ್ರತಿಭಟನಕಾರರು– ಪೊಲೀಸರ ನಡುವೆ ವಾಗ್ವಾದ

ಸಾಲು ಸಾಲು ಪ್ರತಿಭಟನೆಗಳಿಂದಾಗಿ ಉದ್ಯಾನದಲ್ಲಿ ಜಾಗದ ಅಭಾವ ಉಂಟಾಗಿದೆ. ಪ್ರತಿಭಟನೆ ಆರಂಭಿಸಿರುವ ಕೆಲ ಸಂಘಟನೆ ಪದಾಧಿಕಾರಿಗಳು, ಸ್ಥಳ ಬಿಟ್ಟು ಹೋಗುತ್ತಿಲ್ಲ. ಹೊಸಬರ ಪ್ರತಿಭಟನೆಗೆ ಜಾಗ ಒದಗಿಸುವುದು ಪೊಲೀಸರಿಗೆ ತಲೆನೋವಾಗಿದೆ.

ಎನ್‌ಎಚ್‌ಎಂ ಒಳಗುತ್ತಿಗೆ ನೌಕರರ ಮುಖಂಡರ ಜೊತೆ ಮಾತನಾಡಿದ ಪೊಲೀಸರು, ‘ಸರ್ಕಾರದ ಪ್ರತಿನಿಧಿಗಳಿಗೆ ಭೇಟಿ ಮಾಡಿಸುತ್ತೇವೆ. ಪ್ರತಿಭಟನೆ ಅಂತ್ಯಗೊಳಿಸಿ, ಬೇರೆಯವರ ಪ್ರತಿಭಟನೆಗೆ ಅವಕಾಶ ನೀಡಿ’ ಎಂದರು.

ಒಪ್ಪದ ಮುಖಂಡರು, ‘ಬೇರೆಯವರಿಗೆ ಅವಕಾಶ ನೀಡುತ್ತಿರಾ. ನಮಗೆ ಏಕೆ ನೀಡುವುದಿಲ್ಲ. ರಾಜಕಾರಣಿ ರೀತಿ ಮಾತನಾಡಬೇಡಿ. ಪೊಲೀಸರಾಗಿ ನೊಂದವರ ಪರ ಕೆಲಸ ಮಾಡಿ’ ಎಂದು ತರಾಟೆಗೆ ತೆಗೆದುಕೊಂಡರು. ಇದರಿಂದಾಗಿ ಮಾತಿನ ಚಕಮಕಿ ನಡೆಯಿತು. ಹಿರಿಯ ಅಧಿಕಾರಿಗಳು ಪರಿಸ್ಥಿತಿ ತಿಳಿಗೊಳಿಸಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಾಮೀಣ ಗ್ರಂಥಾಲಯಗಳ ನೌಕರರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು

ವಿಧಾನಸೌಧ ಮುತ್ತಿಗೆಗೆ ಯತ್ನ: ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ಒತ್ತಾಯ

ವಕೀಲರು ಪೊಲೀಸರ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ತರಬೇಕು’ ಎಂದು ಒತ್ತಾಯಿಸಿ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದ ವಕೀಲರು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು.

ಮುತ್ತಿಗೆ ಯತ್ನ ವಿಫಲಗೊಳಿಸಿದ ಪೊಲೀಸರು, ಕೆ.ಆರ್. ವೃತ್ತದಲ್ಲಿ 50ಕ್ಕೂ ಹೆಚ್ಚು ವಕೀಲರನ್ನು ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆದು ಬಸ್‌ಗಳಲ್ಲಿ ನಗರ ಸಶಸ್ತ್ರ ಮೀಸಲು ಪಡೆ ಮೈದಾನಕ್ಕೆ ಕರೆದೊಯ್ದರು. ಕೆಲ ಗಂಟೆಗಳ ಬಳಿಕ ಎಲ್ಲರನ್ನೂ ಬಿಡುಗಡೆಗೊಳಿಸಿದರು.

ರಾಜ್ಯ ವಕೀಲರ ಸಂಘ ಹಾಗೂ ಬೆಂಗಳೂರು ವಕೀಲರ ಸಂಘದ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಬೆಳಿಗ್ಗೆ ಸೇರಿದ್ದ ವಕೀಲರು, ಕಾಯ್ದೆ ಜಾರಿಗಾಗಿ ಘೋಷಣೆ ಕೂಗಿದರು.

ನಗರದ ಕೆ.ಆರ್. ವೃತ್ತದಲ್ಲಿ ಪ್ರತಿಭಟನೆ ವೇಳೆ ಬ್ಯಾರಿಕೇಡ್ ಏರಿದ್ದ ಮಹಿಳಾ ವಕೀಲರೊಬ್ಬರು ಪೊಲೀಸರನ್ನು ತರಾಟೆಗ ತೆಗೆದುಕೊಂಡರು – ಪ್ರಜಾವಾಣಿ ಚಿತ್ರ

ಪ್ರತಿಭಟನೆ ಮಾಹಿತಿ ತಿಳಿದು ವಕೀಲರ ಮುಖಂಡರ ಜೊತೆ ಮಾತುಕತೆ ನಡೆಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಮಧ್ಯಾಹ್ನ ಸಭೆ ನಡೆಸಿ ಕಾಯ್ದೆ ಜಾರಿಗೆ ಕ್ರಮ ಕೈಗೊಳ್ಳಲಾಗು-ವುದು’ ಎಂದು ಭರವಸೆ ನೀಡಿದ್ದರು. ಹೀಗಾಗಿ, ವಕೀಲರು ಶಾಂತಿಯುತ ಪ್ರತಿಭಟನೆ ಮುಂದುವರಿಸಿದ್ದರು.

‘ಕಾಯ್ದೆ ಜಾರಿ ಸಂಬಂಧ ಮುಖ್ಯಮಂತ್ರಿ ಯಾವುದೇ ಸಭೆ ನಡೆಸಿಲ್ಲ’ ಎಂಬುದು ಮಧ್ಯಾಹ್ನ ತಿಳಿಯುತ್ತಿ-ದ್ದಂತೆ ಆಕ್ರೋಶಗೊಂಡ ವಕೀಲರು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ತೀರ್ಮಾನಿಸಿದರು. ನ್ಯಾಯಾಲಯದಿಂದ ಹೊರಬಂದು ಕೆ.ಆರ್. ವೃತ್ತದ ಮೂಲಕ ವಿಧಾನಸೌಧದತ್ತ ಮೆರವಣಿಗೆ ಮೂಲಕ ಹೊರಟರು.

‘ವಿಧಾನಸೌಧ ಸುತ್ತಮುತ್ತ ನಿಷೇಧಾಜ್ಞೆ ಜಾರಿಯಲ್ಲಿದೆ. ಪ್ರತಿಭಟನೆಗೆ ಅವಕಾಶವಿಲ್ಲ’ ಎಂದು ಪೊಲೀಸರು ಹೇಳಿದರು. ಅದಕ್ಕೆ ಕಳೆದುಕೊಂಡ ವಕೀಲರು, ಬ್ಯಾರಿಕೇಡ್‌ಗಳನ್ನು ತಳ್ಳಿ ಮುನ್ನಗಲು ಮುಂದಾದರು. ವಕೀಲರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ನೂಕಾಟ–ತಳ್ಳಾಟವೂ ಉಂಟಾಯಿತು.

ವಿಪರೀತ ದಟ್ಟಣೆ: ವಕೀಲರು ಪ್ರತಿಭಟನಾ ಮೆರವಣಿಗೆ ನಡೆಸಿದ್ದರಿಂದ ಕೆ.ಆರ್.ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಿಪರೀತ ಸಂಚಾರ ದಟ್ಟಣೆ ಉಂಟಾಯಿತು. ಕೆಂಪೇಗೌಡ ರಸ್ತೆ, ಕಾರ್ಪೋರೇಷನ್ ವೃತ್ತ, ನೃಪತುಂಗ ರಸ್ತೆ, ಶೇಷಾದ್ರಿ ರಸ್ತೆಗಳಲ್ಲಿ ವಾಹನಗಳು ಗಂಟೆಗಟ್ಟಲೇ ಸಾಲುಗಟ್ಟಿ ನಿಂತಿದ್ದವು. ಬಸ್‌ಗಳಿಂದ ಇಳಿದ ಪ್ರಯಾಣಿಕರು, ನಡೆದುಕೊಂಡು ಮುಂದಕ್ಕೆ ಸಾಗಿದರು.

ಲೈಂಗಿಕ ದೌರ್ಜನ್ಯ: ಆರೋಪ ಪಟ್ಟಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಶಿವಮೂರ್ತಿ ಶರಣರು

ಚಿತ್ರದುರ್ಗ: 'ಸರದಿ ಪ್ರಕಾರ ಸ್ವಾಮೀಜಿಯ ಖಾಸಗಿ ಕೊಠಡಿಗೆ ತೆರಳಿದಾಗ ಚಾಕೊಲೇಟ್ ನೀಡಲಾಗುತ್ತಿತ್ತು. ಅದನ್ನು ತಿಂದ ಬಳಿಕ ನಿದ್ದೆ ಬಂದಂತೆ ಆಗುತ್ತಿತ್ತು. ಎಚ್ಚರವಾದಾಗ ತುಂಬಾ ಸುಸ್ತು, ತೊಡೆಗಳಲ್ಲಿ ನೋವು ಕಾಣಿಸಿಕೊಳ್ಳುತ್ತಿತ್ತು. ಆ ಬಳಿಕ ಸರಿಯಾಗಿ ಪೀರಿಯಡ್ ಆಗುತ್ತಿರಲಿಲ್ಲ...'

ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ 14 ವರ್ಷದ ವಿದ್ಯಾರ್ಥಿನಿ ಪೊಲೀಸರ ಎದುರು ನೀಡಿದ ಹೇಳಿಕೆ ಇದು. ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪಪಟ್ಟಿಯಲ್ಲಿ ಈ ಬಗ್ಗೆ ವಿವರ ಇದೆ.

'ಸ್ವಾಮೀಜಿಯ ತೊಡೆ ಮೇಲೆ ಕುಳಿತಿದ್ದಾಗ ಎದೆ, ಕುತ್ತಿಗೆ ಭಾಗವನ್ನು ಮುಟ್ಟುತ್ತಿದ್ದರು. ಆಗ ನನಗೆ ಭಯವಾಗುತ್ತಿತ್ತು. ಹಾಸ್ಟೆಲ್ ವಾರ್ಡನ್ ಸೂಚನೆಯಂತೆ ಪ್ರತಿ ಭಾನುವಾರ ಸ್ವಾಮೀಜಿಯ ಖಾಸಗಿ ಕೊಠಡಿಗೆ ತೆರಳಬೇಕಿತ್ತು. ಟೈಂ ಟೇಬಲ್ ಬದಲಾವಣೆ ಮಾಡಿದ್ದರಿಂದ ಪ್ರತಿ ಸೋಮವಾರ ಹೋಗುತ್ತಿದ್ದೆ. ಕೊಠಡಿಯಲ್ಲಿ ಮಲಗಿರುವಾಗ ಸ್ವಾಮೀಜಿ ನನ್ನನ್ನು ಬಳಸಿಕೊಂಡಿರಬಹುದು' ಎಂದು ಸಂತ್ರಸ್ತ ವಿದ್ಯಾರ್ಥಿನಿ ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾಳೆ.

'6ನೇ ತರಗತಿಯಲ್ಲಿದ್ದಾಗ ಸಹಪಾಠಿಯೊಂದಿಗೆ ಸ್ವಾಮೀಜಿಯ ಕೊಠಡಿಗೆ ಹಾಸ್ಟೆಲ್ ವಾರ್ಡನ್ ಕಳುಹಿಸಿಕೊಟ್ಟರು. ಕೊಠಡಿಯಲ್ಲಿದ್ದ ಟಿ.ವಿಯಲ್ಲಿ ದೃಶ್ಯ ಧಾರಾವಾಹಿ ನೋಡುತ್ತಾ ಕುಳಿತಿದ್ದಾಗ ಸ್ವಾಮೀಜಿ ಧಾವಿಸಿ ಅತ್ಯಾಚಾರ ಎಸಗಿದರು. ಆಗ ಮಠದ ದತ್ತು ಬಾಲಕಿಯೊಬ್ಬಳು ಅಲ್ಲಿಯೇ ಇದ್ದಳು' ಎಂದು 12 ವರ್ಷದ ಮತ್ತೊಬ್ಬ ಸಂತ್ರಸ್ತ ವಿದ್ಯಾರ್ಥಿನಿ ಹೇಳಿಕೆ ನೀಡಿದ್ದಾಳೆ. ಆದರೆ, ಸಹಪಾಠಿ ಈ ಹೇಳಿಕೆಯನ್ನು ಅಲ್ಲಗಳೆದಿರುವುದು ಕೂಡ ದೋಷಾರೋಪ ಪಟ್ಟಿಯಲ್ಲಿದೆ.

'ನಾನು ಮಠದಲ್ಲಿದ್ದಾಗ ಕೊಠಡಿಗೆ ಬೀಗ ಹಾಕುತ್ತಿರಲಿಲ್ಲ. ನಾನು ಇಲ್ಲದ ಸಮಯದಲ್ಲಿ ಯಾರಾದರೂ ಕೊಠಡಿಗೆ ಭೇಟಿ ನೀಡಿದ್ದ ಬಗ್ಗೆ ಮಾಹಿತಿ ಇಲ್ಲ. ದರ್ಬಾರ್ ಸಭಾಂಗಣದಲ್ಲಿ ಟ್ಯೂಷನ್ ಮಾಡಲಾಗುತ್ತಿತ್ತು. ಮಕ್ಕಳಿಗೆ ಪ್ರಸಾದವಾಗಿ ಹಣ್ಣು ನೀಡಲಾಗುತ್ತಿತ್ತು. ವಿದೇಶದಿಂದ ಮರಳಿದಾಗ ಮಕ್ಕಳಿಗೆ ಚಾಕೊಲೇಟ್ ನೀಡುತ್ತಿದ್ದೆ' ಎಂದು ಶಿವಮೂರ್ತಿ ಶರಣರು ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ.

'ಇಬ್ಬರು ಸಂತ್ರಸ್ತ ವಿದ್ಯಾರ್ಥಿನಿಯರ ತಾಯಿಯ ಆಧಾರವಾಗಿ ಮಠದ ಅಡುಗೆ ಸಹಾಯಕಿಯರು ವಿಚಾರಣೆ ನಡೆಸಿ ಪೊಲೀಸರಿಗೆ ಹೇಳಿಕೆ ಪಡೆದಿದ್ದಾರೆ. ಐಪಿಸಿ 376 (ಸಿ, 3, ಎಬಿ) 34, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ (ಪೋಕ್ಸೊ), ಬಾಲನ್ಯಾಯ ಕಾಯ್ದೆ–2015 ಹಾಗೂ ಧಾರ್ಮಿಕ ಸಂಸ್ಥೆಗಳ ದುರ್ಬಳಕೆ ತಡೆ ಕಾಯ್ದೆಯಡಿ ಪೊಲೀಸರು ದೋಷಾರೋಪಪಟ್ಟಿ ಸಲ್ಲಿಸಿದ್ದಾರೆ.

761 ಪುಟಗಳ ದೋಷಾರೋಪಪಟ್ಟಿ: ತನಿಖೆ ಪ್ರಗತಿಯಲ್ಲಿ

ಮುರುಘಾ ಮಠದ ಶಿವಮೂರ್ತಿ ಶರಣರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಎರಡನೇ ಪ್ರಕರಣದ ತನಿಖೆ ನಡೆಸಿದ ಪೊಲೀಸರು, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯಕ್ಕೆ 761 ಪುಟಗಳ ದೋಷಾರೋಪಪಟ್ಟಿ ಸಲ್ಲಿಸಿದ್ದಾರೆ. ತನಿಖೆ ಇನ್ನೂ ಪ್ರಗತಿಯಲ್ಲಿದ್ದು, ಅಂತಿಮ ವರದಿ ಸಲ್ಲಿಸಲಾಗುವುದು ಎಂದು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ತನಿಖಾಧಿಕಾರಿ ಜ.10ರಂದು ಸಲ್ಲಿಸಿದ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯ ಫೆ.10ರಂದು ಸ್ವೀಕರಿಸಿದೆ. 'ಎ' ಮತ್ತು 'ಬಿ' ಎಂಬ ಎರಡು ದೋಷಾರೋಪಪಟ್ಟಿಯನ್ನು ತನಿಖಾಧಿಕಾರಿ ನೀಡಿದ್ದಾರೆ. 'ಎ' 366 ಹಾಗೂ 'ಬಿ' 395 ಪುಟಗಳ ದೋಷಾರೋಪಪಟ್ಟಿ ಇದೆ. 73 ಸಾಕ್ಷಿಗಳನ್ನು ಪೊಲೀಸರು ಉಲ್ಲೇಖಿಸಿದ್ದಾರೆ. ಮೈಸೂರಿನ ನಜರಬಾದ್ ಠಾಣೆಯಲ್ಲಿ ಅ.13ರಂದು ಪ್ರಕರಣ ದಾಖಲಾಗಿತ್ತು.

'ಲೈಂಗಿಕ ಕ್ರಿಯೆಗೆ ಸಾಕ್ಷ್ಯ ಇಲ್ಲ'

ಸಂತ್ರಸ್ತ ವಿದ್ಯಾರ್ಥಿನಿಯರೊಂದಿಗೆ ಆರೋಪಿ ಲೈಂಗಿಕ ಕ್ರಿಯೆ ನಡೆಸಿರುವುದಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಗಳು ಲಭ್ಯವಾಗಿಲ್ಲ ಎಂಬುದು ವೈದ್ಯಕೀಯ ವರದಿಯಲ್ಲಿ ಉಲ್ಲೇಖವಾಗಿದೆ.

ಸಂತ್ರಸ್ತ ಇಬ್ಬರು ವಿದ್ಯಾರ್ಥಿನಿಯರಿಂದ ಸಂಗ್ರಹಿಸಿದ ವೈದ್ಯಕೀಯ ಮಾದರಿಗಳನ್ನು ಹುಬ್ಬಳ್ಳಿಯ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿತ್ತು. ವೈದ್ಯಕೀಯ ಪರೀಕ್ಷೆ ಹಾಗೂ ಪ್ರಯೋಗಾಲಯದ ವರದಿಯನ್ನು ಆಧರಿಸಿ ಜಿಲ್ಲಾ ಆಸ್ಪತ್ರೆಯ ಡಾ.ಉಮಾ ಮತ್ತು ಡಾ.ರೂಪಾಶ್ರೀ ಅಂತಿಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿ ನೀಡಿದ್ದಾರೆ.

'ಲೈಂಗಿಕ ಕ್ರಿಯೆ ನಡೆದಿರುವುದಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಗಳು ಲಭ್ಯವಾಗಿಲ್ಲ' ಎಂಬುದನ್ನು ಇಬ್ಬರು ವೈದ್ಯರು ಪ್ರತ್ಯೇಕವಾಗಿ ನೀಡಿದ ವರದಿಯಲ್ಲಿ ಉಲ್ಲೇಖಿಸಿದ್ದಾರೆ. 'ಆದರೂ, ಲೈಂಗಿಕ ದೌರ್ಜನ್ಯವನ್ನು ತಳ್ಳಿಹಾಕಲಾಗದು' ಎಂಬುದು ಡಾ.ರೂಪಾಶ್ರೀ ಅಭಿಪ್ರಾಯ.

ಇಬ್ಬರ ಮೇಲಿನ ಆರೋಪಕ್ಕೆ ಪುರಾವೆ

ತನ್ನ ಇಬ್ಬರು ಮಕ್ಕಳು ಸೇರಿ ನಾಲ್ವರು ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಮುರುಘಾ ಮಠದ ಅಡುಗೆ ಸಹಾಯಕಿ ದೂರಿನಲ್ಲಿ ಉಲ್ಲೇಖಿಸಿದ್ದರು. ನಾಲ್ವರು ಸಂತ್ರಸ್ತ ವಿದ್ಯಾರ್ಥಿನಿಯರ ಪೈಕಿ ಇಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿಲ್ಲ ಎಂಬುದು ತನಿಖೆಯಿಂದ ಗೊತ್ತಾಗಿದೆ.

ದೂರಿನಲ್ಲಿ ಉಲ್ಲೇಖಿಸಿದ ಐದು ಆರೋಪಿಗಳಲ್ಲಿ ಇಬ್ಬರ ವಿರುದ್ಧ ಮಾತ್ರ ಸಾಕ್ಷ್ಯಗಳು ಲಭ್ಯವಾಗಿವೆ. ಮುರುಘಾ ಮಠದ ಶಿವಮೂರ್ತಿ ಶರಣರು, ಹಾಸ್ಟೆಲ್ ವಾರ್ಡನ್ ಮೇಲಿನ ಆರೋಪಕ್ಕೆ ತನಿಖೆಯಲ್ಲಿ ಪುರಾವೆ ಲಭ್ಯವಾಗಿದೆ.

ಮಠದ ಉತ್ತರಾಧಿಕಾರಿ ಬಾಲಕ, ಮಾಜಿ ವ್ಯವಸ್ಥಾಪಕ ಪರಮಶಿವಯ್ಯ, ವಕೀಲ ಗಂಗಾಧರ, ಶರಣರ ಸಹಾಯಕ ಮಹಾಲಿಂಗ, ಅಡುಗೆಭಟ್ಟ ಕರಿಬಸಪ್ಪ ಮೇಲಿನ ಆರೋಪ ಸಾಬೀತುಪಡಿಸುವ ಸಾಕ್ಷ್ಯಗಳು ಲಭ್ಯವಾಗಿಲ್ಲ ಎಂದು ತನಿಖಾಧಿಕಾರಿ ಅಭಿಪ್ರಾಯಪಟ್ಟಿದ್ದಾರೆ.

ಚಾರ್ಮಾಡಿ ಘಾಟಿಯಲ್ಲಿ ಸ್ವಚ್ಛತೆ ಕಡೆಗಿಲ್ಲ ಲಕ್ಷ್ಯ
ಧರ್ಮಸ್ಥಳ ಪಾದಯಾತ್ರೆ: ಸೌಲಭ್ಯ ಕೊರತೆ

• ಬಿ.ಜೆ.ಧನ್ಯಪ್ರಸಾದ್

ಚಿಕ್ಕಮಗಳೂರು: ಶಿವರಾತ್ರಿ ಆಚರಣೆಗೆ ಧರ್ಮಸ್ಥಳಕ್ಕೆ ಭಕ್ತರು ಪಾದಯಾತ್ರೆ ಸಾಗುವ ಚಾರ್ಮಾಡಿ ಘಾಟ ಮಾರ್ಗದಲ್ಲಿ ಕಸದ ಬುಟ್ಟಿ, ಕುಡಿಯುವ ನೀರು, ತಾತ್ಕಾಲಿಕ ತಂಗುದಾಣ ಸೌಲಭ್ಯ ಕಲ್ಪಿಸಿಲ್ಲ. ನೀರಿನ ಖಾಲಿ ಬಾಟಲಿಗಳು, ಕುರುಕಲು ತಿಂಡಿ ಖಾಲಿ ಪೊಟ್ಟಣಗಳು ಅರಣ್ಯದ ಒಡಲು ಸೇರುತ್ತಿವೆ.

ಚಿಕ್ಕಮಗಳೂರು, ಬೆಂಗಳೂರು, ತುಮಕೂರು, ಮೈಸೂರು, ಮಂಡ್ಯ, ಹಾಸನ, ಕೋಲಾರ, ಬಳ್ಳಾರಿ ಸಹಿತ ವಿವಿಧ ಜಿಲ್ಲೆಗಳ ಸಹಸ್ರಾರು ಭಕ್ತರು ಪ್ರತಿ ವರ್ಷ ಯಾತ್ರೆಗೆ ತೆರಳುತ್ತಾರೆ. ಪಾದಯಾತ್ರಿಗಳ ದಂಡು ಹರಿದುಬರುತ್ತಿದ್ದು, ಇನ್ನು ನಾಲ್ಕು ದಿನ ಮೂಡಿಗೆರೆ, ಕೊಟ್ಟಿಗೆಹಾರ, ಚಾರ್ಮಾಡಿ ಮಾರ್ಗದಲ್ಲಿ ಭಕ್ತರು ಸಾಗುವರು.

ಯಾತ್ರಿಗಳು ಘಾಟ ಮಾರ್ಗದ ಬದಿ, ಹಳ್ಳಕೊಳ್ಳಗಳ ಸೇತುವೆ ಪ್ರದೇಶಗಳಲ್ಲಿ ಆಹಾರ ತಯಾರಿಸುತ್ತಾರೆ. ಊಟ, ಉಪಾಹಾರ, ನೀರು ಸೇವಿಸಿ ಪ್ಲಾಸ್ಟಿಕ್ ತಟ್ಟೆ, ಲೋಟ, ಪೊಟ್ಟಣ, ಬಾಟಲಿಗಳನ್ನು ಎಲ್ಲೆಂದರಲ್ಲಿ ಎಸೆಯುತ್ತಾರೆ. ಇವು ದಟ್ಟ ಕಾನನದ ಪ್ರಪಾತ, ಜಲಮೂಲಗಳನ್ನು ಸೇರುತ್ತಿವೆ.

ಅರಣ್ಯ ಇಲಾಖೆಯವರು ಚಾರ್ಮಾಡಿ ಘಾಟಿಯಲ್ಲಿ ಕಸದ ಬುಟ್ಟಿ ಇತ್ಯಾದಿ ವ್ಯವಸ್ಥೆ ಕಲ್ಪಿಸಿಲ್ಲ. ಕೊಟ್ಟಿಗೆಹಾರದಿಂದ ಚಾರ್ಮಾಡಿ ಘಾಟಿ ಮಾರ್ಗದ ಅಣ್ಣಪ್ಪ ಸ್ವಾಮಿ ದೇಗುಲದವರೆಗೆ ಶೌಚಾಲಯ ವ್ಯವಸ್ಥೆ ಇಲ್ಲ. ದೇಗುಲ ಸಮೀಪದಲ್ಲಿ ಶೌಚಾಲಯ ಇದೆ. ಮಿಕ್ಕಂತೆ ಭಕ್ತರಿಗೆ ರಸ್ತೆ ಬದಿ, ಜಲಮೂಲ ಪ್ರದೇಶಗಳೇ ಗತಿ.

'ಚಾರ್ಮಾಡಿ ಘಾಟಿ ಮಾರ್ಗದಲ್ಲಿ ಅಲ್ಲಲ್ಲಿ ಕಸದ ಬುಟ್ಟಿ, ಶೌಚಾಲಯ ವ್ಯವಸ್ಥೆ ಕಲ್ಪಿಸಿಲ್ಲ.

ಅರಣ್ಯ ಇಲಾಖೆಯವರು ಮುಂಜಾಗ್ರತೆ ಕ್ರಮ ಕೈಗೊಂಡಿಲ್ಲ. ಪ್ಲಾಸ್ಟಿಕ್ ಇತ್ಯಾದಿ ತ್ಯಾಜ್ಯ ಅರಣ್ಯದ ಒಡಲು ಸೇರುವುದರಿಂದ ಪರಿಸರ ಮಲಿನವಾಗುತ್ತದೆ' ಎಂದು ತುಮಕೂರಿನ ಪಾದಯಾತ್ರಿ ಟಿ.ಎಚ್.ಹರಿಣಿ ಬೇಸರ ವ್ಯಕ್ತಪಡಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮಾರ್ಗವಾಗಿ ಸೋಮವಾರ ಭಕ್ತರು ಧರ್ಮಸ್ಥಳ ಕಡೆಗೆ ಸಾಗಿದರು -ಪ್ರಜಾವಾಣಿ ಚಿತ್ರ/ ಎ.ಎನ್.ಮೂರ್ತಿ

ಕಸ ಹಾಕಲು ಮೂಡಿಗೆರೆ ಮಾರ್ಗದಲ್ಲಿ ರಸ್ತೆ ಬದಿ ಅಳವಡಿಸಿರುವ ಚೀಲ (ಎಡಚಿತ್ರ), ಚಾರ್ಮಾಡಿ ಘಾಟ್ ಮಾರ್ಗದ ಅಣ್ಣಪ್ಪ ಸ್ವಾಮಿ ದೇಗುಲ ಮುಂಭಾಗದ ರಸ್ತೆ ಬದಿಯ ಕಟ್ಟೆ ಪಕ್ಕದಲ್ಲಿ ಬಿದ್ದಿರುವ ಖಾಲಿ ಬಾಟಲಿಗಳು

ಮೂಡಿಗೆರೆ– ಕೊಟ್ಟಿಗೆಹಾರ ಮಾರ್ಗ: ರಸ್ತೆ ಬದಿ ಕಸದ ಚೀಲ ವ್ಯವಸ್ಥೆ

ಕಸ ಹಾಕಲು ರಸ್ತೆ ಬದಿಯಲ್ಲಿ ಚೀಲಗಳನ್ನು ಮೂಡಿಗೆರೆಯಿಂದ ಕೊಟ್ಟಿಗೆಹಾರದವರೆಗೆ ವ್ಯವಸ್ಥೆ ಮಾಡಲಾಗಿದೆ. ಖಾಲಿ ಬಾಟಲಿ, ಕಸ ಹಕ್ಕಿ ವಿಲೇವಾರಿ ಮಾಡಲು ಕೆಲಸಗಾರರು, ಸ್ವಚ್ಛವಾಹಿನಿಗಳನ್ನು ವಿವಿಧ ಗ್ರಾಮ ಪಂಚಾಯಿತಿಗಳು ವ್ಯವಸ್ಥೆ ಮಾಡಿವೆ.

> ಚಾರ್ಮಾಡಿ ಘಾಟ ರಸ್ತೆ ಬದಿ ಕಸದ ಬುಟ್ಟಿ ಅಳವಡಿಕೆಗೆ 8 ಜಾಗ ಗುರುತಿಸಲಾಗಿದೆ. ಸ್ವಚ್ಛತೆ ನಿರ್ವಹಣೆಗೆ ಗಮನ ಹರಿಸುತ್ತೇವೆ.
> ಎಸ್.ಇ.ಕ್ರಾಂತಿ, ಉಪ ಅರಣ್ಯಸಂರಕ್ಷಣಾಧಿಕಾರಿ, ಚಿಕ್ಕಮಗಳೂರು

ಚಿಕ್ಕಮಕ್ಕಿ ಗ್ರಾಮದಲ್ಲಿ ಹೊಸದಾಗಿ ಸಮುದಾಯ ಶೌಚಾಲಯ ಕಲ್ಪಿಸಲಾಗಿದೆ. ಸಂಘ– ಸಂಸ್ಥೆಯವರು, ದಾನಿಗಳು ಭಕ್ತರು ತಂಗಲು ರಸ್ತೆ ಮಗ್ಗುಲಿನ ಜಮೀನು, ಅಂಗಳದಲ್ಲಿ ಶಾಮಿಯಾನ ಅಳವಡಿಸಿ ಕೆಲವೆಡೆ ವ್ಯವಸ್ಥೆ ಮಾಡಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ, ಇನ್ನಷ್ಟು ಕಡೆ ತಾತ್ಕಾಲಿಕ ಶೌಚಾಲಯ, ತಂಗುದಾಣ ಕಲ್ಪಿಸಬೇಕು ಎಂಬುದು ಭಕ್ತರ ಮನವಿ.

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ವನಿತೆಯರ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡ ಚಾಂಪಿಯನ್ ಆಗುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಅನಧಿಕೃತ ಸಾಗುವಳಿ: ಅರ್ಜಿ ಸಲ್ಲಿಕೆಗೆ ಮೇ 31 ಕೊನೆ ದಿನ

ಒಂದನೇ ಪುಟದಿಂದ...

ವಿಧಾನಸಭೆಯಲ್ಲಿ ಬಿಜೆಪಿಯ ಹರತಾಳ ಹಾಲಪ್ಪ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸಲು ಭೂ ಕಂದಾಯ ಕಾಯ್ದೆ 1964ರ ಕಲಂ 94ಎ, 94ಬಿ, 94 ಎ(4)ರ ಅಡಿ ನಮೂನೆ 50, 53ರಡಿ ಅವಕಾಶ ಕಲ್ಪಿಸಲಾಗಿದೆ. ಅದರ ಅಡಿ ಅರ್ಜಿ ಸಲ್ಲಿಸದವರಿಗೆ ನಮೂನೆ 57ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಿ ಕಾಲಾವಕಾಶ ವಿಸ್ತರಿಸಲಾಗಿದೆ' ಎಂದರು.

'ಗೋಮಾಳ, ಗಾಯರಾಣ, ಹುಲ್ಲುಬನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಜಮೀನುಗಳನ್ನು ಮಂಜೂರು ಮಾಡುವ ಕುರಿತು ನೀತಿ ರೂಪಿಸಲು 2022ರ ಫೆ. 22ರಂದು ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ' ಎಂದೂ ವಿವರಿಸಿದರು.

'ವಿಮಾನ ನಿಲ್ದಾಣಕ್ಕೆ ಬಂಗಾರಪ್ಪ ಹೆಸರಿಡಿ'

ಶಿವಮೊಗ್ಗ: ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ಹೆಸರು ಇಡಬೇಕು ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶ್ರೀಧರ್ ಹುಲ್ತಿಕೊಪ್ಪ ಒತ್ತಾಯಿಸಿದ್ದಾರೆ.

ತಿದ್ದುಪಡಿ

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಅವರ ಸಹೋದರ ಮೊಹಮ್ಮದ್ ಫಾರೂಕ್ ಅವರು 2022ರ ಜನವರಿಯಲ್ಲಿ ಬಿಜೆಪಿ ರಾಜ್ಯ ಅಲ್ಪಸಂಖ್ಯಾತ ಮೋರ್ಚಾದ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದರು.

ಅದೇ ವರ್ಷದ ಡಿಸೆಂಬರ್‌ನಲ್ಲಿ ಅವರು ಮೃತಪಟ್ಟಿದ್ದಾರೆ. ಫೆಬ್ರುವರಿ13ರ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿತ್ತು.

ಕಾರ್ಯನಿರ್ವಾಹಕ ಇಂಜಿನೀಯರರು, ಬಾ.ಪ.ಅ.ಪ್ರಾ
ವಿಭಾಗ ನಂ.02, ಬಾಗಲಕೋಟೆ

ನಂ.ಕಾನಿಇಂ/ಬಾ.ಪ.ಅ.ಪ್ರಾ/ವಿ–2/ಟೆಂಡರ ನಂ.14/2022–23/4200 ದಿನಾಂಕ: 09.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ. (ಇ–ಪ್ರೋಕ್ಯೂರಮೆಂಟ್ ಮುಖಾಂತರ)

ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಬರುವ ಕಾಮಗಾರಿಗಳ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಲಮ್‌ಸಮ್ ಟರ್ನಕೀ ಆಧಾರದ ಮೇಲೆ ಟೆಂಡರನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಕೆ.ಟಿ.ಪಿ.ಪಿ ನಿಯಮಾಳಿಯಂತೆ ಆಹ್ವಾನಿಸಲಾಗಿದೆ,

1) ಇಂಡೆಂಟ ನಂ:1357, ಟೆಂಡರ್‌ಗಿಟ್ಟ ಮೊತ್ತವು ರೂ. 296.50 ಲಕ್ಷಗಳು (ಜಿ.ಎಸ್.ಟಿ ಸೇರಿಸಿ) 2) ಇಂಡೆಂಟ ನಂ:1330, ಟೆಂಡರ್‌ಗಿಟ್ಟ ಮೊತ್ತವು ರೂ. 487.17 ಲಕ್ಷಗಳು (ಜಿ.ಎಸ್.ಟಿ ಸೇರಿಸಿ) 3) ಇಂಡೆಂಟ ನಂ:1329, ಟೆಂಡರ್‌ಗಿಟ್ಟ ಮೊತ್ತವು ರೂ. 399.29 ಲಕ್ಷಗಳು (ಜಿ.ಎಸ್.ಟಿ ಸೇರಿಸಿ) ಹಾಗೂ 4) ಇಂಡೆಂಟ ನಂ:1360, ಟೆಂಡರ್‌ಗಿಟ್ಟ ಮೊತ್ತವು ರೂ. 1552.01 ಲಕ್ಷಗಳು (ಜಿ.ಎಸ್.ಟಿ ಸೇರಿಸಿ) ಇರುತ್ತದೆ.

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ಹಾಗೂ ಕಾಮಗಾರಿಯ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ 22.02.2023 ಸಂಜೆ 5.00 ಘಂಟೆವರೆಗೆ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ದಿನಾಂಕ: 23.02.2023 ರಂದು ಸಂಜೆ 5.10 ಘಂಟೆ (ಸಾಧ್ಯವಾದಲ್ಲಿ) ತಾಂತ್ರಿಕ ಬಿಡ್‌ನ್ನು ಹಾಗೂ ಆರ್ಥಿಕ ಬಿಡ್ಡನ್ನು ದಿನಾಂಕ :27.02.2023 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–297054 ಸಂಪರ್ಕಿಸಬಹುದಾಗಿದೆ.

Please note henceforth, any changes in calendar of events/ corrigendum/ ammendment will be published in e-proc portal only and will not be published in Newspaper.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ.,ವಿಭಾಗ ನಂ.2,ಬಾಗಲಕೋಟೆ

DIPR/BGK/RO-NO-875/MCA/2022-23

ಕರ್ನಾಟಕ ಸರ್ಕಾರ
ಆಯುಕ್ತರು ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕಾರ್ಯಾಲಯ ಕೂಡಲಸಂಗಮ
ತಾ॥ ಹುನಗುಂದ ಜಿಲ್ಲಾ: ಬಾಗಲಕೋಟ
ದೂರವಾಣಿ: 08351–268060 Email.:commksdbsangam@gmail.com

ಸಂ;ಕಿಅ/ಕೂಸಅಮ/ವಿ/ಇ–ಪ್ರೋ/ಟೆಂಡರ/ಸಿಆರ್–19/2022–23/476 ದಿನಾಂಕ:–13–02–2023

ಅಲ್ಪಾವಧಿ ಟೆಂಡರ ಪ್ರಕಟಣೆ

'ಇ' ಪ್ರೊಕ್ಯೂರಮೆಂಟ ಮುಖಾಂತರ (ಏಕ ಮತ್ತು ದ್ವಿಲಕೋಟೆ ಪದ್ಧತಿಯ ಮೇಲೆ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕೆಳಕಾಣಿಸಿದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ ಹಾಗೂ ಎಲೆಕ್ಟ್ರೀಕಲ್ ಸಿ.ಆಯ್.ಇ.ಜಿ 1ನೇ ದರ್ಜೆ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರಗಳನ್ನು ಕೆ.ಡಬ್ಲೂ–3 ಮತ್ತು ಕೆ.ಡಬ್ಲೂ–1ರ ಮೂಲಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ನಿಯಾಮಾವಳಿಯಂತೆ 'ಇ' ಪ್ರೊಕ್ಯೂರಮೆಂಟ ಮೂಲಕ ಟೆಂಡರನ್ನು ಕೆಳಗೆ ಸಹಿ ಮಾಡಿದವರಿಂದ ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಇ.ಎಮ್.ಡಿ ಹಾಗೂ ಟೆಂಡರ ದಾಖಲೆಗಳನ್ನು www.eproc.karnataka.gov.in ವೆಬಸೈಟ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರಗಳನ್ನು 'ಇ' ಪ್ರೊಕ್ಯೂರಮೆಂಟ ಮೂಲಕ ಸಲ್ಲಿಸುವದು.

ಕೆಲಸದ ಹೆಸರು

1) Improvements to road at Kudalasangam development board in Hunagund Taluka Bagalkote Dist. (Indent No.211)
Estimate cost: **Rs. 50.42 Lakhs & EMD amount. Rs. 1.19 Lakhs**
2) Estimate for arranging power supply to 70KW Commercial installation for Kalyan Mantap of Commissioner KSDB Kudalasangam at B.Bagewadi Town in B.Bagewadi Section of Basavan Bagewadi Sub Division. Under Self Executive Schem. by Using CSR-2021-22.(Indent No.212) (Reserve For ST)
Estimate cost: **Rs. 7.51 Lakhs & EMD amount. Rs. 8,900=00**

ವೆಬ್‌ಸೈಟ್ ಮೂಲಕ ಟೆಂಡರ ಮಾಹಿತಿ ಸ್ವೀಕರಣ ಪಡೆಯಲು ಕೊನೆಯ ದಿನಾಂಕ: **16–02–2023** ಮುಂಜಾನೆ **11.30** ಗಂಟೆಯವರೆಗೆ, ಟೆಂಡರಗಳಿಗೆ 'ಇ' ಪ್ರೊಕ್ಯೂರಮೆಂಟ ಮೂಲಕ ಅರ್ಜಿ ಸಲ್ಲಿಸುವುದು ಹಾಗೂ ಟೆಂಡರಗಳನ್ನು ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: **28–02–2023** ಸಾಯಂಕಾಲ **5.00** ಗಂಟೆಯವರೆಗೆ, ತಾಂತ್ರಿಕ & ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **02–03–2023** ಮುಂಜಾನೆ **11.30** ಗಂಟೆಗೆ **(ಏಕಲಕೋಟೆ ಪದ್ದತಿ)** ಹಾಗೂ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **02–03–2023** ಮುಂಜಾನೆ **11.30** (ಸಾಧ್ಯವಾದಲ್ಲಿ) **(ದ್ವಿಲಕೋಟೆ ಪದ್ದತಿ)**.

Estimate Amount put to tender is exclusive of GST but including all other charges as applicable GST shall be paid to the tendered amount separately.

ಹೆಚ್ಚಿನ ಮಾಹಿತಿಯನ್ನು ಆಯುಕ್ತರು ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕೂಡಲಸಂಗಮ ತಾ: ಹುನಗುಂದ ಇವರ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಅಥವಾ www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಆಯುಕ್ತರು, ಕೂಡಲಸಂಗಮ ಅಭಿವೃದ್ಧಿ ಮಂಡಳಿ
ಕೂಡಲಸಂಗಮ ತಾ: ಹುನಗುಂದ

IHM BANGALORE
Institute of Hotel Management Catering Technology & Applied Nutrition
(An Autonomous Body under Ministry of Tourism, Govt. of India)
Near M.S. Building & SKSJI Hostel, SJP Campus,
Bangalore – 560001.

TENDER NOTIFICATION

AMC for Supply of Provision & Stationery Items for Institute & EDC is notified in https://eproc.karnataka.gov.in. Tender document also can be downloaded from our website www.ihmbangalore.kar.nic.in

Sd/- PRINCIPAL /SECRETARY

ಮೈಸೂರು ವಿಶ್ವವಿದ್ಯಾನಿಲಯ
Estd 1916
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್–2022: ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)
ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು–570 005

ಸಂಖ್ಯೆ: ಪವಿ.1.7/ಸ್ಟೇಷನರಿ/2012–23 ದಿನಾಂಕ: 06–02–2023

ಟೆಂಡರ್ ಪ್ರಕಟಣೆ E-Procurement Portal ಮುಖಾಂತರ ಮಾತ್ರ

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಾಗಿರುವ ಓ.ಎಂ.ಆರ್. ಹಾಗೂ ಬಾರ್‌ಕೋಡೆಡ್ ಉತ್ತರ ಪತ್ರಿಕೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಸರಬರಾಜು ಮಾಡಲು ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ನ್ನು ಸಲ್ಲಿಸಲು **ಕೊನೆಯ ದಿನಾಂಕ:13–03–2023 ಸಂಜೆ 5.30ಗಂಟೆಯವರೆಗೆ, ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ:15–03–2023 ರಂದು ಬೆಳಿಗ್ಗೆ 11.00ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ) ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಪರೀಕ್ಷಾ ವಿಭಾಗ,** ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು.

Tender Indent Number is :
UOM/EB/1.7/Answer Booklet/2022-23, Dated: 09-02-2023

ಹೆಚ್ಚಿನ ವಿವರಗಳಿಗೆ **Web Site: https://eproc.karnataka.gov.in** ನ್ನು ವೀಕ್ಷಿಸುವುದು ಅಥವಾ ದೂರವಾಣಿ ಸಂಖ್ಯೆ: 0821–2419293, 2419287, 2419214, 2419204, ಅನ್ನು ಸಂಪರ್ಕಿಸುವುದು.

ಸಹಿ/–
ಕುಲಸಚಿವರು (ಪರೀಕ್ಷಾಂಗ)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001. ಫೋನ್ ಸಂ. 080–22265383
ವೆಬ್‌ಸೈಟ್: www.kiadb.in

ನಂ.ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–60/23/2022–23 ದಿನಾಂಕ: 13.02.2023

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹಾಗೂ ಕೆಳಗಿನ ಷೆಡ್ಯೂಲ್‌ನಲ್ಲಿ ಸೂಚಿಸಲಾದ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹಾಗೂ ಕರ್ನಾಟಕ ಸರ್ಕಾರದ ಕೆಪಿಡಬ್ಲ್ಯೂಡಿಯಿಂದ ನೀಡಲಾದ ದರ್ಜೆ–I (ಸಿವಿಲ್) ಮಾನ್ಯತೆ ಪಡೆದ ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್ ಆಹ್ವಾನಿಸಿದೆ.

ಕಾಮಗಾರಿಯ ಹೆಸರು: (1) ಕಲಬುರಗಿ ಜಿಲ್ಲೆಯ, ನಂದೂರ್ ಕೇಸರಟಗಿ 2ನೇ ಹಂತ, ಕೈಗಾರಿಕ ಪ್ರದೇಶದಲ್ಲಿರುವ ಸಿಎ ನಿವೇಶನ (ಅಗ್ನಿ ಶಾಮಕ ಠಾಣೆಗೆ ಕಾಯ್ದಿರಿಸಲಾದ) ರಲ್ಲಿ ಪ್ಲಗ್ & ಪ್ಲೇ ಮೂಲ ಸೌಕರ್ಯ ಸ್ಥಾಪನೆ. (**2ನೇ ಕರೆ**).

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯ : 22.02.2023, ಸಂಜೆ 4.30 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2
ಕೆ.ಐ.ಎ.ಡಿ.ಬಿ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/4675/ಆಕಾರ್/22–23

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿತ್ರದುರ್ಗ.
ನಂ.ಗ್ರಾ.ನೀ.ಸ.&ನೈ/ವಿ/ಚಿ/ಕಾಇಂ/ಬಿ4/ಟೆಂಡರ್//2022–23/2015
ದಿನಾಂಕ: 09.02.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು–1 ನಿಭಂದನೆಗೊಳಪಟ್ಟಂತೆ, ಸೂಪರಿಂಟೆಂಡಿಂಗ್ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ, ದಾವಣಗೆರೆ/ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಏಕ–ಲಕೋಟೆ ಪದ್ಧತಿಯಲ್ಲಿ 2022–23ನೇ ಸಾಲಿನ ಜೆ.ಜೆ.ಎಂ. ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಐಮಂಗಲ ಹಂತ–1ರ ಬಹುಗ್ರಾಮ ಕುಡಿಯುವ ನೀರು ಯೋಜನೆಯಿಂದ ವಿ.ವಿ.ಪುರ ಮತ್ತು ಇತರೆ 11 ಜನವಸತಿ, ಗುಡಿಹಳ್ಳಿ ಮತ್ತು ಇತರೆ 15 ಜನವಸತಿಗಳು ಮತ್ತು ಗೋಗುದ್ದು ಮತ್ತು ಇತರೆ 10 ಜನವಸತಿಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ ರೂ. 3600.00 ಲಕ್ಷಗಳ ಕಾಮಗಾರಿಗಳನ್ನು ಟೆಂಡರ್ ಪ್ರಕಟಿಸಲಾಗಿದೆ. ಪ್ರಿಬಿಡ್ ಮೀಟಿಂಗ್ ದಿನಾಂಕ: 17.02.2023ರಂದು ಬೆಳಿಗ್ಗೆ 11:15 ಗಂಟೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 23.02.2023 ಸಂಜೆ 04:00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24.02.2023 ರ ಸಂಜೆ 05:00 ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.02.2023ರ ಸಂಜೆ 16:00 ಗಂಟೆ ಕಾಮಗಾರಿಗಳ ವಿವರಗಳನ್ನು https://eproc.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ, ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ&ನೈರ್ಮಲ್ಯ ವಿಭಾಗ, ಚಿತ್ರದುರ್ಗ.

RO No. 994: DIPR/CTA/KSMCA/2022-23

ಮೈಸೂರು ವಿಶ್ವವಿದ್ಯಾನಿಲಯ
Estd 1916
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್–2022: ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)
ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು–570 005

ಸಂಖ್ಯೆ: ಪವಿ.6.7/180/2012–23 ದಿನಾಂಕ: 06–02–2023

ಟೆಂಡರ್ ಪ್ರಕಟಣೆ E-Procurement Portal ಮುಖಾಂತರ ಮಾತ್ರ

ಮಾನ್ಯ ಕುಲಪತಿಯವರ ಆದೇಶದ ಮೇರೆಗೆ, ಕುಲಸಚಿವ(ಪರೀಕ್ಷಾಂಗ)ರವರು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಮೌಲ್ಯಮಾಪನ ಕಾರ್ಯ ಪೂರ್ಣಗೊಂಡಿರುವ ಉಪಯೋಗಿಸಲಾದ ಹಳೆಯ ಉತ್ತರಪತ್ರಿಕೆಗಳನ್ನು ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿಯೇ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ವಿಲೇವಾರಿ ಮಾಡಲು ಪೇಪರ್ ಮಿಲ್ಸ್ ಉದ್ದಿಮೆದಾರರು ಹಾಗೂ ಹಳೆಯ ಪೇಪರ್ ವ್ಯಾಪರಿಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಮಾಡಲಾದ ಟೆಂಡರ್‌ನ್ನು **ದಿನಾಂಕ: 01–03–2023 ಸಾಯಂಕಾಲ 5.30ಗಂಟೆಯವರೆಗೆ,** ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಇವರಿಗೆ ಸಲ್ಲಿಸತಕ್ಕದ್ದು ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು **ದಿನಾಂಕ:03–03–2023 ರಂದು ಬೆಳಿಗ್ಗೆ 11.00ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ)** ವಿಶ್ವವಿದ್ಯಾನಿಲಯದ **ಕುಲಸಚಿವ(ಪರೀಕ್ಷಾಂಗ), ಪರೀಕ್ಷಾ ವಿಭಾಗದ ಕ್ರಾಫರ್ಡ್‌ಭವನ ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು.**

ಹೆಚ್ಚಿನ ವಿವರಗಳಿಗೆ **Web Site: https://eproc.karnataka.gov.in** ನ್ನು ವೀಕ್ಷಿಸುವುದು ಅಥವಾ **ದೂರವಾಣಿ ಸಂಖ್ಯೆ: 0821–2419214, 2419204,** ಅನ್ನು ಸಂಪರ್ಕಿಸುವುದು.

ಸಹಿ/–
ಕುಲಸಚಿವರು (ಪರೀಕ್ಷಾಂಗ)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಚೇರಿ (ಯೋಜನೆ)
3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009

ಸಂ:ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ&ಡಿಸಿಡಬ್ಲ್ಯೂ)/ತಾಂಸ–2/1405/2022–23 ದಿ: 13.02.2023

ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಪ್ರತಿಷ್ಠಿತ ತಯಾರಕರು/ಅಧಿಕೃತ ಮಾರಾಟಗಾರರಿಂದ ಮಲ್ಲೇಶ್ವರಂ, ಕೇಂದ್ರ ಉಗ್ರಾಣಕ್ಕೆ 3ನೇ ಪಾಲುದಾರ ಏಜೆನ್ಸಿಯಿಂದ ಪ್ರಮಾಣೀಕರಿಸಿದ ಪರೀಕ್ಷಾ ಪ್ರಮಾಣಪತ್ರದೊಂದಿಗೆ ತಾಪಮಾನ ಮಿತಿ–40°C ನಿಂದ 60°C, ಆಯಾಮದ ಹೊರಗಿನ ಡಯಾ ಶ್ರೇಣಿ 29 ಮಿಮೀ ನಿಂದ 32 ಮಿಮೀ. ಮೆದುಗೊಳವೆ ತೂಕ ಮೀಟರ್‌ಗೆ 420 ಗ್ರಾಂ ನಿಂದ 500 ಗ್ರಾಂ. ಕೆಲಸದ ಒತ್ತಡವು 3000ಪಿಎಸ್‌ಐ (210 ಬಾರ್) ಗಿಂತ ಕಡಿಮೆಯಾಗಬಾರದು, ಸ್ಫೋಟದ ಒತ್ತಡವು 7500ಪಿಎಸ್‌ಐ (525 ಬಾರ್) ಗಿಂತ ಕಡಿಮೆಯಾಗಬಾರದು, ಕನಿಷ್ಠ ಬೆಂಡ್ ತ್ರಿಜ್ಯ 100 ಮಿಮೀ ನಿಂದ 127 ಮಿಮೀ, ಪಾಲಿಯೇಥರ್–ಯುರೆಥೇನ್ –ನಿಂದ ಮುಚ್ಚಿದ ಸಿಂಥೆಟಿಕ್ ಫೈಬರ್ ಬಲಪಡಿಸುವ ವಸ್ತುಗಳ ಎರಡು ಬ್ರೈಡ್ಸ್, ಅಂತರಿಕ ಒಳಭಾಗಕ್ಕೆ ಪಾಲಿಯೆಸ್ಟರ್‌ನಿಂದ ನಿರ್ಮಿಸಲಾದ 19ಮಿಮೀ ಆಂತರಿಕ ಡಯಾ ಥರ್ಮೋಪ್ಲಾಸ್ಟಿಕ್ ಒಳಚರಂಡಿ ಮೆದುಗೊಳವೆ ಸರಬರಾಜು ಮಾಡುವ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ.

ಟೆಂಡರ್‌ಗಿಟ್ಟ ಮೊತ್ತ: ₹ 1,70,65,620/– ಇಎಂಡಿ: ₹ 2,56,000/-

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **28.02.2023**ರ ಸಂಜೆ **4:00** ಗಂಟೆಯೊಳಗೆ. ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ: **03.03.2023**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ಯೋಜನೆ)

ವಾ.ಸಾ.ಸಂ.ಇ/4675/2022–23

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಾರ್ಯಾಲಯ, ಕಿರಿಯ ಕಾಯ್ದೆಗಳ ವಿಭಾಗ,
3ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಯಶವಂತಪುರ, ಬೆಂಗಳೂರು–560022. ದೂ: 08023470479
ಸಂ: ವಾತೆಜಂಆ(ಕಿಕಾ)/ಡಿಇಬ/ಸಿಆರ್.04/2022–23 ದಿನಾಂಕ: 13.02.2023

ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ಕಿರಿಯ ಕಾಯ್ದೆಗಳ ವಿಭಾಗ, ಬೆಂಗಳೂರು ಇವರ ಕಚೇರಿಯ ಕರ್ತವ್ಯ ನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ 45 (ನಲವತ್ತೈದು) 'ಸಂಖ್ಯಾ ನಮೂದಕರ' ಸೇವೆಯನ್ನು ನೀಡಲು 1999ರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **22 ಫೆಬ್ರವರಿ, 2023**. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಸಂಪರ್ಕಿಸಿ **http:// www.eproc.karnataka.gov.in or http:// www.ctax.kar.nic.in**

ಸಹಿ/– ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು,
ಕಿರಿಯ ಕಾಯ್ದೆಗಳ ವಿಭಾಗ, ಬೆಂಗಳೂರು

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ KSMC
(Formerly Known as Mysore Minerals Limited)
(A Government of Karnataka Undertaking)
Regd. ಕಚೇರಿ: ಟಿಟಿಎಂಸಿ, 'ಎ' ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ,
ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027.
ಫ್ಯಾಕ್ಸ್: 080–2221 3172 ದೂರವಾಣಿ: 080–22278813 / 14 / 15 / 16
Website: www.ksmcl.org

No.129/KSMCL/MECH/BKW/Tractor & trailer/2022-23/3100 Date: 13.02.2023

ಇ–ಟೆಂಡರ್ ಆಹ್ವಾನ

ಹಾಸನ ಜಿಲ್ಲೆಯಲ್ಲಿರುವ ಅರಸೀಕೆರೆ ತಾಲ್ಲೂಕಿನ ಸಂಸ್ಥೆಯ ಭಾಗೇಷಪುರ ಜೇಡಿ ಮಣ್ಣಿನ ಗಣಿಗೆ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಖರೀದಿಸಲು ಇ–ಟೆಂಡರ್ ಆಹ್ವಾನಿಸಲಾಗಿದೆ.

ವೇಳಾಪಟ್ಟಿ

ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	08.03.2023 ಸಂಜೆ 5.00 ಗಂಟೆಯವರೆಗೆ.
ಟೆಂಡರ್ ತೆರೆಯುವ ದಿನಾಂಕ	10.03.2023 ಬೆಳಗ್ಗೆ 11.00 ಗಂಟೆಗೆ.
ಇ.ಎಂ.ಡಿ ಠೇವಣಿ ಮೊತ್ತ	ರೂ.31,000/–

ಇ–ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಫ್ಲಾಟ್‌ಫಾರ್ಮ್ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ಮಾಹಿತಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆ: **080-4601 0000 /6894 8777.**

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ&ಜಾ).

DIPR/CP/AAPL/RO4656/22-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ,
ಟಿಇಸಿ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು – 560 002.
ಸಂಖ್ಯೆ: ಕಾಪಾಅ/ರಮೂಸೌ/ಟಿಇಸಿ/ಟೆಂಡರ್/26/2022–23 ದಿನಾಂಕ: 08.02.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ದತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಟಿಇಸಿ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃ.ಬೆಂ.ಮ.ಪಾಲಿಕೆ) ಇವರು ವಿವಿಧ ಅಭಿಯಂತರರು ಮತ್ತು ಇತರೆ ಕಚೇರಿ ಉದ್ಯೋಗಿಗಳನ್ನು ಬೃ.ಬೆಂ.ಮ.ಪಾಲಿಕೆಗೆ ಒದಗಿಸಲು ಏಜೆನ್ಸಿಯನ್ನು ನಿಯೋಜಿಸಿಕೊಳ್ಳಲು (**Availing Graduate / Diploma Engineers and Literate Assistants for Road Infrastructure Wing.**) (ತಾಂತ್ರಿಕ ಮತ್ತು ಆರ್ಥಿಕ) ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ

ನಿಯೋಜನೆಯ ಹೆಸರು	ಟೆಂಡರಿಗಿಟ್ಟ ಮೊತ್ತ (₹.ಲಕ್ಷಗಳಲ್ಲಿ) (ಜಿಎಸ್‌ಟಿ ಹೊರತುಪಡಿಸಿ)	ಇಎಂಡಿ (₹.ಲಕ್ಷಗಳಲ್ಲಿ)
ರಸ್ತೆ ಮೂಲಭೂತಸೌಕರ್ಯ ವಿಭಾಗಕ್ಕೆ ಪದವಿ/ಡಿಪ್ಲೋಮ ಅಭಿಯಂತರರು ಮತ್ತು ವಿದ್ಯಾವಂತ ಸಹಾಯಕರನ್ನು ನಿಯೋಜಿಸುವುದು.	125.30	2.00 (1 ಲಕ್ಷ ಇ–ಪಾವತಿ ಮುಖಾಂತರ ಮತ್ತು ಉಳಿಕೆ ರೂ.1.00 ಲಕ್ಷ ಬ್ಯಾಂಕ್ ಗ್ಯಾರಂಟಿ ಮುಖಾಂತರ)

<u>ಟೆಂಡರ್ ವೇಳಾಪಟ್ಟಿ:</u> (1) ಆರ್‌ಎಫ್‌ಪಿ ದಾಖಲೆಗಳು ದಿನಾಂಕ **13.02.2023** ರಿಂದ ದೊರೆಯುತ್ತವೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **16.02.2023**ರ ಮಧ್ಯಾಹ್ನ **3:30** ಗಂಟೆಗೆ ನಡೆಸಲಾಗುವುದು. (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ದಿನಾಂಕ **21.02.2023**ರ ಸಂಜೆ **4:00** ಗಂಟೆಯೊಳಗೆ ಅಪ್‌ಲೋಡ್ ಮಾಡುವುದು. (4) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **22.02.2023**ರ ಬೆಳಿಗ್ಗೆ **11:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಪ್ರಸ್ತಾವನೆ ತೆರೆಯುವುದನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in.** ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಮೂಸೌ–ಟಿಇಸಿ ವಿಭಾಗ

ಕ್ಷೇಮ ಕುಶಲ

ಅರಿತು ಕುಡಿದರೆ ಆರೋಗ್ಯ

ಭಯವೇಕೆ ಬರೆಯೋಕೆ?

ಪರಿಹಾರವೇನು?

ಏಕಾಗ್ರತೆ ಕಷ್ಟ – ಎನಿಸುವಾಗ ಕಗ್ಗದ ಈ ಪದ್ಯ ನೆನಪಿಸಿಕೊಳ್ಳಿ;

ಏಸು ಸಲ ತಪವಗೈದೇಸು ಬನ್ನವನಾಂತು |
ಕೌಶಿಕಂ ಬ್ರಹ್ಮರ್ಷಿಪದಕರ್ಹನಾದನ್ ||
ಘಾಸಿಪಡುತಿನ್ನೊಮ್ಮೆ ಮತ್ತೊಮ್ಮೆ ಮರಮರಳಿ |
ಲೇಸಾಗಿಸಾತ್ಮವನು – ಮಂಕುತಿಮ್ಮ ||

ಪ್ರಯತ್ನದಿಂದ ಎಲ್ಲವನ್ನೂ ಸಾಧಿಸಬಹುದು ಎಂಬ ನಂಬಿಕೆ ಇರಲಿ. ಕೆಲವು ಪ್ರಾಯೋಗಿಕ ಅಂಶಗಳನ್ನು ಮನದಟ್ಟು ಮಾಡಿಕೊಂಡು ಆಚರಣೆಗೆ ತರುವುದರಿಂದ ಪರೀಕ್ಷಾ ಆತಂಕದಿಂದ ಪಾರಾಗಬಹುದು.

1. ಪರೀಕ್ಷಾ ಭಯ ಎನ್ನುವುದು ಪೂರ್ವಸಿದ್ಧತೆಯ ಕೊರತೆಯ ಸೂಚಕ. ಈ ಬಗೆಯ ಕೊರತೆ ಇದ್ದರೆ ಅದನ್ನು ಒಪ್ಪಿಕೊಳ್ಳೋಣ.
2. ದಿನದ ಒಟ್ಟೂ 24 ಗಂಟೆಗಳು ಯಾವುದಕ್ಕೆ ಬಳಕೆಯಾಗುತ್ತಿದೆ ಎಂಬುದನ್ನು ಗಮನಿಸೋಣ. ಸೋರಿಕೆ ಕಂಡ ಕಡೆ ಅದನ್ನು ಭದ್ರಪಡಿಸೋಣ.
3. ಮೊಬೈಲ್, ಇಂಟರ್‌ನೆಟ್, ಟಿ. ವಿ.ಗೆ ಸಮಯವನ್ನು ನಿಗದಿಪಡಿಸೋಣ. ಪರೀಕ್ಷೆಗೆ ಹದಿನೈದು ದಿನ ಮುಂಚಿನಿಂದ ಇವುಗಳನ್ನು ಸಂಪೂರ್ಣ ನಿಷೇಧಿಸೋಣ. (ಇವುಗಳನ್ನು ಕಲಿಕೆಗಾಗಿ ಮಾತ್ರ ವಿವೇಚನೆಯಿಂದ ಬಳಸಬಹುದು; ಆದರೆ ಮಂಗಮನಸ್ಸು ಅಲ್ಲಿಂದ ರೀಲ್ಸ್‌ಗೆ ಜಿಗಿಯದಂತೆ ಜಾಗ್ರತೆ ವಹಿಸೋಣ.)
4. ಪಠ್ಯಗಳ ಸಾರಕ್ಕೆ ತಕ್ಕಂತೆ ಗಟ್ಟಿಯಾದ ಓದು, ಬರವಣಿಗೆ ಮತ್ತು ಪುನರ್ಮನನಗಳನ್ನು ಮಾಡೋಣ. ನೆನಪಿಡಿ ಟಿಪ್ಪಣಿ ತೆಗೆಯುವುದು, ಬರಹದಲ್ಲಿ ಮೂಡಿಸುವುದನ್ನು ಮಾಡಿದರೆ ಅದು ಮನಸ್ಸಿನಲ್ಲಿ ಉಳಿಯುತ್ತದೆ. 24–10–7 – ಈ ಸೂತ್ರವನ್ನು ಪಾಲಿಸಿ. ಅಂದರೆ ಓದಿದ್ದನ್ನು 24 ಗಂಟೆಯೊಳಗೆ ಮನಸ್ಸಿಗೆ ತಂದುಕೊಳ್ಳಬೇಕು; ಇದು ಹತ್ತು ನಿಮಿಷದ ಮನೋವ್ಯಾಯಾಮ, ಹೀಗೆ ಏಳು ದಿನ ಮಾಡಿದರೆ ಆ ವಿಷಯ ನಮ್ಮ ಮನಸ್ಸಿನಲ್ಲಿ ನೆಲೆ ನಿಲ್ಲುವುದು.
5. ನಿತ್ಯ ಲಘು ವ್ಯಾಯಾಮ, ಸ್ನಾನ, ಸರಿಯಾದ ಸಮಯಕ್ಕೆ ಆಹಾರ ಸೇವನೆ ಮಾಡೋಣ. ದೇಹದಂಡನೆ, ಉಪವಾಸ, ಅತಿಯಾದ ಚಹಾ–ಕಾಫಿಗಳ ಸೇವನೆ ಮಾಡದಿರೋಣ.
6. ಪರೀಕ್ಷಾ ಹಿಂದಿನ ದಿನವೂ ಸೇರಿದಂತೆ ಪ್ರತಿ ದಿನ ಕನಿಷ್ಠ ಎಂಟು ಗಂಟೆ ನಿದ್ರೆ ಮಾಡೋಣ. ನಿದ್ರೆಯ ಸಮಯದಲ್ಲಿ ಕಲಿತ ವಿಷಯಗಳು ಮನಸ್ಸಿನಲ್ಲಿ ನೆನಪಿನ ಕೋಶಗಳಾಗಿ ಪರಿವರ್ತಿತವಾಗುತ್ತವೆ. ಆದುದರಿಂದ ನಿದ್ರೆಗೆಡದಿರೋಣ.

ರಘು ವಿ.

ಪರೀಕ್ಷಾಕೊಠಡಿಯಲ್ಲಿ ಆತಂಕಿತರಾಗಿ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಕಂಡಾಗೆಲ್ಲ ಮೊದಲಿಗೆ ಈ ವ್ಯವಸ್ಥೆಯ ಪರಿಶೀಲನೆ ಆಗಬೇಕು ಎನಿಸುತ್ತದೆ. ಆದರೆ ಕೆಲವು ವಿದ್ಯಾರ್ಥಿಗಳು ಹುಮ್ಮಸ್ಸಿನಿಂದ ತಮ್ಮ ಲೇಖನಾಯುಧಗಳನ್ನು ಮಸೆದು ಖುಷಿಯಾಗಿ ಕುಳಿತಿರುವುದನ್ನೂ ಕಂಡಿದ್ದೇನೆ.

ವಿದ್ಯಾರ್ಥಿಗಳ ಆತಂಕಕ್ಕೆ ಮುಖ್ಯ ಕಾರಣ ಅಪಯಶಸ್ಸಿನ ಭಯ. ನಿರೀಕ್ಷಿತ ಪ್ರಶ್ನೆಗಳು ಬಾರದಿದ್ದರೆ? ಕಡಿಮೆ ಅಂಕಗಳು ಬಂದರೆ? ಫೇಲಾದರೆ? ಅಂದರೆ ಮುಂದಿನ ಪರಿಣಾಮಗಳ ಬಗ್ಗೆ ಚಿಂತಾಕ್ರಾಂತರಾಗುತ್ತಾರೆ. ಪರೀಕ್ಷೆ ಇರುವುದು ವಿದ್ಯಾರ್ಥಿಗಳನ್ನು ಬೆದರಿಸಲು ಅಲ್ಲ. ಕಲಿಕಾಮಟ್ಟದ ಮೌಲ್ಯಮಾಪನ ನಡೆಯಲು ಪ್ರಸ್ತುತದಲ್ಲಿ ಈ ಪದ್ಧತಿ ಜಾರಿಯಲ್ಲಿದೆ. ಆದರೆ ವಿದ್ಯಾರ್ಥಿಗಳು ಗಮನಿಸಬೇಕಾದ ಮುಖ್ಯ ಅಂಶವೆಂದರೆ, ದಿನೇ ದಿನೇ ಪರೀಕ್ಷೆಗಳು ವಿದ್ಯಾರ್ಥಿಸ್ನೇಹಿಯಾಗುತ್ತಿವೆ. ಸೆಮಿಸ್ಟರ್ ಪದ್ಧತಿ, ಪ್ರಶ್ನೆಪತ್ರಿಕೆಯಲ್ಲಿ ಸರಳತೆ ಜಾರಿಯಾಗಿದೆ. ನೆನಪಿಗಿಂತ ವಿಷಯದ ಕೌಶಲದ ಪ್ರತಿಬಿಂಬ ಪಡೆಯುವ ಪರೀಕ್ಷಾಕ್ರಮಕ್ಕೆ ಒತ್ತು ನೀಡಲಾಗುತ್ತಿದೆ. ಆದುದರಿಂದ ಮೊದಲಿಗೆ ಈ ಭಯವನ್ನು ಬಿಡಬೇಕು.



ಪರೀಕ್ಷೆಗೆ ವರ್ಷಾರಂಭದಿಂದಲೂ ತಯಾರಿ ನಡೆಸಬೇಕು ಎಂಬ ಸೂಚನೆ ತಲಾತಲಾಂತರದಿಂದ ಇದೆ. ಆದರೆ ಕಲಿಕೆಯ ಗುಟ್ಟಿರುವುದು ಕೇವಲ ಸಾತತ್ಯದಿಂದಲ್ಲ. ಇದಕ್ಕೆ ಮುಖ್ಯವಾಗಿ ಏಕಾಗ್ರತೆ ಬೇಕು. ಮನಸ್ಸಿನ ಗ್ರಹಣಶಕ್ತಿ ಬಲವಾಗಿದ್ದರೆ ಯಾವುದೇ ವಿಷಯವನ್ನು ಕೆಲವೇ ಗಂಟೆಗಳಲ್ಲಿ ಕರಗತ ಮಾಡಿಕೊಳ್ಳಬಹುದು. ಏಕಾಗ್ರತೆ ಬರುವುದು ಅಭ್ಯಾಸದಿಂದ! ಅಂದರೆ ಸುತ್ತಿ ಸುಳಿಯುವ ಮನಸ್ಸನ್ನು ಕಲಿಕೆಯ ವಿಷಯದಲ್ಲಿ ಕಟ್ಟಿಹಾಕಿದರೆ ಅದು ಅನಿವಾರ್ಯವಾಗಿ ಅದರಲ್ಲಿ ಮುಳುಗಿ ಒಳಗಿನ ಮುತ್ತುರತ್ನಗಳನ್ನು ಮೇಲೆತ್ತಿ ತರುತ್ತವೆ. ಆಗ ನಮಗೆ ಕಲಿಕೆಯ ಆನಂದದ ಅರಿವಾಗುತ್ತದೆ. ಕುಳಿತಲ್ಲಿ ಕುಳಿತುಕೊಳ್ಳುವ ಅಭ್ಯಾಸ ಇದಕ್ಕೂ ಮುನ್ನಿನದು. ದೇಹದ ಚಡಪಡಿಕೆ ಮನಸ್ಸಿನ ಮೇಲೂ ಪರಿಣಾಮ ಬೀರುತ್ತದೆ. ಹಾಗೇ ಮನಸ್ಸಿನ ಚಡಪಡಿಕೆ ದೇಹದ ಮೇಲೂ ಪರಿಣಾಮ ಬೀರುತ್ತದೆ. ಕಲಿಕೆಯ ಶಿಸ್ತು ಹೊರಗಿನಿಂದ ಆರೋಪಿತವಾಗುವಂಥದ್ದಲ್ಲ, ಒಳಗಿನಿಂದ ವಿಕಾಸವಾಗಬೇಕು. ಅದೇ ಸಾಧನೆ. ಹೀಗೆಂದು ಇದು ಕೇವಲ ಯೋಗಿಗಳ ಸ್ವತ್ತಲ್ಲ; ಪ್ರತಿಯೊಬ್ಬ ವಿದ್ಯಾಕಾಂಕ್ಷಿಯ ಸ್ವತ್ತು. ಮೊದಲಿಗೆ ಬಲವಾದ ಸಂಕಲ್ಪ ಮಾಡಬೇಕು. ‘ಈ ದಿನ ಒಂದು ಗಂಟೆ ಅವಧಿಯಲ್ಲಿ ನಾನು ಈ ವಿಷಯದ ಇಂತಹ ಅಧ್ಯಾಯವನ್ನು ಕರಗತ ಮಾಡಿಕೊಳ್ಳುತ್ತೇನೆ’ ಎಂಬ ಸಂಕಲ್ಪ ಮಾಡಿ ಕುಳಿತ ಬಳಿಕ ಅಲ್ಲಾಡದಂತೆ ಕುಳಿತು ಅಧ್ಯಯನ ಮಾಡಬೇಕು. ಆರಂಭದಲ್ಲಿ ಕಷ್ಟವಾದೀತು. ಆದರೆ ಕನಿಷ್ಠ ದಿನಕ್ಕೆ ಒಂದು ಗಂಟೆಯಷ್ಟಾದರೂ ಏಕಾಗ್ರತೆಯಿಂದ ಅಧ್ಯಯನ ಮಾಡಿದರೆ ಪರೀಕ್ಷೆಯಲ್ಲಿ ಪ್ರಥಮಶ್ರೇಣಿ ಖಚಿತ.

ಕೊರತೆಯೇಕೆ?

ಮನಸ್ಸಿನ ಸ್ವಭಾವವೇ ನಿಂತಲ್ಲಿ ನಿಲ್ಲದೆ ಸುತ್ತುವುದು. ಜೊತೆಗೆ ಅದಕ್ಕೆ ಇಂದ್ರಿಯಗಳ (ಕಣ್ಣು, ಕಿವಿ, ಮೂಗು, ನಾಲಗೆ, ಸ್ಪರ್ಶಗಳ) ಸೆಳೆತ ಬೇರೆ. ಆಧುನಿಕ ಯುಗದಲ್ಲಂತೂ ಇವು ಮತ್ತೂ ಜಾಗೃತವೂ ಸೂಕ್ಷ್ಮವೂ ಆಗಿ ವರ್ತಿಸುತ್ತಿವೆ. ಹಿಂದೆ ದೂರದ ದೃಶ್ಯ ನೋಡಲು ಅಲ್ಲಿಗೇ ಹೋಗಬೇಕಿತ್ತು. ಆದರೆ ಇಂದು ಅದನ್ನು ಅಂಜನ ಹಾಕಿದಂತೆ ನಮ್ಮ ಅಂಗೈಯ ಮೊಬೈಲ್ ಕೆಲವೇ ಸೆಕಂಡುಗಳಲ್ಲಿ ನಮ್ಮ ಮುಂದಿಡುತ್ತದೆ. ಬೇಕಾದ ಹಾಡು ಕೇಳಲು ಸಾಧ್ಯ; ಸಿನಿಮಾಕ್ಕೆ ಕೂಡ ಚಿತ್ರಮಂದಿರದ ಹಂಗಿಲ್ಲ. ಬೇಕಾದ ತಿನಿಸುಗಳಿಗೆ ಕುಳಿತಲ್ಲಿಂದಲೇ ಅಪ್ಪಣೆ ನೀಡಬಹುದು. ಇಂದು ಎಲ್ಲರೂ ಮಹಾರಾಜರೇ! ‘ಯಾರಲ್ಲಿ?’ ಎಂದರೆ, ‘ಏನಪ್ಪಣೆ?’ ಎಂದು ನೂರು ಆ್ಯಪ್‌ಗಳು ಕೈಕಟ್ಟಿ ನಿಲ್ಲುತ್ತವೆ. ಇಷ್ಟೆಲ್ಲ ಸವಲತ್ತುಗಳಿರುವಾಗ ವಿದ್ಯಾರ್ಥಿಗಳ ತಪೋಭಂಗ ಸಹಜವೇ. ಇನ್ನು ಸಾಮಾಜಿಕ ಮಾಧ್ಯಮಗಳು ಕೆದಕಿ ಕೆಣಕಿ ಹಣಕಿ ಸ್ಟೇಟಸ್ ಹಾಕಿಸಲು ತವಕಿಸುತ್ತವೆ. ಇಂತಹ ಸಂದರ್ಭದಲ್ಲಿ ಏಕಾಗ್ರತೆಯನ್ನು ಕಾಪಾಡಿಕೊಳ್ಳಬಲ್ಲವನೇ ಆಧುನಿಕ ಋಷಿ!

ಡಾ. ವಿಜಯಲಕ್ಷ್ಮಿ ಪಿ.

‘ಶಿವರಾತ್ರಿ ಬಂತು, ಚಳಿ ಶಿವ ಶಿವಾ ಅಂತ ಓಡಿಹೋಯ್ತು’ ಎಂಬುದು ಜನಪದರ ಹವಾಮಾನ ವಿಶ್ಲೇಷಣೆ. ಅದು ವಾಸ್ತವಿಕವೂ ಹೌದು.

ಶಿವರಾತ್ರಿ ಕಾಲ ಬದಲಾವಣೆಯನ್ನು ಸೂಚಿಸುವ ಹಬ್ಬ. ಅತಿ ಚಳಿಯಿಂದ ಬಿಸಿಲಿಗೆ ಒಡ್ಡಿಕೊಳ್ಳುವ ಸಮಯ. ಚಳಿಗಾಲದಲ್ಲಿ ದೇಹಕ್ಕೆ ಅತಿ ಕಡಿಮೆ ದ್ರವ ಪದಾರ್ಥಗಳ ಅವಶ್ಯಕತೆ ಇದ್ದರೆ, ಬೇಸಿಗೆಯಲ್ಲಿ ಅವುಗಳ ಅವಶ್ಯಕತೆ ಹೆಚ್ಚಾಗುತ್ತಾ ಹೋಗುತ್ತದೆ. ಅದನ್ನು ಪೂರೈಸಲು ಪಾನೀಯ ಪಾನ ಅವಶ್ಯಕ. ಆದರೆ ಎಂತಹ ಪಾನೀಯಗಳನ್ನು ಪಾನ ಮಾಡಬೇಕೆನ್ನುವ ವಿವೇಚನೆ ಅತ್ಯವಶ್ಯಕ.

ಎಲ್ಲ ದ್ರವಪದಾರ್ಥಗಳೂ ಪಾನೀಯಗಳೇ. ಬಾಯಾರಿಕೆಯನ್ನು ನೀಗಿಸಲು ಉತ್ತಮ ಪಾನೀಯ ಎಂದರೆ ನೀರು. ಯಾವುದೇ ಕಾಲದಲ್ಲಾದರೂ ಅತಿಯಾಗಿ ನೀರನ್ನು ಸೇವಿಸಿದರೆ ಜೀರ್ಣಶಕ್ತಿಯು ಕಡಿಮೆಯಾಗುತ್ತದೆ, ನೀರನ್ನು ಸೇವಿಸದೇ ಇದ್ದರೆ ಬಳಲಿಕೆ ಉಂಟಾಗುತ್ತದೆ. ಮಿತವಾಗಿ, ಆದರೆ ದೇಹಕ್ಕೆ ಹಿತವಾಗುವಂತೆ ಜಾಣ್ಮೆಯಿಂದ ನೀರನ್ನು ಸೇವಿಸಬೇಕು. ತಂಪಿನಿಂದ ಬಿಸಿಲಿಗೆ ದೇಹ ಒಗ್ಗಿಕೊಳ್ಳುವಾಗ ಉರಿಶೀತವಾಗಿ ಅಲರ್ಜಿ, ನೆಗಡಿ, ಕೆಮ್ಮು ಮುಂತಾದ ತೊಂದರೆಗಳು ಉತ್ಪನ್ನವಾಗಬಹುದು. ಆದ್ದರಿಂದ ಬೇಸಿಗೆ ಪ್ರಾರಂಭವಾದಾಗ ಸಂಸ್ಕರಿತ ನೀರು, ಎಂದರೆ ಏಲಕ್ಕಿ, ಕಾಚು, ಲಾವಂಚ, ಶ್ರೀಗಂಧ ಇವುಗಳಲ್ಲಿ ಯಾವುದಾದರೊಂದನ್ನು ಹಾಕಿ ಕುದಿಸಿ ತಣಿಸಿದ ನೀರನ್ನು ಉಪಯೋಗಿಸಬೇಕು. ಇದರಿಂದ ಅಜೀರ್ಣವೇ ಮೊದಲಾದ ತೊಂದರೆಗಳು, ಉರಿಮೂತ್ರ, ಕಣ್ಣು ಕೆಂಪಾಗುವುದು, ಕಣ್ಣುರಿ, ಗಂಟಲಿನ ಉರಿಯೂತ, ಮೊದಲಾದ ಅನೇಕ ರೋಗಗಳನ್ನು ತಡೆಗಟ್ಟಬಹುದು.

ಪ್ರಕೃತಿದತ್ತವಾಗಿರುವ ಬೇಸಿಗೆಯ ಪಾನೀಯ ಎಂದರೆ ಅದು ಎಳನೀರು. ಇದನ್ನು ಹಿತಮಿತವಾಗಿ ಸೇವಿಸಿದರೆ ದೇಹ–ಮನಸ್ಸೆರಡಕ್ಕೂ ಆಹ್ಲಾದವೀಯುತ್ತದೆ. ಅತಿಸಾರ, ಬಳಲಿಕೆ, ವಾಂತಿಯಾದಾಗ ಎಳನೀರಿನ ಸೇವನೆ ಉತ್ತಮ ಔಷಧರೂಪವಾದ ಆಹಾರ. ಬಿಸಿಲಿನ ಕಾವಿನಿಂದಾಗಿ ಅನೇಕರಿಗೆ ಅತಿಯಾದ ಮಲಬದ್ಧತೆಯಾಗುತ್ತದೆ, ಆಗ ಎಳನೀರನ್ನು ಬಿಸಿಮಾಡಿ, ಎಂದರೆ ಎಳನೀರನ್ನು ಒಂದು ಪಾತ್ರೆಗೆ ಬಗ್ಗಿಸಿ, ಆ ಪಾತ್ರೆಯನ್ನು ಬಿಸಿನೀರಿನಲ್ಲಿಟ್ಟು ಬೆಚ್ಚಗೆ ಮಾಡಿ ಕುಡಿಯುವುದರಿಂದ ಮಲಬದ್ಧತೆಯೂ ನಿವಾರಣೆಯಾಗುತ್ತದೆ.

ಬೇಸಿಗೆಯ ಮತ್ತೊಂದು ಉತ್ತಮವಾದ ಪಾನೀಯ ಎಂದರೆ ಬಾರ್ಲಿಗಂಜಿ ಅಥವಾ ಬಾರ್ಲಿನೀರು. ಬಿಸಿಲಿನ ಬೇಗೆಯಿಂದ ಮೂತ್ರದ ಪ್ರಮಾಣ ಕಡಿಮೆಯಾಗಿ, ಉರಿಮೂತ್ರ ಉಂಟಾದಲ್ಲಿ ದೇಹದ ಉಷ್ಣತೆ ಹೆಚ್ಚಾಗಿ ತಲೆ ತಿರುಗುವುದು ಮೊದಲಾದ ತೊಂದರೆ ಇದ್ದರೆ, ಬಾರ್ಲಿಗಂಜಿ ಅಥವಾ ಬಾರ್ಲಿನೀರು ಉತ್ತಮವಾದ ಪಾನೀಯ. ಬಾರ್ಲಿಹಿಟ್ಟು ಅಥವಾ ಬಾರ್ಲಿಕಾಳನ್ನು ಬೇಯಿಸಿ ಅನ್ನ ಅಥವಾ ಗಂಜಿಯಂತೆಯು ಸೇವಿಸಬಹುದು.

ಹಣ್ಣುಗಳ ಸೇವನೆಗೆ ಉತ್ತಮವಾದ ಕಾಲ ಬೇಸಿಗೆ. ಅವರವರ ದೇಹ ಪ್ರಕೃತಿಗನುಗುಣವಾಗಿ ಹಣ್ಣುಗಳನ್ನು ಅಥವಾ ಹಣ್ಣಿನ ರಸವನ್ನು, ಪಾನಕಗಳನ್ನು ಸೇವಿಸಬಹುದು. ಆದರೆ ಯಾವುದೇ ಕಾರಣಕ್ಕೂ ಹಣ್ಣು ಮತ್ತು ಹಾಲನ್ನು ಬೆರೆಸಿ ತಯಾರಿಸುವ ಪಾನೀಯಗಳನ್ನು ಸೇವಿಸಬಾರದು. ಹಣ್ಣು–ಹಾಲಿನ ಮಿಶ್ರಣ ಎಂದರೆ ‘ಮಿಲ್ಕ್ ಶೇಕ್’, ಫ್ರೂಟ್ ಸಲಾಡಿಗೆ ಹಾಲು ಸೇರಿಸುವುದು, ಹಾಲಿನಿಂದ ತಯಾರಾದ ಐಸ್ ಕ್ರೀಂ ಬೆರೆಸಿ ಸೇವಿಸುವುದು ಅನೇಕ ರೋಗಗಳಿಗೆ ಆಹ್ವಾನವಿತ್ತಂತೆ. ಹಣ್ಣು ಮತ್ತು ಹಾಲು ಎರಡೂ ದೇಹವನ್ನು ಪೋಷಿಸುವ ಆಹಾರವಾದರೂ ಅವೆರಡರ ಮಿಶ್ರಣ ಆರೋಗ್ಯವನ್ನು ಹಾಳುಮಾಡುತ್ತದೆ.

ಬೇಸಗೆಯಲ್ಲಿ ಎಲ್ಲರಿಗೂ ಅತಿ ಪ್ರಿಯವಾದ ಹಣ್ಣು ಕಲ್ಲಂಗಡಿ, ಕರಬೂಜ. ಕಲ್ಲಂಗಡಿ ತಿಂದರೆ ನೆಗಡಿ ಕೆಮ್ಮು ಗಂಟಲುನೋವು ಬರುತ್ತದೆ ಎನ್ನುವವರೂ ಇದ್ದಾರೆ. ಪ್ರಕೃತಿ ಚಿಕಿತ್ಸಕರ ಪ್ರಕಾರ ಕಲ್ಲಂಗಡಿ ಹಣ್ಣು ತಿಂದು, ಅಷ್ಟೇ ಪ್ರಮಾಣದಲ್ಲಿ ನೀರನ್ನು ಕುಡಿದರೆ ಅದು ದೇಹದಲ್ಲಿನ ಕಶ್ಮಲಗಳನ್ನು ಮೂತ್ರ ಮತ್ತು ಬೆವರಿನ ಮೂಲಕ ಹೊರ ಹಾಕಿ ದೇಹಕ್ಕೆ ತಂಪನ್ನೀವುದರ ಜೊತೆಗೆ ಚರ್ಮರೋಗವೇ ಮೊದಲಾದ ಅನೇಕ ದೀರ್ಘಕಾಲೀನ ರೋಗಗಳನ್ನು ಗುಣಪಡಿಸುತ್ತದೆ. ಆದರೆ ಕಲ್ಲಂಗಡಿಯಲ್ಲಿಯೇ ನೀರಿದೆ ಎಂದು ನೀರನ್ನು ಸೇವಿಸದೆ ಹೋದರೆ ನೆಗಡಿ, ಮೈತುರಿಕೆ, ಉರಿಮೂತ್ರ ಮೊದಲಾದ ರೋಗಗಳು ಉತ್ಪನ್ನವಾಗಲೂಬಹುದು. ಕರಬೂಜಕ್ಕೆ ಉಪ್ಪು ಮೆಣಸಿನ ಮಿಶ್ರಣ ಬೆರೆಸಿ ಸೇವಿಸುವುದು ಅನುಕೂಲಕರವಾದರೂ, ಪಿತ್ತದ ತೊಂದರೆ ಇರುವವರಿಗೆ ಮೂಗು, ಮೂತ್ರ, ಮಲಗಳಲ್ಲಿ ರಕ್ತಪ್ರವೃತ್ತಿಯಾಗಲು ಕಾರಣವಾಗಬಹುದು.

ಬಿಸಿಲಿನ ಬೇಗೆಯನ್ನು ತಣಿಸಲು ಸಾಂಪ್ರದಾಯಿಕ ಪಾನೀಯ ಎಂದರೆ ಹೆಸರುಕಾಳಿನ ಪಾನಕ ಮತ್ತು ಭತ್ತದ ಅರಳಿನ ಗಂಜಿ ಅಥವಾ ಪಾನಕ. ಹೆಸರುಕಾಳನ್ನು ನೆನೆಸಿ, ರುಬ್ಬಿ, ಅದರಿಂದ ಬಂದ ರಸಕ್ಕೆ ಏಲಕ್ಕಿ, ಬೆಲ್ಲವನ್ನು ಬೆರೆಸಿ ಸೇವಿಸುವುದು ಉರಿಮೂತ್ರ, ಮಲಬದ್ಧತೆ ಮೊದಲಾದ ರೋಗಗಳನ್ನು ತಡೆಗಟ್ಟುತ್ತದೆ ಮತ್ತು ಗುಣಪಡಿಸುತ್ತದೆ ಕೂಡ. ಹಾಗೆಯೇ ಭತ್ತದ ಅರಳನ್ನು ಕುದಿಸಿ ಸಕ್ಕರೆ ಅಥವಾ ಬೆಲ್ಲ ಬೆರೆಸಿ ಏಲಕ್ಕಿ ಸೇರಿಸಿ ಸೇವಿಸುವುದು ಆರೋಗ್ಯಕರ. ಅರಳಿನ ಹಿಟ್ಟು, ಹಣ್ಣಿನ ರಸ ಅಥವಾ ಒಣಹಣ್ಣುಗಳಾದ ಅಂಜೂರ, ದ್ರಾಕ್ಷಿ, ಖರ್ಜೂರ, ಇವುಗಳಲ್ಲಿ ಯಾವುದಾದರೂ ಒಂದನ್ನು ಸೇರಿಸಿ ಮಂಥಿನಲ್ಲಿ ಕಡೆದು, ಅಥವಾ ಮಿಕ್ಸಿಯಲ್ಲಿ ಕಡೆದು, ಅದಕ್ಕೆ, ಏಲಕ್ಕಿ ಮತ್ತು ಜೇನುತುಪ್ಪವನ್ನು ಬೆರೆಸಿ ಕುಡಿಯುವುದರಿಂದ ಅತಿಯಾದ ಬಾಯಾರಿಕೆ, ವಾಂತಿ, ಭೇದಿ, ಮೈ ಒಣಗುವಿಕೆ, ಆಮ್ಲಪಿತ್ತ, ಕೆಮ್ಮು–ದಮ್ಮುಗಳನ್ನು ತಡೆಗಟ್ಟಲು ಮತ್ತು ಗುಣಪಡಿಸಲು ರಾಮಬಾಣವಾಗಿದೆ.

ಅತಿ ತಂಪಾದ ನೀರು/ಪಾನೀಯಗಳನ್ನು ಕುಡಿಯುವಾಗ ತಂಪೆನಿಸಿದರೂ, ಅವು ರಕ್ತಪರಿಚಲನೆಯನ್ನು ವ್ಯತ್ಯಾಸ ಮಾಡುವ ಮೂಲಕ ಚರ್ಮ, ಹೃದಯ, ರಕ್ತನಾಳ ಸಂಬಂಧಿ, ರೋಗಗಳ ಉತ್ಪತ್ತಿಗೆ ಕಾರಣವಾಗುತ್ತವೆ. ರಾಸಾಯನಿಕ ತಂಪು ಪಾನೀಯಗಳ ಸೇವನೆ ಯಕೃತ್ತಿನ ಮೇಲೂ ದುಷ್ಪರಿಣಾಮವನ್ನು ಉಂಟುಮಾಡುತ್ತವೆ. ಮದ್ಯಪಾನಪ್ರಿಯರಿಗಂತೂ ಅತಿ ತೊಂದರೆ ಕೊಡುವ ಕಾಲ ಬೇಸಿಗೆ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಮಾದರಿ ಪ್ರಶ್ನೋತ್ತರಗಳು

ಎಸ್ಸೆಸ್ಸೆಲ್ಸಿ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಅಸಂಭವ ಘಟನೆಯ ಸಂಭವನೀಯತೆಯು……..

A) 0 B) 1
C) 10 D) 100

ಉತ್ತರ : (A) 0

2) $f(x) = x^2 + 7x - 10$ ಆದಾಗ f((2).ನ ಬೆಲೆ ಕಂಡುಹಿಡಿಯಿರಿ.

A) 3 B) 5
C) 8 D) 10

ಉತ್ತರ : (C) 8

3) $\tan x = \frac{7}{24}$ ಆದರೆ cot x ಗೆ ಸಮನಾದುದು ……………………

A) 7 B) 24
C) $\frac{7}{24}$ D) $\frac{24}{7}$

ಉತ್ತರ : (D) $\frac{24}{7}$

4) (2, 3) ಮತ್ತು (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳು

A) (3, 5) B) (7, 3)
C) (3, 4) D) (8, 3)

ಉತ್ತರ: (A) (3, 5)

5) A (6, 1), B (8, 2), C (9,4) ಮತ್ತು D (p, 3) ಬಿಂದುಗಳು ಸಮಾಂತರ ಚತುರ್ಭುಜದ ಅನುಕ್ರಮ ಶೃಂಗಗಳಾದರೆ, p ಯ ಬೆಲೆ ಏನು?

A) 3 B) 5
C) 7 D) 8

ಉತ್ತರ : (C) 7

6) 24, 21, 18 …. ಈ ಸಮಾಂತರ ಶ್ರೇಢಿಯ ಎಷ್ಟು ಪದಗಳ ಮೊತ್ತ 78 ಆಗಿದೆ?

A) 6 ಅಥವಾ 19 B) 4 ಅಥವಾ 13
C) 8 ಅಥವಾ 23 D) 8 ಅಥವಾ 19

ಉತ್ತರ:– (B) 4 ಅಥವಾ 13

ಪರಿಹಾರ: $a = 24$, $d = 21\text{-}24 = -3$, $S_n = 78$

ನಾವು n ಕಂಡುಹಿಡಿಯಬೇಕಾಗಿದೆ.

$$S_n = \frac{n}{2}[2a + (n-1)d]$$

$$78 = \frac{n}{2}[48 + (n-1)(-3)]$$

$$\Rightarrow 78 = \frac{n}{2}[51 - 3n]$$

$$3n^2 - 51n + 156 = 0$$
$$n^2 - 17 + 52 = 0$$
$$(n - 4)(n - 13) = 0$$

∴ n = 4 ಅಥವಾ 13

7) (Sin 30°+cos 60°)-(sin 60° + cos 30°) ಇದು ಈ ಕೆಳಗಿನ ಯಾವುದಕ್ಕೆ ಸಮವಾಗಿದೆ?

(a) 0 (b) 1+2√3
(c) 1-√3 (d) 1+√3

ಉತ್ತರ : (c) 1-√3

ವಿವರಣೆ: sin 30° = ½, sin 60° = √3/2, cos 30° = √3/2 and cos 60° = ½

(½+½)-(√3/2+√3/2)
= 1 – [(2√3)/2]
= 1 – √3

8) 26 ಮತ್ತು 91 ಮಸಾಅ…………………

(a) 15 (b) 13
(c) 19 (d) 11

Ans: (b) 13

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

9) 6762 ನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ನಿರೂಪಿಸಿ.

ಉತ್ತರ : $6762 = 2 \times 3 \times 7^2 \times 23$

2	6762
3	3381
7	1127
7	161
	23

10) $x^2 + 2x + 1$. ಬಹುಪದೋಕ್ತಿಯ ಶೂನ್ಯವನ್ನು ಕಂಡುಹಿಡಿಯಿರಿ.

ಉತ್ತರ : $f(x) = x^2 + 2x + 1$.

$= X^2 + 1x + 1x + 1$
$= X(x+1) + 1(x + 1)$
$= (x + 1)(x + 1)$
$= (x + 1)^2$

f(x) = 0 ಆದಾಗ

$(x + 1)^2 = 0$
$X + 1 = \sqrt{0}$
$X = 1 = 0$
$X = -1$

$x^2 + 2x + 1$. ಬಹುಪದೋಕ್ತಿಯ ಶೂನ್ಯವು –1 ಆಗಿದೆ.

11) Δ ABC, ಯಲ್ಲಿ ∠ABC = 90°, BD ⊥ AC, BD= 8cm ಮತ್ತು AD= 4 cm ಆದಾಗ CDಯನ್ನು ಕಂಡುಹಿಡಿಯಿರಿ.

ಉತ್ತರ :



∠ABC = 90° BD ⊥ AC.

$\therefore BD^2 = AD \times CD \Rightarrow 8^2 = 4 \times CD$

$CD = \frac{64}{4} = 16$

∴ CD = 16 cm

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಗಣಿತ

ಪಿಯುಸಿ

48) ಕೇಂದ್ರ ಮೂಲಬಿಂದುವಾಗಿರುವ ಮತ್ತು ನಾಭಿಗಳನ್ನು x–ಅಕ್ಷದ ಮೇಲೆ ಹೊಂದಿರುವ ದೀರ್ಘ ವೃತ್ತ ಸಮೂಹದ ಅವಕಲನ ಸಮೀಕರಣವನ್ನು ರಚಿಸಿರಿ.

ಪರಿಹಾರ: ದತ್ತ ಧೀರ್ಘ ವೃತ್ತಗಳ ಸಮೂಹದ ಸಮೀಕರಣ

$$\frac{x^2}{a^2} + \frac{y^2}{b^2} = 1 \ldots\ldots\ldots\ldots(1)$$

ಸಮೀಕರಣ (1)ನ್ನು x ಗೆ ಅನುಗುಣವಾಗಿ ಅವಕಲಿಸಿದಾಗ

$$\frac{2x}{a^2} + \frac{2y}{b^2}\frac{dy}{dx} = 0$$

ಅಥವಾ

$$\frac{y}{x}\left(\frac{dy}{dx}\right) = \frac{-b^2}{a^2} \ldots\ldots\ldots\ldots(2)$$ ದೊರೆಯುತ್ತದೆ

ಎರಡೂ ಬದಿಯನ್ನು ಗೆ ಅನುಗುಣವಾಗಿ ಅವಕಲಿಸಿದಾಗ

$$\frac{y}{x}\left(\frac{d^2y}{dx^2}\right) + \left(\frac{x\frac{dy}{dx} - y}{x^2}\right)\frac{dy}{dx} = 0$$

ಅಥವಾ

$$\frac{xy}{x}\left(\frac{d^2y}{dx^2}\right) + x\left(\frac{dy}{dx}\right)^2 - y\frac{dy}{dx} = 0 \ldots\ldots\ldots(3)$$

ಇದೇ ನಮಗೆ ಬೇಕಾಗಿರುವ ಅವಕಲನ ಸಮೀಕರಣವಾಗಿದೆ

49) ವಕ್ರ ರೇಖೆಗಳ ಸಮೂಹದ ಯಾವುದೇ ಬಿಂದು (x, y)ನಲ್ಲಿ ಸ್ಪರ್ಶಕದ ಓಟವು $\frac{x^2 + y^2}{2xy}$ ಆದಾಗ, ವಕ್ರರೇಖೆಗಳ ಸಮೂಹದ ಸಮೀಕರಣವು $x^2 - y^2 = cx$. ಆಗುತ್ತದೆ ಎಂದು ತೋರಿಸಿ.

ಪರಿಹಾರ: ವಕ್ರ ರೇಖೆಯ ಯಾವುದೇ ಬಿಂದುವಿನಲ್ಲಿ ಸ್ಪರ್ಶಕದ ಓಟವು dy dx ಎಂದು ತಿಳಿದಿದೆ.

ಆದ್ದರಿಂದ

$$\frac{dy}{dx} = \frac{x^2 + y^2}{2xy}$$

ಅಥವಾ

$$\frac{dy}{dx} = \frac{1 + \frac{y^2}{x^2}}{\frac{2xy}{x}}$$

ಸ್ಪಷ್ಟವಾಗಿ ಸಮೀಕರಣ (1), ಸಮಜಾತೀಯ ಅವಕಲಿತ ಸಮೀಕರಣ ಇದನ್ನು ಬಿಡಿಸುವಾಗ y = vx ಎಂದು ಆದೇಶಿಸುತ್ತೇವೆ. y = vx ನ್ನು x ಗೆ ಅನುಗುಣವಾಗಿ ಅವಕಲಿಸಿದಾಗ

$$\frac{dy}{dx} = v + x\frac{dv}{dx}$$

$$v + x\frac{dv}{dx} = \frac{1 + y^2}{2v}$$

ಅಥವಾ

$$x\frac{dv}{dx} = \frac{1 - v^2}{2v}$$

$$\frac{2v}{1 - v^2}dv = \frac{dx}{x}$$

ಅಥವಾ

$$\frac{2v}{v^2 - 1}dv = \frac{dx}{x}$$ ದೊರೆಯುತ್ತದೆ

ಆದ್ದರಿಂದ $\int \frac{2v}{v^2 - 1}dv = -\int \frac{1}{x}dx$

$$\log|v^2 - 1| = -\log|x| + \log|C_1|$$

ಅಥವಾ

$$\log|(v^2 - 1)(x)| = \log|C_1|$$

$$(v^2 - 1)x = \pm C_1$$

v ಯನ್ನು $\frac{x}{y}$ ನಿಂದ ಬದಲಿಸಿದಾಗ

$$\left(\frac{y^2}{x^2} - 1\right)x = \pm C_1$$

ಅಥವಾ $(y^2 - x^2) = \pm C_1 x$ ಅಥವಾ $x^2 - y^2 = Cx$ ದೊರೆಯುತ್ತದೆ.

50) $$\begin{bmatrix} x+3 & z+4 & 2y-7 \\ -6 & a-1 & 0 \\ b-3 & -21 & 0 \end{bmatrix} = \begin{bmatrix} 0 & 6 & 3y-2 \\ -6 & -3 & 2c+2 \\ 2b+4 & -21 & 0 \end{bmatrix}$$ ಆಗಿದ್ದರೆ

x, z a, b, c, y. ಇವುಗಳನ್ನು ಕಂಡುಹಿಡಿಯಿರಿ

ಪರಿಹಾರ: - ನೀಡಿರುವ ಮಾತೃಕೆಗಳು ಸಮಾನವಾಗಿವೆ

$x + 3 = 0 \Rightarrow x = -3$
$z + 4 = 6 \Rightarrow z = 6 - 4 \Rightarrow z = 2$
$a - 1 = -3 \Rightarrow a = -3 + 1 \Rightarrow a = -2$
$2c + 2 = 0 \Rightarrow c = \frac{-2}{2} \Rightarrow c = -1$
$b - 3 = 2b + 4 \Rightarrow 2b - b = -4 - 3 \Rightarrow b = -7$
$2y - 7 = 3y - 2 \Rightarrow 3y - 2y = -7 + 2 \Rightarrow y = -5$

51) $A(2\hat{i} - \hat{j} + \hat{k})$, $B(\hat{i} - 3\hat{j} - 5\hat{k})$, $C(3\hat{i} - 4\hat{j} + 4\hat{k})$ ಬಿಂದುಗಳು ಲಂಬಕೋನ ತ್ರಿಕೋನದ ಶೃಂಗಗಳೆಂದು ತೋರಿಸಿ.

ಪರಿಹಾರ: ನಮಗೆ ತಿಳಿದಂತೆ

$$\overrightarrow{AB} = (1-2)\hat{i} + (-3+1)\hat{j} + (-5-1)\hat{k} = -\hat{i} - 2\hat{j} - 6\hat{k}$$

$$\overrightarrow{BC} = (3-1)\hat{i} + (-4+3)\hat{j} + (-4+5)\hat{k} = 2\hat{i} - \hat{j} + \hat{k}$$

ಮತ್ತು

$$\overrightarrow{CA} = (2-3)\hat{i} + (-1+4)\hat{j} + (1+4)\hat{k} = -\hat{i} + 3\hat{j} + 5\hat{k}$$

ಹಾಗಾಗಿ $|\overrightarrow{AB}|^2 = 41 = 6 + 35 = |\overrightarrow{BC}|^2 + |\overrightarrow{CA}|^2$

ಆದ್ದರಿಂದ ತ್ರಿಭುಜ ABC ಲಂಬಕೋನ ತ್ರಿಕೋನವಾಗಿದೆ.

ಪಿಯುಸಿ ರಸಾಯನವಿಜ್ಞಾನದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್‌ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ವಿಧಾನಮಂಡಲ ಪ್ರಶ್ನೋತ್ತರ ಕಲಾಪ

ಪಶು ಚಿಕಿತ್ಸಾಲಯ: ಘೋಷಣೆ 100, 20ಕ್ಕೆ ಆದೇಶ

ಬೆಂಗಳೂರು: ರಾಜ್ಯದಲ್ಲಿ 100 ಪಶು ಚಿಕಿತ್ಸಾಲಯಗಳನ್ನು ಆರಂಭಿಸುವುದಾಗಿ 2022ರ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಮತ್ತೊಂದು ಬಜೆಟ್ ಮಂಡಿಸುವ ಹೊತ್ತಿಗೆ ಕೇವಲ 20 ಚಿಕಿತ್ಸಾಲಯಗಳನ್ನು ಆರಂಭಿಸಲು ಆದೇಶ ಹೊರಡಿಸಲಾಗಿದೆ.

ವಿಧಾನಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಬಸವಂತರಾಯ ದೊಡ್ಡಗೌಡರ ಪ್ರಶ್ನೆಗೆ ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ ನೀಡಿದ ಉತ್ತರದಲ್ಲಿ ಈ ವಿವರಗಳಿವೆ. 20 ಚಿಕಿತ್ಸಾಲಯ ಆರಂಭಕ್ಕೆ ಕಳೆದ ಮೇ ತಿಂಗಳಿನಲ್ಲಿ ಆದೇಶ ಹೊರಡಿಸಲಾಗಿದೆ. 30 ಚಿಕಿತ್ಸಾಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. 50 ಚಿಕಿತ್ಸಾಲಯಗಳನ್ನು ಆರಂಭಿಸಲು ಕ್ರಮವಹಿಸಲಾಗಿದೆ ಎಂದು ವಿವರಿಸಿದರು.

ದೇವಸ್ಥಾನ:ಸಿಎಂ ತವರು ಜಿಲ್ಲೆಗೆ ಹೆಚ್ಚು ಮೊತ್ತ

ಮುಜರಾಯಿ ಮತ್ತು ಮುಜರಾಯಿಯೇತರ ದೇವಸ್ಥಾನಗಳ ಅಭಿವೃದ್ಧಿಗೆ ನೀಡಿದ ಅನುದಾನದಲ್ಲಿ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಪ್ರತಿನಿಧಿಸುವ ಬೆಳಗಾವಿ ಬಿಟ್ಟರೆ ಅತಿ ಹೆಚ್ಚಿನ ಪಾಲನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆ ಹಾವೇರಿ ಪಡೆದಿದೆ.

ಬಿಜೆಪಿಯ ಹರತಾಳು ಹಾಲಪ್ಪ ಅವರ ಪ್ರಶ್ನೆಗೆ ಸಚಿವೆ ಶಶಿಕಲಾ ಜೊಲ್ಲೆ ನೀಡಿದ ಉತ್ತರದಲ್ಲಿ ಈ ವಿವರಗಳಿವೆ.

2022ರಲ್ಲಿ ಒಟ್ಟು ₹422 ಕೋಟಿ ಬಿಡುಗಡೆ ಮಾಡಲಾಗಿದೆ. ಈ ಪೈಕಿ ಬೆಳಗಾವಿ ಜಿಲ್ಲೆಗೆ ₹69.62 ಕೋಟಿಯಷ್ಟು ಬೃಹತ್ ಮೊತ್ತ ನೀಡಲಾಗಿದೆ. ಹಾವೇರಿ ಜಿಲ್ಲೆಗೆ ₹38.75 ಕೋಟಿ ನೀಡಲಾಗಿದೆ. ಕಲಬುರಗಿಗೆ ₹26.32 ಕೋಟಿ, ದಕ್ಷಿಣ ಕನ್ನಡಕ್ಕೆ ₹24.55 ಕೋಟಿ, ತುಮಕೂರಿಗೆ ₹23.04 ಕೋಟಿ, ಬಾಗಲಕೋಟೆಗೆ ₹20.94, ಉತ್ತರಕನ್ನಡಕ್ಕೆ ₹19.38 ಕೋಟಿ ಹಾಗೂ ಚಿಕ್ಕಮಗಳೂರಿಗೆ ₹19.52 ಕೋಟಿ ದಕ್ಕಿದೆ. ಇದಲ್ಲದೇ, ಪರಿಶಿಷ್ಟ ಜಾತಿ ಉಪಯೋಜನೆಯಡಿ ಖರ್ಚಾಗದ ₹19.38 ಕೋಟಿ ಹಾಗೂ ಗಿರಿಜನ ಉಪಯೋಜನೆಯಡಿ ಖರ್ಚಾಗದ ₹30.36 ಕೋಟಿಯನ್ನೂ ಈ ಸಾಲಿನಲ್ಲಿ ಒದಗಿಸಲಾಗಿದೆ.

ಎತ್ತು, ಕುರಿ, ಹಂದಿಗೂ ವಿಮೆ

ಹಾಲುಕೊಡುವ ರಾಸುಗಳಿಗೆ ನೀಡುತ್ತಿರುವ ವಿಮಾ ಸೌಲಭ್ಯವನ್ನು ಎತ್ತು, ಹೋರಿ, ಕೋಣ, ಕುರಿ, ಮೊಲ ಹಾಗೂ ಹಂದಿಗಳಿಗೂ ವಿಸ್ತರಿಸಲಾಗುವುದು ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ ಹೇಳಿದರು.

ಕಾಂಗ್ರೆಸ್‌ನ ಯು.ಟಿ. ಖಾದರ್ ಪ್ರಶ್ನೆಗೆ ಉತ್ತರ ನೀಡಿದ ಅವರು, ವಿಮಾ ಸಂಸ್ಥೆ ಗುರುತಿಸಲು ಟೆಂಡರ್ ಪ್ರಕ್ರಿಯೆ ನಡೆಸಲಾಗಿದ್ದು, ₹14 ಕೋಟಿ ಅನುದಾನ ವನ್ನೂ ನೀಡಲಾಗಿದೆ. ಮಲೆನಾಡು ಗಿಡ್ಡತಳಿಯ ರಾಸುಗಳನ್ನು ವಿಮೆಗೆ ಒಳಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ವಿವರಿಸಿದರು.

ಆಡಳಿತ ಸೌಧ: ತಾರತಮ್ಯಕ್ಕೆ ಆಕ್ಷೇಪ

‘ಒಂದೇ ವಿಧಾನಸಭಾ ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳಿಗೆ ಆಡಳಿತಸೌಧ, ಉಪನೋಂದಣಾಧಿಕಾರಿ ಕಚೇರಿ ನೀಡುತ್ತೀರಿ. ಕೆಲವು ಕ್ಷೇತ್ರಗಳಿಗೆ ಒಂದು ಸೌಧಕ್ಕೂ ಅನುದಾನ ನೀಡುವುದಿಲ್ಲ’ ಎಂದು ಕಾಂಗ್ರೆಸ್‌ನ ಶಿವಾನಂದ ಪಾಟೀಲ ಆಕ್ಷೇಪ ವ್ಯಕ್ತಪಡಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಅವರು, 2017ರಲ್ಲೇ ಹೊಸ ತಾಲ್ಲೂಕುಗಳನ್ನು ಘೋಷಿಸಿದರೂ ಈವರೆಗೂ ಆಡಳಿತಸೌಧಕ್ಕೆ ಅನುದಾನ ನೀಡಿಲ್ಲ. ತಮ್ಮ ಪಕ್ಷದ ಬಬಲೇಶ್ವರ ಕ್ಷೇತ್ರದಲ್ಲಿ ಬಬಲೇಶ್ವರ, ತಿಕೋಟಾ ಎರಡು ತಾಲ್ಲೂಕುಗಳಿಗೆ ಹೊಸದಾಗಿ ಆಡಳಿತ ಸೌಧ ನಿರ್ಮಿಸಲಾಗುತ್ತಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಕಂದಾಯ ಸಚಿವ ಆರ್. ಅಶೋಕ, ‘ಕಾಂಗ್ರೆಸ್ ಶಾಸಕ, ನಿಮ್ಮ ಸ್ನೇಹಿತರಾದ ಎಂ.ಬಿ. ಪಾಟೀಲರನ್ನೇ ಕೇಳಿ. ನಿಡಗುಂದಿ, ಕೊಲ್ಹಾರ ತಾಲ್ಲೂಕುಗಳಲ್ಲಿ ಆಡಳಿತ ಸೌಧ ನಿರ್ಮಿಸಲು ಜಿಲ್ಲಾಧಿಕಾರಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಆರ್ಥಿಕ ಇಲಾಖೆ ಈ ಪ್ರಸ್ತಾವನೆಗೆ ಒಪ್ಪಿಗೆ ನೀಡಿಲ್ಲ. ಇಲಾಖೆ ಜತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದರು. ‘ಒಂದು ವಿಧಾನಸಭಾ ಕ್ಷೇತ್ರಕ್ಕೆ ಎರಡು ಕಚೇರಿಗಳನ್ನು ನೀಡುವ ಬದಲು, ನಮಗೂ ಒಂದು ಕೊಡಿ’ ಎಂದು ಶಿವಾನಂದ ಪಾಟೀಲ ಹೇಳಿದರು. ಹೊಸದಾಗಿ ರಚನೆಯಾದ ಕೆಜಿಎಫ್, ಮೂಡಬಿದರೆ, ಕಡಬ, ಮೂಲ್ಕಿ, ಬ್ರಹ್ಮಾವರ, ಕಾಪು, ಬೈಂದೂರು, ಹೆಬ್ರಿ, ಕುರುಗೋಡು, ಕಂಪ್ಲಿ, ದಾಂಡೇಲಿಗಳಲ್ಲಿ ಆಡಳಿತ ಸೌಧ ನಿರ್ಮಿಸಲಾಗುತ್ತಿದೆ ಎಂದರು.

ವಿಧಾನಸಭೆಯಲ್ಲಿ ಸ್ವಾರಸ್ಯಕರ ಚರ್ಚೆಗೆ ವಸ್ತುವಾದ ಚುನಾವಣೆ

ಮುಂದಿನ ಅಧಿಕಾರ ಯಾವ ಪಕ್ಷಕ್ಕೆ

ಪ್ರಜಾವಾಣಿ ವಾರ್ತೆ

ಗಹನ ಚರ್ಚೆಯಲ್ಲಿ ಸಚಿವರಾದ ಮುನಿರತ್ನ, ಬಿ.ಸಿ. ನಾಗೇಶ್, ಕೆ. ಗೋಪಾಲಯ್ಯ.

ಬೆಂಗಳೂರು: ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬರಲಿದೆ ಎಂಬುದರ ಕುರಿತು ಸ್ವಾರಸ್ಯಕರ ಚರ್ಚೆ ವಿಧಾನಸಭೆಯಲ್ಲಿ ಸೋಮವಾರ ನಡೆಯಿತು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸಿ ಮಾತನಾಡಿದ ಬಿಜೆಪಿಯ ಸಿ.ಟಿ. ರವಿ, ‘ಕುರೂಪಿ ಮಗುವೊಂದು ಹುಟ್ಟಿದಾಗ ಆತನ ಮಾವ, ಮಗುವನ್ನು ನೋಡಲು ಟಿಕೆಟ್ ವ್ಯವಸ್ಥೆ ಮಾಡಿ ಹಣ ಸಂಪಾದಿಸಿದ್ದ. ಪ್ರಜಾಪ್ರಭುತ್ವದಲ್ಲಿ ಒಂದು ಪಕ್ಷಕ್ಕೆ ಬಹುಮತ ನೀಡಿದರೆ ಸುಂದರ ಮಗುವಿಗೆ ಜನ್ಮವಿತ್ತಂತೆ. ಆಗ, ಮಗು ಇಟ್ಟುಕೊಂಡು ವ್ಯಾಪಾರ ಮಾಡಲಾಗದು. ಕುರೂಪಿ ಮಗುವಿಟ್ಟುಕೊಂಡು ವ್ಯಾಪಾರ ಮಾಡುವ ಚಿಂತನೆಯಲ್ಲಿ ಕೆಲವರಿದ್ದಾರೆ. ಅದು ಆಗಬಾರದು’ ಎಂದರು.

ಮಧ್ಯಪ್ರವೇಶಿಸಿದ ಜೆಡಿಎಸ್ ಉಪ ನಾಯಕ ಬಂಡೆಪ್ಪ ಕಾಶೆಂಪೂರ, ‘ನಾವು ಈಗಾಗಲೇ 93 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಿಸಿದ್ದು, 123 ಸೀಟು ಬರುವುದು ಖಚಿತ’ ಎಂದರು. ‘2004, 2018ರಲ್ಲಿ ಕುರೂಪಿ ಮಗು ಹುಟ್ಟಿದಂತೆ ಈಗಲೂ ಆಗುತ್ತದೆ’ ಎಂದು ಬಂಡೆಪ್ಪ ಭಾವಿಸಬಾರದು’ ಎಂದು ರವಿ ಕುಟುಕಿದರು.

‘ನಮಗೆ ಬಹುಮತ ಸಿಗುವುದು ಖಚಿತ’ ಎಂದು ಬಂಡೆಪ್ಪ ಹೇಳಿದಾಗ, ‘ತೆಲಂಗಾಣದಲ್ಲಾ, ಯಾವ ರಾಜ್ಯದಲ್ಲಿ’ ಎಂದು ಕಂದಾಯ ಸಚಿವ ಆರ್. ಅಶೋಕ ಕೆಣಕಿದರು.

ಜೆಡಿಎಸ್‌ನ ಸಿ.ಎಸ್. ಪುಟ್ಟರಾಜು, ‘ಇಂತಹ ವ್ಯಂಗ್ಯವೇತಕ್ಕೆ? ಜನರು ತೀರ್ಮಾನ ಮಾಡುತ್ತಾರೆ. ಯಾರು ಯಾರ ಮನೆ ಬಾಗಿಲಿಗೆ ಬರುತ್ತಾರೆ ಎಂದು ನಾವೂ ನೋಡುತ್ತೇವೆ’ ಎಂದು ಸವಾಲು ಹಾಕಿದರು. ಅದಕ್ಕೆ ಪ್ರತಿಕ್ರಿಯಿಸಿದ ಅಶೋಕ, ‘ಬಹುಮತ ಬರುವುದಿಲ್ಲ ಎಂದು ಜೆಡಿಎಸ್‌ನವರೇ ಒಪ್ಪಿಕೊಂಡರು. ಅವರ ಮನೆ ಬಾಗಿಲಿಗೆ ಬೇರೆಯವರು ಬರುತ್ತಾರೆ ಎಂದು ಕಾಯುತ್ತಿದ್ದಾರೆ. ನಿಮ್ಮ ಸಂಖ್ಯೆ 20–30 ಎಷ್ಟು?’ ಎಂದು ವ್ಯಂಗ್ಯದಿಂದ ಪ್ರಶ್ನಿಸಿದರು.

‘ನೀವು ಬಹುಮತದಿಂದ ಅಧಿಕಾರಕ್ಕೆ ಬರುತ್ತೀರಾ’ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಶ್ನಿಸಿದರು. ಮಧ್ಯೆ ಮಾತನಾಡಿದ ವೀರಣ್ಣ ಚರಂತಿಮಠ, ‘35–40ರಲ್ಲಿ ಗೆಲ್ಲಿಸಿ ಎಂದು ನಿಮ್ಮ ನಾಯಕರು ಹೋಮ ಮಾಡಿಸುತ್ತಾರೆ. 116ರಲ್ಲಿ ಗೆಲ್ಲಿಸಿ ಎಂದು ಹೋಮ ಮಾಡಿಸಿದರೆ ಒಳ್ಳೆಯದಾಗುತ್ತಿತ್ತು’ ಎಂದು ಜೆಡಿಎಸ್ ಸದಸ್ಯರ ಕಾಲೆಳೆದರು.

‘ಯಾರು ಯಾರ ಕಾಲು ಹಿಡಿಯಬೇಕಾಗುತ್ತದೆ ಎಂದು ಹೇಳುತ್ತಿದ್ದಾರೆ. ಎಲ್ಲ ಕಾಲದಲ್ಲೂ ಲಾಟರಿ ಹೊಡೆಯುವುದಿಲ್ಲ’ ಎಂದು ರವಿ ಹಂಗಿಸಿದರು. ಕಾಂಗ್ರೆಸ್‌ನ ಕೆ.ಜೆ. ಜಾರ್ಜ್, ‘ಒಳ್ಳೆಯ ಮಗುವೇ ಹುಟ್ಟಲಿ. ಅದು ಕಾಂಗ್ರೆಸ್‌ನವರದ್ದಾಗಿರಲಿ ಎಂಬುದು ಜನರ ಮುಂದೆ ನಮ್ಮ ಮನವಿ’ ಎಂದರು.

ಶಾಸಕ ಶಿವಲಿಂಗೇಗೌಡರು ಅರ್ಜುನನೋ, ಅಭಿಮನ್ಯುವೋ?

‘ಜನರ ಬೆಂಬಲ ಇರುವವರೆಗೆ ನಾನು ಅರ್ಜುನನೇ. ಎಂದಿಗೂ ಅಭಿಮನ್ಯು ಆಗಲಾರೆ’ ಎಂದು ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ಡಬಲ್ ಎಂಜಿನ್ ಸರ್ಕಾರದಿಂದ ಅನುಕೂಲವಾಗಲಿದೆ ಎಂಬ ಸಿ.ಟಿ. ರವಿ ಮಾತಿಗೆ ಆಕ್ಷೇಪಿಸಿದ ಶಿವಲಿಂಗೇಗೌಡ, ‘ಇಷ್ಟೆಲ್ಲ ಹೊಗಳುವ ಬದಲು ಬಿಜೆಪಿ ಗೆಲ್ಲಿಸಿ ಎಂದು ಚುನಾವಣೆ ಪ್ರಚಾರ ಮಾಡಿಬಿಡಪ್ಪ’ ಎಂದರು.

‘ಜೆಡಿಎಸ್–ಕಾಂಗ್ರೆಸ್ ಮಧ್ಯೆ ಯಾವ ಪಕ್ಷ ಆಯ್ದುಕೊಳ್ಳಬೇಕೆಂಬ ಚಕ್ರ ವ್ಯೂಹದಲ್ಲಿ ಗೌಡರು ಸಿಲುಕಿದ್ದಾರೆ. ನೀವು ಯಾರ ಕಡೆ ಎಂದು ಹೇಳಿಬಿಡಿ’ ಎಂದು ರವಿ ಪ್ರಶ್ನಿಸಿದರು. ‘ನಿನ್ನೆ ನಿಮ್ಮ ಕ್ಷೇತ್ರದಲ್ಲಿ ಹೊಸ ಅಭ್ಯರ್ಥಿಯನ್ನು ಘೋಷಿಸಿಬಿಟ್ಟಿದ್ದಾರೆ’ ಎಂದು ಸಚಿವ ಅಶೋಕ ಕಾಲೆಳೆದರು.

‘ಕ್ಷೇತ್ರದ ಜನರನ್ನು ನಂಬಿದ್ದೇನೆ. ಅವರು ನನಗೆ ರಕ್ಷಣೆ ಕೊಡುತ್ತಾರೆ’ ಎಂದು ಗೌಡರು ಹೇಳಿದರು.

ಶಾಲೆಗಳಲ್ಲಿ ಸಾತ್ವಿಕ ಆಹಾರ– ಚಿಂತನೆ ಇಲ್ಲ: ನಾಗೇಶ್

ಬೆಂಗಳೂರು: ‘ಶಾಲೆಗಳಲ್ಲಿ ಸಾತ್ವಿಕ ಆಹಾರ ನೀಡುವ ಚಿಂತನೆ ನಡೆಸಿಲ್ಲ. ಆದರೆ, ನೈತಿಕ ಶಿಕ್ಷಣ ಜಾರಿಗೆ ತರಲು ಉದ್ದೇಶಿಸಲಾಗಿದೆ. ನೈತಿಕ ಶಿಕ್ಷಣ ಮತ್ತು ಸಾತ್ವಿಕ ಆಹಾರವನ್ನು ಒಂದೇ ದೃಷ್ಟಿಯಿಂದ ನೋಡುವುದು ಸರಿಯಲ್ಲ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಅವರು ಹೇಳಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಪ್ರಶ್ನೆಗೆ ಉತ್ತರಿಸಿದ ಅವರು, ‘ಶಾಲಾ ಹಂತದಲ್ಲಿ ನೈತಿಕ ಶಿಕ್ಷಣ ಅಳವಡಿಸುವ ಕುರಿತು ಇತ್ತೀಚೆಗೆ ಸರ್ವ ಧರ್ಮಗಳ ಚಿಂತಕರ ದುಂಡು ಮೇಜಿನ ಸಭೆ ನಡೆಸಲಾಗಿತ್ತು. ಅಲ್ಲಿ ಕೆಲವರು ಸಾತ್ವಿಕ ಆಹಾರ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಭಿಪ್ರಾಯ ವ್ಯಕ್ತಪಡಿಸುವುದು ಅವರ ಸ್ವಾತಂತ್ರ್ಯ. ಇದೇ ರೀತಿ ಅಭಿಪ್ರಾಯ ಹೇಳಿ ಎಂದು ಸರ್ಕಾರ ಸೂಚಿಸಲು ಸಾಧ್ಯವಿಲ್ಲ. ಶಾಲಾ ಹಂತದಲ್ಲಿ ನೈತಿಕ ಶಿಕ್ಷಣ ನೀಡಬೇಕು ಎಂದು ಎಲ್ಲರೂ ಸಲಹೆ ನೀಡಿದ್ದಾರೆ’ ಎಂದರು.

ಅದಕ್ಕೆ ಧ್ವನಿಗೂಡಿಸಿದ ಸಭಾಪತಿ ಬಸವರಾಜ ಹೊರಟ್ಟಿ, ‘ಶಾಲೆಗಳಲ್ಲಿ ನೈತಿಕ ಶಿಕ್ಷಣ ಬೋಧಿಸುವ ಅಗತ್ಯ ಇದೆ’ ಎಂದು ಪ್ರತಿಪಾದಿಸಿದರು.

ಸೂರಜ್ ರೇವಣ್ಣ, ಪ್ರಜ್ವಲ್ ರೇವಣ್ಣ ಸೂತ್ರಕ್ಕೆ ಎಚ್‌.ಡಿ. ಕುಮಾರಸ್ವಾಮಿ ಸಮ್ಮತಿ

ಹಾಸನ, ಹೊಳೆನರಸೀಪುರದಿಂದ ರೇವಣ್ಣ ಸ್ಪರ್ಧೆ?

• ಚಿದಂಬರಪ್ರಸಾದ

ಹಾಸನ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು 2018ರ ಚುನಾವಣೆಯಲ್ಲಿ ಚನ್ನಪಟ್ಟಣ ಮತ್ತು ರಾಮನಗರ ಕ್ಷೇತ್ರದಲ್ಲಿ ಸ್ಪರ್ಧಿಸಿ ಅನುಸರಿಸಿದ್ದ ತಂತ್ರವನ್ನೇ ಹಾಸನದಲ್ಲೂ ಜಾರಿಗೊಳಿಸಬೇಕೆಂದು ಸಂಸದ ಪ್ರಜ್ವಲ್ ರೇವಣ್ಣ ಮತ್ತು ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಸಲಹೆ ನೀಡಿದ್ದಾರೆ. ಅದಕ್ಕೆ ಕುಮಾರಸ್ವಾಮಿ ಸಮ್ಮತಿಯನ್ನೂ ಸೂಚಿಸಿದ್ದಾರೆ ಎಂದು ಗೊತ್ತಾಗಿದೆ.

ಆಗ ಎರಡೂ ಕ್ಷೇತ್ರಗಳಲ್ಲಿ ಗೆದ್ದಿದ್ದ ಕುಮಾರಸ್ವಾಮಿ, ರಾಮನಗರ ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿದ್ದರು. ನಂತರ ನಡೆದ ಉಪಚುನಾವಣೆಯಲ್ಲಿ ಕುಮಾರಸ್ವಾಮಿ ಪತ್ನಿ ಅನಿತಾ ಕುಮಾರಸ್ವಾಮಿ ಸ್ಪರ್ಧಿಸಿ ಗೆದ್ದಿದ್ದರು. ಅದೇ ರೀತಿ, ಹಾಸನ ಮತ್ತು ಹೊಳೆನರಸೀಪುರ ಕ್ಷೇತ್ರದಲ್ಲಿ ಎಚ್.ಡಿ.ರೇವಣ್ಣ ಅವರನ್ನೇ ಕಣಕ್ಕಿಳಿಸುವುದು, ಎರಡೂ ಕ್ಷೇತ್ರಗಳಲ್ಲಿ ಗೆದ್ದರೆ, ಹೊಳೆನರಸೀಪುರ ಕ್ಷೇತ್ರಕ್ಕೆ ರಾಜೀನಾಮೆ ನೀಡಿ, ಭವಾನಿ ರೇವಣ್ಣ ಅವರನ್ನು ಅಲ್ಲಿಂದ ಕಣಕ್ಕೆ ಇಳಿಸಿ, ಗೆಲ್ಲಿಸಿಕೊಳ್ಳುವ ಲೆಕ್ಕಾಚಾರ ಪಕ್ಷದಲ್ಲಿದೆ.

> ಹಾಸನ ಜಿಲ್ಲೆಯ ಪ್ರತಿ ಕ್ಷೇತ್ರವೂ ನನಗೆ ಮುಖ್ಯ. ಹಾಸನ ಕ್ಷೇತ್ರದಲ್ಲಿ ಟಿಕೆಟ್ ಯಾರಿಗೆ ಕೊಡಬೇಕೆಂಬ ಬಗ್ಗೆ ಎಲ್ಲರೊಡನೆ ಚರ್ಚಿಸಿ ನಿರ್ಧರಿಸಲಾಗುವುದು ಎಚ್.ಡಿ. ಕುಮಾರಸ್ವಾಮಿ
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

> ನಾನು, ಭವಾನಿ ಸೇರಿದಂತೆ ಪಕ್ಷದಿಂದ ಯಾವ ಅಭ್ಯರ್ಥಿ, ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕೆಂಬ ಬಗ್ಗೆ ಕುಮಾರಸ್ವಾಮಿಯವರೇ ತೀರ್ಮಾನಿಸಲಿದ್ದಾರೆ
> ಎಚ್.ಡಿ. ರೇವಣ್ಣ, ಶಾಸಕ

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

‘ಕುಮಾರಸ್ವಾಮಿ ಭಾನುವಾರ ಹೊಳೆನರಸೀಪುರಕ್ಕೆ ಭೇಟಿ ನೀಡಿದ್ದ ವೇಳೆ, ಈ ಬಗ್ಗೆ ರೇವಣ್ಣ, ಭವಾನಿ, ಪ್ರಜ್ವಲ್, ಸೂರಜ್ ಹಾಗೂ ಮುಖಂಡರ ನಡುವೆ ಚರ್ಚೆ ನಡೆಯಿತು. ಸಹೋದರರು ಮುಂದಿಟ್ಟ ಸಲಹೆ ಬಹುತೇಕ ಕಾರ್ಯರೂಪಕ್ಕೆ ಬರುವ ಸಾಧ್ಯತೆ ಇದೆ’ ಎಂದು ಪಕ್ಷದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಈ ಸೂತ್ರದಿಂದ, ಹಾಸನ ಕ್ಷೇತ್ರದ ಪ್ರಬಲ ಆಕಾಂಕ್ಷಿ ಎಚ್.ಪಿ. ಸ್ವರೂಪ್ ಕೂಡ ತಕರಾರು ತೆಗೆಯುವುದಿಲ್ಲ. ಜೊತೆಗೆ, ಬಿಜೆಪಿ ಶಾಸಕ ಪ್ರೀತಂ ಗೌಡರು ನೀಡಿರುವ ಪಂಥಾಹ್ವಾನವನ್ನೂ ಸ್ವೀಕರಿಸಿದಂತಾಗುತ್ತದೆ. ಸ್ವತಃ ನಾವೇ ಕ್ಷೇತ್ರದಲ್ಲಿ ಬೀಡುಬಿಟ್ಟು, ತಂದೆ ರೇವಣ್ಣ ಗೆಲುವಿಗೆ ಶ್ರಮಿಸುತ್ತೇವೆ’ ಎಂಬುದು ಸಹೋದರರ ವಾದ.

ಇನ್ನೊಂದೆಡೆ, ‘ಭವಾನಿ ಅವರ ಸ್ಪರ್ಧೆಗೆ ಎಚ್.ಡಿ.ದೇವೇಗೌಡರೇ ಒಲವು ತೋರುತ್ತಿದ್ದು, ಅದನ್ನು ನಿರಾಕರಿಸುವುದು ಕುಮಾರಸ್ವಾಮಿ ಅವರಿಗೆ ಸುಲಭದ ಮಾತಲ್ಲ. ಒಂದು ವೇಳೆ, ಈಗಲೇ ಭವಾನಿ ಅವರಿಗೆ ಟಿಕೆಟ್ ನೀಡಿದರೆ, ಕುಟುಂಬ ರಾಜಕಾರಣದ ಅಪವಾದವನ್ನು ಹೊರಬೇಕಾಗುತ್ತದೆ. ರೇವಣ್ಣ ಮಕ್ಕಳ ಸೂತ್ರವನ್ನು ಅನುಸರಿಸಿದರೆ, ಅದರಿಂದ ತಪ್ಪಿಸಿಕೊಳ್ಳಬಹುದು. ಉಪ ಚುನಾವಣೆಯ ಸಂದರ್ಭದಲ್ಲಿ ಇಂತಹ ಸಂಕಷ್ಟವೂ ಇರುವುದಿಲ್ಲ ಎಂಬ ಆಲೋಚನೆ ಕುಮಾರಸ್ವಾಮಿ ಅವರದ್ದು. ಹೀಗಾಗಿ ಈ ಸೂತ್ರಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ’ ಎಂದು ಹೇಳಲಾಗುತ್ತಿದೆ.

ಕೆ.ಆರ್.ಪೇಟೆಗೆ ಭವಾನಿ?

ಭವಾನಿ ರೇವಣ್ಣ ಅವರನ್ನು ಕೆ.ಆರ್. ಪೇಟೆಯಿಂದ ಕಣಕ್ಕಿಳಿಸುವ ಬಗ್ಗೆ ಕೆಲವರು ಸಲಹೆ ನೀಡಿದ್ದು, ಸ್ವತಃ ಕುಮಾರಸ್ವಾಮಿ ಹಾಗೂ ಭವಾನಿಯವರಿಗೇ ಆ ಬಗ್ಗೆ ಆಸಕ್ತಿ ಇಲ್ಲ.

‘ಅಲ್ಲಿ ಎಚ್.ಟಿ.ಮಂಜು ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದ್ದು, ಪ್ರಚಾರ ಆರಂಭಿಸಿದ್ದಾರೆ. ಈ ಹಂತದಲ್ಲಿ ಭವಾನಿ ಅವರ ಹೆಸರನ್ನು ಘೋಷಿಸಿದರೆ ಗೊಂದಲ ಸೃಷ್ಟಿಯಾಗುತ್ತದೆ’ ಎಂಬ ಆತಂಕ ಕುಮಾರಸ್ವಾಮಿ ಅವರದ್ದು.

‘ಜಿಲ್ಲೆಯ ಆಡಳಿತವನ್ನು ಸಂಪೂರ್ಣವಾಗಿ ವಶಕ್ಕೆ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯ ಕಾರಣಕ್ಕೆ ರೇವಣ್ಣ ಮತ್ತು ಭವಾನಿ ಜಿಲ್ಲೆ ಬಿಟ್ಟು ಹೊರಗೆ ಹೋಗಲು ಆಸಕ್ತರಾಗಿಲ್ಲ’ ಎಂದೂ ಮೂಲಗಳು ತಿಳಿಸಿವೆ.

ಚುನಾವಣೆಗೆ ಸ್ಪರ್ಧೆ: ನ್ಯಾಯಾಧೀಶ ಹುದ್ದೆಗೆ ರಾಜೀನಾಮೆ



ಸುಭಾಷಚಂದ್ರ

ಚಿತ್ತಾಪುರ (ಕಲಬುರಗಿ ಜಿಲ್ಲೆ): ಗದಗ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರಾಗಿದ್ದ ಸುಭಾಷಚಂದ್ರ ರಾಠೋಡ ಅವರು ಚಿತ್ತಾಪುರ ಮತಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಯಸಿ, ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

‘ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಜಾತ್ಯತೀತ ತತ್ವ, ಸಿದ್ಧಾಂತಗಳಿಗೆ ಬದ್ಧವಾಗಿದೆ. ಸಮಾಜಮುಖಿ, ಜನಪರ ಕೆಲಸ ಮಾಡಲು ಅವಕಾಶವಿದೆ. ಚಿತ್ತಾಪುರ ಮತಕ್ಷೇತ್ರದ ಪರಿಚಯವಿದೆ. ಜನರ ನಾಡಿಮಿಡಿತ, ಸಮಸ್ಯೆ ಅರಿತಿರುವೆ. ಹೀಗಾಗಿ ಚಿತ್ತಾಪುರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಯಸಿದ್ದೇನೆ’ ಎಂದು ಸುಭಾಷಚಂದ್ರ ತಿಳಿಸಿದರು. ಅವರು ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಸಂಕದಾಳ ಗ್ರಾಮದವರು.

ಡಿಸಿಎಫ್ ಅಮಾನತಿಗೆ ವಿಧಾನಸಭೆಯಲ್ಲಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗಿನಲ್ಲಿ 24 ಗಂಟೆಯ ಅವಧಿಯಲ್ಲಿ ಬಾಲಕ ಹಾಗೂ ಆತನ ಅಜ್ಜನನ್ನು ಬೇಟೆಯಾಡಿರುವ ಪ್ರಕರಣಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿ(ಡಿಸಿಎಫ್) ಸೇರಿದಂತೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎಂದು ಬಿಜೆಪಿ, ಜೆಡಿಎಸ್ ಸದಸ್ಯರು ಆಗ್ರಹಿಸಿದರು.

ವಿಧಾನಸಭೆಯ ಶೂನ್ಯವೇಳೆಯಲ್ಲಿ ಸೋಮವಾರ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಕೆ.ಜಿ. ಬೋಪಯ್ಯ, ವಿರಾಜಪೇಟೆಯಲ್ಲಿ ಕಾರ್ಮಿಕರ ಸಾಲು ಮನೆಗಳಿಗೆ ನುಗ್ಗಿದ ಹುಲಿ 12 ವರ್ಷದ ಬಾಲಕನನ್ನು ಭಾನುವಾರ ಕೊಂದಿತ್ತು.

ಸೋಮವಾರ ಬೆಳಿಗ್ಗೆ ಬಾಲಕನ ಅಜ್ಜನನ್ನು ಕೊಂದಿದೆ. ಹುಲಿ ಒಮ್ಮೆ ಬಂದಿದ್ದು ಗೊತ್ತಾದ ಕೂಡಲೇ, ಅದನ್ನು ಅಲ್ಲಿಂದ ಓಡಿಸಿ ಜನರ ಜೀವಕ್ಕೆ ರಕ್ಷಣೆ ಕೊಡುವ ಕೆಲಸವನ್ನು ಅರಣ್ಯ ಇಲಾಖೆಯವರು ಮಾಡಬೇಕಿತ್ತು. ಅಧಿಕಾರಿಗಳ ಬೇಜವಾಬ್ದಾರಿಯಿಂದ ಇಬ್ಬರು ಮೃತಪಟ್ಟಿದ್ದಾರೆ. ಹುಲಿ ಕಾಟವನ್ನು ನಿಗ್ರಹಿಸಲು ಅರಣ್ಯ ಇಲಾಖೆಗೆ ಸಾಧ್ಯವಿಲ್ಲದಿದ್ದರೆ ನಮಗೆ ಅಧಿಕಾರ ಕೊಡಿ.

ನಮ್ಮಲ್ಲಿ ‘ಹುಲಿ ಮದುವೆ’ ಮಾಡಿಕೊಳ್ಳುವ ಪದ್ಧತಿ ಇದೆ. ಕೊಡಗಿನವರಿಗೆ ಹುಲಿಯನ್ನು ನಿಯಂತ್ರಿಸುವುದು ಗೊತ್ತು’ ಎಂದು ಅವರು ಹೇಳಿದರು.

ಇದಕ್ಕೆ ಧ್ವನಿಗೂಡಿಸಿದ ಬಿಜೆಪಿಯ ಅಪ್ಪಚ್ಚು ರಂಜನ್, ಡಿಸಿಎಫ್ ನಿರ್ಲಕ್ಷ್ಯವೇ ಈ ದುರಂತಕ್ಕೆ ಕಾರಣವಾಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್‌ನ ಎಚ್.ಪಿ. ಮಂಜುನಾಥ್, ಹುಣಸೂರು ಕ್ಷೇತ್ರದವರು ಕೂಲಿ ಕೆಲಸಕ್ಕೆ ಅಲ್ಲಿಗೆ ಹೋಗಿದ್ದರು. ಬಾಲಕನನ್ನು ನೋಡಲು ಹೋದ ಅಜ್ಜನ ಮೇಲೆಯೂ ಹುಲಿ ದಾಳಿ ಮಾಡಿದೆ. ಇದಕ್ಕೆ ಕಾರಣರಾದ ಅಧಿಕಾರಿಗಳಿಗೆ ಬರೆ ಹಾಕಲೇಬೇಕು. ಅಜ್ಜ–ಮಗು ಮೃತಪಟ್ಟ ಆಘಾತ ತಡೆಯಲಾಗದೇ ಅಜ್ಜಿ ಕೂಡ ಮೃತಪಟ್ಟಿದ್ದಾರೆ. ಅವರಿಗೂ ಪರಿಹಾರ ಕೊಡಿಸಬೇಕು ಎಂದು ಅವರು ಆಗ್ರಹಿಸಿದರು.

ಇದಕ್ಕೆ ಉತ್ತರಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಯಾರೊಬ್ಬರೂ ಹೀಗೆ ಸಾಯುವುದನ್ನು ಸರ್ಕಾರ ಸಹಿಸುವುದಿಲ್ಲ. ಅಧಿಕಾರಿಗಳು ಕರ್ತವ್ಯಲೋಪ ಎಸಗಿದ್ದರೆ ವರದಿ ಪಡೆದು ಕಠಿಣ ಕ್ರಮ ಕೈಗೊಳ್ಳುತ್ತೇವೆ’ ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಲಿಂಗಾಯತರ ಸಭೆ: ಹೆಚ್ಚು ಟಿಕೆಟ್‌ಗೆ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸಮುದಾಯದ ಮತಗಳನ್ನು ಪಕ್ಷದತ್ತ ಸೆಳೆಯಲು ರೂಪಿಸಬೇಕಾದ ಕಾರ್ಯತಂತ್ರಗಳ ಕುರಿತು ಕೆಪಿಸಿಸಿ ವೀರಶೈವ-ಲಿಂಗಾಯತ ರಾಜ್ಯ ನಾಯಕರು, ಟಿಕೆಟ್ ಆಕಾಂಕ್ಷಿಗಳು ಮತ್ತು ಮುಖಂಡರು ಸೋಮವಾರ ಸಭೆ ಸೇರಿ ಸಮಾಲೋಚನೆ ನಡೆಸಿದರು.

ಶಾಸಕ ಶಾಮನೂರು ಶಿವಶಂಕರಪ್ಪ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಮತ್ತು ಮಾಜಿ ಶಾಸಕ ವಿನಯ ಕುಲಕರ್ಣಿ ನೇತೃತ್ವದಲ್ಲಿ ಬಸವಸಮಿತಿ ಸಭಾಂಗಣದಲ್ಲಿ ಸಭೆ ನಡೆಯಿತು.

ಪಕ್ಷದಿಂದ ಟಿಕೆಟ್ ಬಯಸಿ 210 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ, 74 ಅಭ್ಯರ್ಥಿಗಳ ಹೆಸರು ಸಂಭವನೀಯರ ಪಟ್ಟಿಯಲ್ಲಿದೆ. ಕನಿಷ್ಠ 65 ಅಭ್ಯರ್ಥಿಗಳಿಗಾದರೂ ಟಿಕೆಟ್ ನೀಡುವಂತೆ ಪಕ್ಷದ ನಾಯಕರ ಮೇಲೆ ಒತ್ತಡ ಹೇರಲು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಗೊತ್ತಾಗಿದೆ.

ಪೇಶ್ವೆ ವಂಶಾವಳಿಯವರು ಸಿಎಂ ಆಗಬಾರದು ಹೇಳಿಕೆಗೆ ಬದ್ಧ: ಎಚ್‌ಡಿಕೆ

ಹುಬ್ಬಳ್ಳಿ: ‘ಬ್ರಾಹ್ಮಣ ಸಮುದಾಯದವರು ಮುಖ್ಯಮಂತ್ರಿ ಆಗಬಾರದು ಎಂದು ನಾನು ಎಲ್ಲಿಯೂ ಹೇಳಿಲ್ಲ. ಪೇಶ್ವೆ ವಂಶಾವಳಿಯವರು ಆಗಬಾರದು ಎಂದಿದ್ದೇನೆ. ಆ ಹೇಳಿಕೆಗೆ ಈಗಲೂ ಬದ್ಧ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಮುಂದೆ ರಾಜ್ಯಕ್ಕೆ ಅನಾಹುತ ಮಾಡುವ ಪೇಶ್ವೆ ವಂಶಾವಳಿ (ಡಿಎನ್‌ಎ) ಇರುವವರು ಮುಖ್ಯಮಂತ್ರಿಯಾಗುತ್ತಾರೆ ಎನ್ನುವ ಸ್ಪಷ್ಟ ಮಾಹಿತಿ ನನಗೆ ಸಿಕ್ಕಿದೆ. ನನ್ನ ರಾಜ್ಯ ಹಾಳಾಗಬಾರದು ಎಂದು ಜನತೆಗೆ ಎಚ್ಚರಿಕೆಯಿಂದ ಇರಲು ಪೇಶ್ವೆ ವಂಶಾವಳಿ ಬಗ್ಗೆ ಪ್ರಶ್ನಿಸಿದ್ದೇನೆಯೇ ಹೊರತು, ಪ್ರಲ್ಹಾದ ಜೋಶಿ ಅವರ ಬಗ್ಗೆ ಅಲ್ಲ. ಅವರು ಉತ್ತರಿಸುವುದಿದ್ದರೆ ಉತ್ತರಿಸಲಿ’ ಎಂದು ಸವಾಲೆಸೆದರು.

‘ಪೇಶ್ವೆ ವಂಶಾವಳಿ ಹೊಂದಿದವರು ಮೌನವಾಗಿದ್ದಾರೆ. ಅವರಿಗೆ ನನ್ನ ಹೇಳಿಕೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ರಾಜಕೀಯವಾಗಿ ಚಾಲ್ತಿಯಲ್ಲಿರುವ ಕೆಲವರು ಪ್ರತಿಭಟನೆ ಮಾಡುತ್ತಿದ್ದಾರೆ. ಇಡೀ ಬ್ರಾಹ್ಮಣ ಸಮಾಜವೇನಾದರೂ ನನ್ನ ವಿರುದ್ಧ ತಿರುಗಿ ಬಿದ್ದಿದೆಯೇ’ ಎಂದು ಪ್ರಶ್ನಿಸಿದರು.

‘ನಮಗೆ ಟಿಪ್ಪು ಸುಲ್ತಾನ್, ರಾಣಿ ಅಬ್ಬಕ್ಕ ಇಬ್ಬರೂ ಬೇಕು. ಕೆಲವರು ಇತಿಹಾಸ ತಿರುಚುತ್ತ, ಧರ್ಮ ರಾಜಕೀಯ ಮಾಡುತ್ತಿದ್ದಾರೆ. ಕುವೆಂಪು ಹೇಳಿರುವ ಸರ್ವ ಜನಾಂಗದ ಶಾಂತಿಯ ತೋಟಬೇಕೋ? ಮೋದಿ, ಶಾ ಅವರ ಅಶಾಂತಿಯ ತೋಟ ಬೇಕೋ? ಜನತೆಯೇ ತೀರ್ಮಾನಿಸಲಿ’ ಎಂದರು.

‘ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಗೋವಾ ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಯನ್ನು ದೆಹಲಿಗೆ ಕರೆಸಿ, ಹತ್ತು ನಿಮಿಷದಲ್ಲಿ ಮಹದಾಯಿ ಯೋಜನೆ ಅನುಷ್ಠಾನದಲ್ಲಿರುವ ಸಮಸ್ಯೆ ಬಗೆಹರಿಸಬಹುದಿತ್ತು. ಆದರೆ ರಾಜಕೀಯ ಮಾಡುತ್ತ ಅವರು ಜನರ ದಿಕ್ಕು ತಪ್ಪಿಸುತ್ತಿದ್ದಾರೆ’ ಎಂದು ಟೀಕಿಸಿದರು.

ಮತ್ತೆ ಕಾಂಗ್ರೆಸ್‌ನತ್ತ ಚಿಂಚನಸೂರ?

ಪ್ರಜಾವಾಣಿ ವಾರ್ತೆ

ಕಲಬುರಗಿ: ಯಾದಗಿರಿ ಜಿಲ್ಲೆಯ ಗುರುಮಠಕಲ್ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ಸಚಿವರಾಗುವ ಕನಸಿನೊಂದಿಗೆ ಬಿಜೆಪಿ ಸೇರಿದ್ದ ವಿಧಾನಪರಿಷತ್ ಸದಸ್ಯ ಬಾಬುರಾವ್ ಚಿಂಚನಸೂರ ಅವರು ಕಾಂಗ್ರೆಸ್‌ಗೆ ಮರಳುವ ಸಾಧ್ಯತೆ ದಟ್ಟವಾಗಿವೆ.

ಗುರುಮಠಕಲ್ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಎದುರು ಪರಾಭವಗೊಂಡಿದ್ದ ಚಿಂಚನಸೂರ ಅವರಿಗೆ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ‘ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ’ ಸ್ಥಾಪಿಸಿ, ಅದರ ಅಧ್ಯಕ್ಷರನ್ನಾಗಿಸಿದ್ದರು. ವಿಧಾನಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿತ್ತು. ಗುರುಮಠಕಲ್ ಕ್ಷೇತ್ರದಿಂದ ಟಿಕೆಟ್ ಕೇಳದಂತೆ ಪರೋಕ್ಷವಾಗಿ ಸೂಚಿಸಲಾಗಿತ್ತು.

‘ಬಿಜೆಪಿ ತಮ್ಮನ್ನು ನಿರ್ಲಕ್ಷಿಸುತ್ತಿದೆ ಎಂಬ ಭಾವನೆ ಚಿಂಚನಸೂರ ಅವರಲ್ಲಿ ಮೂಡಿದೆ. ಅದಕ್ಕೆ ಅವರು ಕಾಂಗ್ರೆಸ್ ಸೇರ್ಪಡೆ ಆಗಿ ಗುರುಮಠಕಲ್ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿದ್ದಾರೆ. ಈ ಬಗ್ಗೆ ಕೆಪಿಸಿಸಿ ಮಟ್ಟದಲ್ಲಿ ಚರ್ಚೆ ನಡೆದಿವೆ’ ಎಂದು ಕಾಂಗ್ರೆಸ್‌ನ ಜಿಲ್ಲಾ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಲು ಚಿಂಚನಸೂರ ಲಭ್ಯವಾಗಿಲ್ಲ. ಅವರ ಮೊಬೈಲ್ ಫೋನ್ ಇಡೀ ದಿನ ಸ್ವಿಚ್ ಆಫ್ ಆಗಿತ್ತು.

ಅಂಬೇಡ್ಕರ್‌ಗೆ ಅವಮಾನ: ಡೀನ್ ಸೇರಿ 9 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಬಿ.ಆರ್. ಅಂಬೇಡ್ಕರ್ ಬಗ್ಗೆ ಅವಹೇಳನ ಮಾಡಿದ್ದ ಆರೋಪದಡಿ ಜೈನ್ ವಿಶ್ವವಿದ್ಯಾಲಯ ಪ್ರವೇಶಾತಿ ವಿಭಾಗದ ಡೀನ್ ದಿನೇಶ್ ನೀಲಕಂಠ್ ಸೇರಿ 9 ಮಂದಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ನಿಮ್ಹಾನ್ಸ್ ಸಭಾಂಗಣದಲ್ಲಿ ಫೆ. 8ರಂದು ವಿಶ್ವವಿದ್ಯಾಲಯದ ‘ಕಾಲೇಜು ಉತ್ಸವ’ ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು ಪ್ರದರ್ಶಿಸಿದ್ದ ಕಿರುನಾಟಕದಲ್ಲಿ ಬಿ.ಆರ್. ಅಂಬೇಡ್ಕರ್ ಬಗ್ಗೆ ಅವಹೇಳನ ಮಾಡಿರುವುದಾಗಿ ಆರೋಪಿಸಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಎನ್. ಮಧುಸೂದನ್ ದೂರು ನೀಡಿದ್ದರು. ಎಸ್.ಸಿ–ಎಸ್.ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖೆ ಕೈಗೊಂಡಿರುವ ಜಯನಗರ ಉಪವಿಭಾಗದ ಎಸಿಪಿ ನೇತೃತ್ವದ ತಂಡ, ವಿಶ್ವವಿದ್ಯಾಲಯದ ಡೀನ್ ದಿನೇಶ್ ನೀಲಕಂಠ್, ಕಾರ್ಯಕ್ರಮ ಸಂಘಟಕ ಪ್ರತೀಕ್, ಕಿರುನಾಟಕದಲ್ಲಿ ಅಭಿನಯಿಸಿದ್ದ ಏಳು ವಿದ್ಯಾರ್ಥಿಗಳನ್ನು ಬಂಧಿಸಿದೆ. ‘ಅಂಬೇಡ್ಕರ್ ಬಗ್ಗೆ ಅವಹೇಳನ ಮಾಡಿದ್ದ ವಿಡಿಯೊ ಲಭ್ಯವಾಗಿತ್ತು. ಅದನ್ನು ಪರಿಶೀಲಿಸಿ ಆಡಳಿತ ಮಂಡಳಿ ನಿರ್ದೇಶಕರು, ಡೀನ್ ಹಾಗೂ ವಿದ್ಯಾರ್ಥಿಗಳನ್ನು ವಿಚಾರಣೆ ಮಾಡಲಾಗಿತ್ತು. ಉತ್ಸವಕ್ಕೂ ಮುನ್ನ ಕಿರುನಾಟಕ ತಯಾರಿ ನಡೆದಿತ್ತು. ಅಂಬೇಡ್ಕರ್ ಬಗ್ಗೆ ಅವಹೇಳನ ಸಂಭಾಷಣೆ ಇದ್ದರೂ ಕಿರುನಾಟಕ ಪ್ರದರ್ಶಿಸಲು ಆಡಳಿತ ಮಂಡಳಿ ಒಪ್ಪಿಗೆ ನೀಡಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಆರೋಪಿ ದಿನೇಶ್, ವಿಶ್ವವಿದ್ಯಾಲಯ ಅಧೀನದ ಎರಡು ಕಾಲೇಜುಗಳ ಉಸ್ತುವಾರಿ ವಹಿಸಿಕೊಂಡಿದ್ದರು. ಅವಹೇಳನಕ್ಕೆ ಎಲ್ಲರೂ ಹೊಣೆಗಾರರು. ಪ್ರಕರಣ ಸಂಬಂಧ ಹಲವು ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಸದ್ಯ ಎಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ತಿಳಿಸಿದರು.

ಜೈನ್ ವಿವಿ ಕ್ಷಮೆ

ಬೆಂಗಳೂರು: ಕಾಲೇಜು ಉತ್ಸವದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿದ ಕಿರುನಾಟಕ ಪ್ರದರ್ಶನದಲ್ಲಿ ಬಳಸಲಾದ ಕೆಲ ಶಬ್ದಗಳು ಒಂದು ವರ್ಗದ ಜನರಿಗೆ ನೋವುಂಟು ಮಾಡಿರುವುದಕ್ಕೆ ಎಂದು ಜೈನ್ ವಿಶ್ವವಿದ್ಯಾಲಯ ಆಡಳಿತ ಮಂಡಳಿ ಕ್ಷಮೆಯಾಚಿಸಿದೆ.

ಸಮಾಜದಲ್ಲಿನ ತಾರತಮ್ಯ ಕೊನೆಗೊಳಿಸುವುದು, ಜಾತಿ, ಧರ್ಮ, ಲಿಂಗ ಭೇದಗಳನ್ನು ಅಳಿಸಿ ಸಮಾನತೆ ತರುವ ಸಂದೇಶ ಸಾರುವ ಕಥೆ ಹೆಣೆಯಲಾಗಿತ್ತು. ಆದರೆ, ಅಂಬೇಡ್ಕರ್ ಅವರ ವಿರುದ್ಧ ಬಳಸಲಾದ ಪದಗಳು ಆಕ್ಷೇಪಾರ್ಹವಾಗಿದ್ದವು. ಘಟನೆಯ ಬಗ್ಗೆ ವಿಚಾರಣೆ ನಡೆಸಿದ ಸಂಸ್ಥೆ ಅಗತ್ಯ ಶಿಸ್ತುಕ್ರಮ ಕೈಗೊಂಡಿದೆ ಎಂದು ಹೇಳಿದೆ.

‘ಜೈನ್ ವಿಶ್ವವಿದ್ಯಾಲಯ ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೇಂದ್ರಗಳು ಜಾತ್ಯತೀತ ನೀತಿ ಬೆಂಬಲಿಸಿಕೊಂಡು ಬಂದಿವೆ. ಸಂವಿಧಾನದ ಪಿತಾಮಹ ಅಂಬೇಡ್ಕರ್ ಅವರ ಬಗ್ಗೆ ತಮಗೆ ಅಪಾರವಾದ ಗೌರವವಿದೆ. ಗಮನಕ್ಕೆ ಬರದೆ ಆದ ತಪ್ಪಿನ ಬಗ್ಗೆ ಕ್ಷಮೆ ಯಾಚಿಸಿದ್ದೇವೆ’ ಎಂದು ವಿಶ್ವವಿದ್ಯಾಲಯ ಹೇಳಿದೆ.

ಧಾರವಾಡದ ಸತ್ತೂರು ಬಳಿಯ ಶ್ರೇಯಾ ಕಾಲೇಜು ಆವರಣದ ತೊಟ್ಟಿಯಲ್ಲಿ ಬಿದ್ದಿದ್ದ ಜಿಂಕೆಮರಿಯನ್ನು ಸೋಮವಾರ ರಕ್ಷಿಸಲಾಯಿತು

ತೊಟ್ಟಿಗೆ ಬಿದ್ದಿದ್ದ ಜಿಂಕೆಮರಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಧಾರವಾಡ: ಇಲ್ಲಿನ ಸತ್ತೂರಿನಲ್ಲಿರುವ ಶ್ರೀಯಾ ಕಾಲೇಜಿನ ಆವರಣದ ತೊಟ್ಟಿಗೆ ಬಿದ್ದಿದ್ದ ಜಿಂಕೆ ಮರಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೋಮವಾರ ರಕ್ಷಿಸಿದ್ದಾರೆ.

ದಾಹ ನೀಗಿಸಿಕೊಳ್ಳಲು ಬಂದ ಜಿಂಕೆ ಮರಿ ತೊಟ್ಟಿಗೆ ಬಿದ್ದಿತ್ತು. ಅರಣ್ಯ ಇಲಾಖೆಗೆ ಸ್ಥಳೀಯರು ಈ ಮಾಹಿತಿ ತಿಳಿಸಿದಾಗ, ಉಪವಲಯ ಅರಣ್ಯಾಧಿಕಾರಿ ಯಲ್ಲಾನಾಯಕ ಲಮಾಣಿ, ಪ್ರಾಣಿಪ್ರಿಯ ಸೋಮಶೇಖರ ಚೆನ್ನಶೆಟ್ಟಿ ಹಾಗೂ ವೈದ್ಯ ಸತೀಶ ಇರಕಲ್ ಅವರು ಸ್ಥಳಕ್ಕೆ ಬಂದು ಜಿಂಕೆ ಮರಿ ರಕ್ಷಿಸಿದರು. ‘ರಕ್ಷಿಸಿದ ಜಿಂಕೆಯನ್ನು ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಬಳಿಯ ಅರಣ್ಯದಲ್ಲಿ ಬಿಡಲಾಗಿದೆ’ ಉಪವಲಯ ಅರಣ್ಯಾಧಿಕಾರಿ ಯಲ್ಲಾನಾಯಕ ಲಮಾಣಿ ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ನಿಡ್ಡೋಡಿ ಗ್ರಾಮದಲ್ಲಿ ನಡೆದ ಸಾಹಸ

ಬಾವಿಗಿಳಿದು ಚಿರತೆ ರಕ್ಷಿಸಿದ ಪಶುವೈದ್ಯೆ

ಪ್ರಜಾವಾಣಿ ವಾರ್ತೆ

ಬಾವಿಗೆ ಬಿದ್ದಿದ್ದ ಚಿರತೆಗೆ ಅರಿವಳಿಕೆ ಚುಚ್ಚುಮದ್ದು ನೀಡಿ, ಸ್ಮೃತಿ ತಪ್ಪಿಸಿ ಅದನ್ನು ತಾವಿದ್ದ ಬೋನಿನೊಳಗೆ ಹಾಕಿರುವ ಪಶುವೈದ್ಯೆ ಡಾ.ಮೇಘನಾ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ನಿಡ್ಡೋಡಿ ಗ್ರಾಮದಲ್ಲಿ ಬಾವಿಗೆ ಬಿದ್ದಿದ್ದ ಚಿರತೆಯನ್ನು ಪಶುವೈದ್ಯೆ ಡಾ. ಮೇಘನಾ ಬಾವಿಗೆ ಇಳಿದು ರಕ್ಷಿಸಿದ್ದಾರೆ.

ಚಿರತೆ ಶನಿವಾರ ಬಾವಿಗೆ ಬಿದ್ದಿತ್ತು. ಬಾವಿಗೆ ಬೋನನ್ನು ಇಳಿಸಿ, ಅದರೊಳಗೆ ಚಿರತೆ ಹೋಗುವಂತೆ ಮಾಡಿ ಅದನ್ನು ಹಿಡಿದು ರಕ್ಷಣೆ ಮಾಡಲು ಅರಣ್ಯ ಇಲಾಖೆಯವರು ದಿನವಿಡೀ ಪ್ರಯತ್ನಿಸಿದ್ದರು.

ಆದರೆ, ಈ ಪ್ರಯತ್ನ ಫಲಪ್ರದ ಆಗಿರಲಿಲ್ಲ. ಬಳಿಕ ಚಿರತೆ ರಕ್ಷಣಾ ಕಾರ್ಯಕ್ಕೆ ವನ್ಯಜೀವಿ ರಕ್ಷಣಾ ಕಾರ್ಯದಲ್ಲಿ ಪಳಗಿರುವ ಪಶುವೈದ್ಯರ ಮೊರೆ ಹೋಗಲಾಗಿತ್ತು.

ಭಾನುವಾರ ಕಾರ್ಯಾಚರಣೆ ನಡೆಸಿದ ಪಶುವೈದ್ಯರ ತಂಡವು ಬಾವಿಯಲ್ಲೇ ಚಿರತೆಯ ಸ್ಮೃತಿ ತಪ್ಪಿಸಿ, ಬಳಿಕ ಬೋನಿನ ಮೂಲಕ ಅದನ್ನು ಮೇಲಕ್ಕೆತ್ತುವ ಕಾರ್ಯತಂತ್ರ ರೂಪಿಸಿತು. ಆದರೆ, ಬಾವಿಯು ಸಾಕಷ್ಟು ಆಳ ಇತ್ತು ಹಾಗೂ ಬಾವಿಯ ತಳ ಭಾಗದಲ್ಲಿ ಚಿರತೆ ಅಡಗಿ ಕುಳಿತಿತ್ತು. ಹಾಗಾಗಿ ಅದಕ್ಕೆ ಅರಿವಳಿಕೆ ಚುಚ್ಚುಮದ್ದು ನೀಡುವುದು ಸುಲಭವಾಗಿರಲಿಲ್ಲ.

ಪಶುವೈದ್ಯೆ ಡಾ. ಮೇಘನಾ ಅವರನ್ನು ಬೋನಿನಲ್ಲಿ ಬಾವಿಯೊಳಗೆ ಇಳಿಸಿ, ಅಲ್ಲೇ ಅವರು ಚಿರತೆಗೆ ಅರಿವಳಿಕೆ ಮದ್ದು ನೀಡಲು ನಿರ್ಧರಿಸಲಾಯಿತು.

ಅರಿವಳಿಕೆ ಮದ್ದು ಹಾರಿಸುವ ಕೋವಿಯೊಂದಿಗೆ ಬೋನು ಸೇರಿದ ಡಾ.ಮೇಘನಾ ಅವರನ್ನು ಸ್ಥಳೀಯರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಹಗ್ಗಗಳ ನೆರವಿನಿಂದ ಬಾವಿಯೊಳಕ್ಕೆ ನಿಧಾನವಾಗಿ ಇಳಿಸಿದರು. ಡಾ.ಮೇಘನಾ ಅವರು ಚಿರತೆಯ ಸಮೀಪಕ್ಕೆ ಸಾಗಿ, ಅದರತ್ತ ಅರಿವಳಿಕೆ ಚುಚ್ಚುಮದ್ದು ಹಾರಿಸಿದರು. ಚಿರತೆ ಸಂಪೂರ್ಣ ಸ್ಮೃತಿ ತಪ್ಪಿರುವುದನ್ನು ಖಾತರಿಪಡಿಸಿಕೊಂಡ ಬಳಿಕ, ಅದನ್ನು ತಾವಿದ್ದ ಬೋನಿನೊಳಕ್ಕೆ ಹಾಕಿದರು. ಚಿರತೆ ಹಾಗೂ ಡಾ.ಮೇಘನಾ ಅವರಿದ್ದ ಬೋನನ್ನು ಸ್ಥಳೀಯರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಮೇಲಕ್ಕೆತ್ತಿದರು.

ರಕ್ಷಣೆ ಮಾಡಿದ ಚಿರತೆಯು ಸುಮಾರು ಒಂದು ವರ್ಷ ಪ್ರಾಯದ್ದು. ಅದನ್ನು ಸುರಕ್ಷಿತವಾಗಿ ಮತ್ತೆ ಕಾಡಿಗೆ ಬಿಡಲಾಗಿದೆ. ಈ ಕಾರ್ಯಾಚರಣೆಗೆ ಪಶುವೈದ್ಯರಾದ ಡಾ.ಯಶಸ್ವಿ ನಾರಾವಿ, ಡಾ.ಪೃಥ್ವಿ ಹಾಗೂ ಡಾ.ನಫೀಸಾ ನೆರವಾದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಪ್ರವೀಣ್ ನೆಟ್ಟಾರು ಹತ್ಯೆ ಆರೋಪಿ ಶಾಫಿ ಬೆಳ್ಳಾರೆ ಎಸ್‌ಡಿಪಿಐ ಅಭ್ಯರ್ಥಿ

ಪುತ್ತೂರು (ದಕ್ಷಿಣ ಕನ್ನಡ): ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಅವರ ಹತ್ಯೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶಾಫಿ ಬೆಳ್ಳಾರೆಯನ್ನು ಪುತ್ತೂರು ವಿಧಾನಸಭಾ ಕ್ಷೇತ್ರದಿಂದ ತನ್ನ ಅಭ್ಯರ್ಥಿಯಾಗಿ ಕಣಕ್ಕಿಳಿಸಲು ಎಸ್‌ಡಿಪಿಐ ನಿರ್ಧರಿಸಿದೆ.

ಪುತ್ತೂರಿನಲ್ಲಿ ಫೆ.10ರಂದು ಎಸ್‌ಡಿಪಿಐ ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಮೈಸೂರು ಸಮ್ಮುಖದಲ್ಲಿ ನಡೆದ ಪಕ್ಷದ ಪುತ್ತೂರು ಕ್ಷೇತ್ರ ಸಮಿತಿಯ ಪದಾಧಿಕಾರಿಗಳು ಮತ್ತು ಕಾರ್ಯಕರ್ತರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

‘ಶಾಫಿ ಬೆಳ್ಳಾರೆ ಎಸ್‌ಡಿಪಿಐ ರಾಜ್ಯ ಘಟಕದ ಕಾರ್ಯದರ್ಶಿ. ಅವರೇ ಪುತ್ತೂರು ಕ್ಷೇತ್ರದ ಅಭ್ಯರ್ಥಿಯಾಗಲಿ ಎಂದು ಹಿಂದೆಯೇ ಕ್ಷೇತ್ರ ಸಮಿತಿ ನಿರ್ಧರಿಸಿತ್ತು. ಅವರನ್ನು ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಬಂಧಿಸಲಾಯಿತು. ಹಿಂದಿನ ತೀರ್ಮಾನದಂತೆ ಅವರನ್ನೇ ಅಭ್ಯರ್ಥಿಯಾಗಿಸಲು ನಿರ್ಧರಿಸಿದ್ದು, ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಅಧಿಕೃತವಾಗಿ ಘೋಷಿಸಲಿದ್ದಾರೆ’ ಎಂದು ಪಕ್ಷದ ಕ್ಷೇತ್ರ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ವ್ಯಕ್ತಿಯೊಬ್ಬ ಯಾವ ವೃತ್ತಿಯಲ್ಲಿ ಬೇಕಾದರೂ ಹೀರೊ ಆಗಬಹುದು.

–ವಾಲ್ಟ್ ವಿಟ್ಮನ್

ಬ್ಯಾಂಕ್‌ಗಳಲ್ಲಿ ಸ್ಥಳೀಯ ಭಾಷೆ ಬಲ್ಲ ಸಿಬ್ಬಂದಿ ಅತ್ಯಗತ್ಯ, ನಿರ್ಲಕ್ಷ್ಯ ಅಕ್ಷಮ್ಯ

ಬ್ಯಾಂಕ್‌ಗಳು ಸ್ಥಳೀಯ ಭಾಷೆಯಲ್ಲಿ ಮಾತನಾಡಬಲ್ಲ ಸಿಬ್ಬಂದಿಯನ್ನೇ ನೇಮಕ ಮಾಡಿಕೊಳ್ಳಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮೇಲಿಂದ ಮೇಲೆ ಹೇಳುತ್ತಲೇ ಬಂದಿದ್ದಾರೆ. ಆದರೆ, ಕರ್ನಾಟಕದ ಬ್ಯಾಂಕ್‌ಗಳ ಸ್ಥಿತಿ ಇದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಮಾತ್ರವಲ್ಲದೆ ಖಾಸಗಿ ವಲಯದ ಬ್ಯಾಂಕ್‌ಗಳು ಕೂಡ ಕನ್ನಡ ಮಾತನಾಡಬಲ್ಲ ಸಿಬ್ಬಂದಿ ನೇಮಕಕ್ಕೆ ಆಸಕ್ತಿಯನ್ನು ತೋರುತ್ತಿಲ್ಲ. ಬ್ಯಾಂಕ್‌ನಲ್ಲಿ ಮಾಹಿತಿ ಭರ್ತಿಗೆ ಕೊಡುವ ಚಲನ್ ಮತ್ತು ಫಾರ್ಮ್‌ಗಳನ್ನು ಕನ್ನಡದಲ್ಲಿ ಮುದ್ರಿಸುವಲ್ಲಿಯೂ ಅವುಗಳು ಹಿಂದೆ ಬಿದ್ದಿವೆ. ಹೀಗಾಗಿ ಗ್ರಾಹಕರಿಗೆ, ಅದರಲ್ಲೂ ಗ್ರಾಮೀಣ ಭಾಗಗಳ ಗ್ರಾಹಕರಿಗೆ, ಬ್ಯಾಂಕ್ ಜತೆಗಿನ ಸಂವಹನ ಸುಲಭ ಸಾಧ್ಯವಾಗದೆ, ಸಾಲ ಇಲ್ಲವೆ ಬ್ಯಾಂಕ್‌ನ ಸೇವೆ ಪಡೆಯುವುದೇ ಕಷ್ಟವಾಗಿದೆ. ಆದ್ದರಿಂದಲೇ ರಾಜ್ಯ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) ಮತ್ತು ಬ್ಯಾಂಕ್ ನೀಡುವ ಸಾಲದ ಪ್ರಮಾಣದ ಅನುಪಾತ ಕರ್ನಾಟಕದಲ್ಲಿ ತುಂಬಾ ಕಡಿಮೆ ಇದೆ. ದೇಶದಲ್ಲಿ ಒಟ್ಟಾರೆ ಈ ಅನುಪಾತದ ಸರಾಸರಿ ಶೇ 56.7ರಷ್ಟಿದ್ದರೆ, ರಾಜ್ಯದಲ್ಲಿ ಅದರ ಪ್ರಮಾಣ ಶೇ 40.5ರಷ್ಟು ಮಾತ್ರ ಇದೆ. ಕರ್ನಾಟಕವು ಈ ಲೆಕ್ಕಾಚಾರದಲ್ಲಿ ತನ್ನ ಅಕ್ಕಪಕ್ಕದ ತೆಲಂಗಾಣ, ತಮಿಳುನಾಡು ರಾಜ್ಯಗಳಿಗಿಂತಲೂ ತುಂಬಾ ಹಿಂದೆ ಬಿದ್ದಿದೆ.

ಕೆಲವು ದಿನಗಳ ಹಿಂದೆ ನಡೆದಿದ್ದ ಭಾರತೀಯ ಬ್ಯಾಂಕ್‌ಗಳ 75ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದ್ದ ನಿರ್ಮಲಾ ಸೀತಾರಾಮನ್, ಬ್ಯಾಂಕ್‌ಗಳಲ್ಲಿ ಸ್ಥಳೀಯ ಭಾಷೆ ಮಾತನಾಡುವ ಸಿಬ್ಬಂದಿಯನ್ನು ಒಳಗೊಳ್ಳುವ ಅಗತ್ಯದ ಕುರಿತು ಬಲವಾಗಿ ಪ್ರತಿಪಾದಿಸಿದ್ದರು. ಸ್ಥಳೀಯ ಭಾಷೆ ಗೊತ್ತಿರದ ಸಿಬ್ಬಂದಿಯನ್ನು ಗ್ರಾಹಕರೊಂದಿಗೆ ನೇರವಾಗಿ ಸಂವಹನ ನಡೆಸುವ ಹುದ್ದೆಗಳಿಗೆ ನಿಯೋಜಿಸಲೇಬಾರದು ಎಂದೂ ಒತ್ತಾಯಿಸಿದ್ದರು. ‘ಸ್ಥಳೀಯ ಭಾಷೆ ಬಾರದ ಸಿಬ್ಬಂದಿಯನ್ನು ಶಾಖಾಮಟ್ಟದಲ್ಲಿ ಇಟ್ಟುಕೊಂಡು, ‘ಏನು ಸ್ವಾಮಿ, ನಿಮಗೆ ಹಿಂದಿ ಬರುವುದಿಲ್ಲವೇ? ಹಾಗಾದರೆ ನೀವು ಭಾರತೀಯರಲ್ಲ’ ಎನ್ನುವಂತಹ ದೇಶಭಕ್ತಿ ಮನೋಭಾವ ಪ್ರದರ್ಶಿಸುವುದು ಒಳ್ಳೆಯ ವ್ಯವಹಾರದ ಲಕ್ಷಣವಲ್ಲ’ ಎಂದೂ ಹೇಳಿದ್ದರು. ಬ್ಯಾಂಕ್‌ಗಳು ಕ್ರಿಯಾಶೀಲವಾಗಿರಬೇಕು. ತಮ್ಮೊಡನೆ ವ್ಯವಹಾರ ನಡೆಸುವ ಗ್ರಾಹಕರ ಅಗತ್ಯಗಳನ್ನು ಪೂರೈಸಲು ಸದಾ ಸಿದ್ಧವಿರಬೇಕು ಎಂಬ ಸಲಹೆಯನ್ನು ಕೂಡ ಅವರು ನೀಡಿದ್ದರು. ಆದರೆ, ರಾಜ್ಯದ ಹಲವು ಭಾಗಗಳಲ್ಲಿ ಬ್ಯಾಂಕ್‌ಗಳು ಮತ್ತು ಗ್ರಾಹಕರ ಮಧ್ಯೆ ಸರಾಗ ಸಂವಹನವೇ ದೊಡ್ಡ ಅಡೆತಡೆ ಎನ್ನುವುದು ಎದ್ದು ಕಾಣುತ್ತಿರುವ ಸಂಗತಿ. ಇದರಿಂದ ಆಯಾ ಭಾಗಗಳ ಬೆಳೆ ಋತುಗಳು ಮತ್ತು ಅಲ್ಲಿನ ಕೃಷಿಕರ ಅಗತ್ಯಗಳನ್ನು ಗ್ರಹಿಸುವಲ್ಲಿ ಬ್ಯಾಂಕ್ ಸಿಬ್ಬಂದಿ ಸೋತಿದ್ದಾರೆ. ಅದರ ಪರಿಣಾಮ ಕೃಷಿಸಾಲ ನೀಡುವಲ್ಲಿ ಆಗಿರುವ ಹಿನ್ನಡೆಯಲ್ಲಿ ಪ್ರತಿಫಲನವಾಗಿದೆ. ಅಂತಿಮವಾಗಿ, ಬ್ಯಾಂಕ್‌ಗಳ ಒಟ್ಟಾರೆ ಸೇವಾಮಟ್ಟ ಮತ್ತು ಲಾಭ ಗಳಿಕೆಯ ಮೇಲೂ ಇದು ದುಷ್ಪರಿಣಾಮ ಬೀರುತ್ತಿದೆ.

> ಸರ್ಕಾರ ಚಾಟಿ ಬೀಸುವುದಕ್ಕೆ ಅವಕಾಶ ಕೊಡದೆ, ಪ್ರಾದೇಶಿಕ ಭಾಷೆಯಲ್ಲೇ ವ್ಯವಹಾರ ನಡೆಯುವಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಬ್ಯಾಂಕ್ ಆಡಳಿತ ಮಂಡಳಿಗಳ ಮೇಲಿದೆ

ಹಿಂದಿಯಲ್ಲಿಯೇ ಸಂವಹನ ನಡೆಸುವಂತೆ ಒತ್ತಾಯಿಸುವ ಬ್ಯಾಂಕ್ ಉದ್ಯೋಗಿಗಳು ಮತ್ತು ಕನ್ನಡ ಬಿಟ್ಟು ಬೇರೆ ಭಾಷೆ ಅರಿಯದ ಗ್ರಾಹಕರ ನಡುವೆ ಬ್ಯಾಂಕ್‌ಗಳಲ್ಲಿ ತಿಕ್ಕಾಟ ನಡೆಯುವುದು ಸಾಮಾನ್ಯವಾಗಿಬಿಟ್ಟಿದೆ. ಕನ್ನಡ ಚಳವಳಿಗಾರರು ಮತ್ತು ಬ್ಯಾಂಕ್ ಉದ್ಯೋಗಿಗಳ ನಡುವೆಯೂ ಆಗಾಗ ವಾಗ್ವಾದಗಳು ನಡೆಯುತ್ತಲೇ ಇವೆ. ಕನ್ನಡ ಭಾಷೆಯಲ್ಲಿ ವ್ಯವಹಾರ ನಡೆಸಲು ಸೌಕರ್ಯ ಕಲ್ಪಿಸಬೇಕೆಂದು ರಾಜ್ಯ ಸರ್ಕಾರ ಸಹ ಬ್ಯಾಂಕ್‌ಗಳ ಪ್ರಾದೇಶಿಕ ಮುಖ್ಯಸ್ಥರಿಗೆ ಸೂಚನೆ ನೀಡಿದೆ. ಬ್ಯಾಂಕ್‌ಗಳ ಹಟಮಾರಿತನದ ಧೋರಣೆ ವಿರುದ್ಧ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕೇಂದ್ರ ಸರ್ಕಾರಕ್ಕೆ ದೂರನ್ನೂ ನೀಡಿದೆ. ಇಷ್ಟೆಲ್ಲ ಒತ್ತಾಯ, ಒತ್ತಡ ಬಂದರೂ ಬ್ಯಾಂಕ್ ಆಡಳಿತಗಳಿಗೆ ಮಾತ್ರ ಜಾಣಕಿವುಡು. ತಮ್ಮ ಬ್ಯಾಂಕ್‌ಗಳ ಜೀವಾಳ ಎನಿಸಿದ ಗ್ರಾಹಕರ ಅಗತ್ಯವನ್ನು ಪೂರೈಸುವುದೇ ತಮ್ಮ ಆದ್ಯತೆಯಾಗಬೇಕು ಎನ್ನುವ ಸಂಗತಿ ಅವುಗಳ ವ್ಯವಸ್ಥಾಪಕ ಮಂಡಳಿಗಳಿಗೆ ಹೊಳೆಯದಿರುವುದು ಆಶ್ಚರ್ಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪದೇ ಪದೇ ಸೂಚನೆ ನೀಡಿದರೂ ಅದರ ಪಾಲನೆಯಲ್ಲಿ ಬ್ಯಾಂಕ್ ಆಡಳಿತ ಮಂಡಳಿಗಳು ಸ್ಪಷ್ಟವಾಗಿ ವಿಫಲವಾಗಿವೆ. ಅವುಗಳು ಸರಿದಾರಿಗೆ ಬರಲು ಸರ್ಕಾರ ಚಾಟಿ ಬೀಸುವುದೊಂದೇ ದಾರಿ ಎನ್ನುವಂತೆ ಭಾಸವಾಗುತ್ತಿದೆ. ಅದಕ್ಕೆ ಅವಕಾಶ ಕೊಡದೆ ತಮ್ಮ ಶಾಖೆಗಳಲ್ಲಿ ಪ್ರಾದೇಶಿಕ ಭಾಷೆಯಲ್ಲೇ ವ್ಯವಹಾರ ನಡೆಯುವಂತೆ ನೋಡಿಕೊಳ್ಳಲು ಎಲ್ಲ ಬ್ಯಾಂಕ್‌ಗಳಿಗೆ, ವಿಶೇಷವಾಗಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಇದು ಸಕಾಲ.

ಈಗ ಕೊಲಂಬೊದಲ್ಲಿ ಬೆಳೆಯುತ್ತಿದೆ ವಿದೇಶಗಳಲ್ಲಿ ಉದ್ಯೋಗದ ಭರವಸೆ ನೀಡುವ ಉದ್ಯಮ!

ಲಂಕಾ ಬಿಕ್ಕಟ್ಟು ಶಮನ ಆಗಿದೆಯೇ?

ವಿಶ್ಲೇಷಣೆ

ಮುಜೀಬ್ ಮಶಾಲ್, ಸ್ಕಂದ ಗುಣಶೇಖರ

ಹಿಂದಿನ ವರ್ಷದ ಬೇಸಿಗೆಯ ಹೊತ್ತಿನಲ್ಲಿ ರಾಜಕೀಯ ಗೊಂದಲಗಳು ಹಾಗೂ ಆರ್ಥಿಕವಾಗಿ ಸರಿಸುಮಾರು ದಿವಾಳಿ ಸ್ಥಿತಿಗೆ ತಲುಪಿದ್ದ ಶ್ರೀಲಂಕಾದಲ್ಲಿ ಮೇಲ್ನೋಟಕ್ಕೆ ಪರಿಸ್ಥಿತಿ ಶಾಂತವಾಗಿದೆ. ಆದರೆ, ಒಂದು ಹಂತ ಮುಂದಕ್ಕೆ ಹೋಗಿ ಕಂಡರೆ, ಅಲ್ಲಿನ ಅರ್ಥ ವ್ಯವಸ್ಥೆಯು ಜೀವರಕ್ಷಕ ಉಪಕರಣಗಳನ್ನು ನೆಚ್ಚಿ ಮುಂದುವರಿಯುತ್ತಿರುವುದು ಗೊತ್ತಾಗುತ್ತದೆ. ಸಾಲದ ಸುಳಿಯಿಂದ ಹೊರಬರಲು ಅಲ್ಲಿನ ಸರ್ಕಾರವು ಮಾರ್ಗವೊಂದನ್ನು ಇನ್ನಷ್ಟೇ ಕಂಡುಕೊಳ್ಳಬೇಕಿದೆ. ಲಂಕನ್ನರು ವಾಸ್ತವವನ್ನು ಒಪ್ಪಿಕೊಂಡಿದ್ದಾರೆ– ಅವರ ಆದಾಯ ಕಡಿಮೆಯಾಗಿದೆ, ನಿರೀಕ್ಷೆಗಳು ತಗ್ಗಿವೆ. ಅಲ್ಲಿನ ಯುವಕರಲ್ಲಿ ಹಲವರು ದೇಶದಿಂದ ಹೊರಹೋಗಲು ದಾರಿ ಅರಸುತ್ತಿದ್ದಾರೆ. ಹೊರ ಹೋಗಲು ಅವಕಾಶ ಇಲ್ಲದಿರುವವರು, ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಿದರೂ ಅದು ದೊಡ್ಡ ಮಟ್ಟದಲ್ಲೇನೂ ಇರಲಾರದು ಎಂಬುದನ್ನು ಒಪ್ಪಿಕೊಳ್ಳುತ್ತಿದ್ದಾರೆ.

ಜುಲೈನಲ್ಲಿ ನಡೆದ ಜನಕ್ರಾಂತಿಯು ಅಲ್ಲಿನ ಅಧ್ಯಕ್ಷರನ್ನು ಪದಚ್ಯುತಗೊಳಿಸಿದರೂ, ಅದೇ ರಾಜಕೀಯ ಪ್ರಬಲ ವರ್ಗವು ದೇಶದಲ್ಲಿ ಎಲ್ಲವನ್ನೂ ನಿಯಂತ್ರಿಸುತ್ತಿದೆ ಎಂಬುದು ಜನರನ್ನು ಹತಾಶೆಗೆ ನೂಕಿರುವಂತಿದೆ. ಜೀವನಮಟ್ಟ ತಗ್ಗಿರುವ ಚಿತ್ರಣವನ್ನು ಆರ್ಥಿಕತೆಗೆ ಸಂಬಂಧಿಸಿದ ಅಂಕಿ–ಅಂಶಗಳು ನೀಡುತ್ತಿವೆ. ಬಿಕ್ಕಟ್ಟು ತೀವ್ರವಾಗಿದ್ದಾಗ ಶೇಕಡ 90ಕ್ಕೆ ತಲುಪಿದ್ದ ಹಣದುಬ್ಬರ ಪ್ರಮಾಣವು ಈಗ ಶೇ 59ರ ಮಟ್ಟದಲ್ಲಿದೆ. ಅಲ್ಲಿನ ಪ್ರತೀ ಐದು ಕುಟುಂಬಗಳಲ್ಲಿ ಎರಡು ಕುಟುಂಬಗಳು, ಆಹಾರ ಪದಾರ್ಥಗಳ ಖರೀದಿಗೇ ಶೇ 75ರಷ್ಟು ಆದಾಯವನ್ನು ವ್ಯಯಿಸಬೇಕಾಗಿದೆ. ವಿಶ್ವಸಂಸ್ಥೆಯ ಪ್ರಕಾರ ಅಲ್ಲಿ ಶೇ 30ರಷ್ಟು ಜನ ಆಹಾರದ ಅಭದ್ರತೆ ಎದುರಿಸುತ್ತಿದ್ದಾರೆ.

ವ್ಯವಸ್ಥೆಯು ಸ್ಥಿರವಾಗಿರುವಂತೆ ಕಾಣಿಸುವ ರೀತಿಯಲ್ಲಿ ಕೆಲವು ಬದಲಾವಣೆಗಳು ಬಂದಿವೆ. ಆದರೆ ಹೀಗೆ ಆಗಿರುವುದು ಅರ್ಥ ವ್ಯವಸ್ಥೆಯನ್ನು ರಿಪೇರಿ ಮಾಡಿ ಅಲ್ಲ. ಬದಲಿಗೆ, ತೆರಿಗೆಗಳನ್ನು ಹೆಚ್ಚಿಸಿ, ಸಬ್ಸಿಡಿಗಳನ್ನು ಕಡಿತ ಮಾಡಿ ಈ ಸ್ಥಿತಿ ತರಲಾಗಿದೆ. ಈ ರೀತಿ ಮಾಡಿದ್ದರಿಂದಾಗಿ ಬೇಡಿಕೆ ಇನ್ನಷ್ಟು ತಗ್ಗಿದೆ. ಈ ಕ್ರಮಗಳು ಜನಪ್ರಿಯವಲ್ಲ. ರಾಜಕೀಯದಲ್ಲಿ ವಿರೋಧ ಪಕ್ಷಗಳಿಗೆ ಆಡಳಿತ ಪಕ್ಷವನ್ನು ಟೀಕಿಸಲು ಒಂದು ಕಾರಣವನ್ನು ಕೊಟ್ಟಿದೆ ಇದು. ಆಡಳಿತಾರೂಢ ಪಕ್ಷ ಅಥವಾ ಮುಂದೆ ಆಡಳಿತಕ್ಕೆ ಬರುವವರು ಈ ಕ್ರಮಗಳನ್ನು ಹಿಂಪಡೆಯಬಹುದು.

ದೇಶದ ಮಧ್ಯಭಾಗದಲ್ಲಿ ಬದುಕು ಕಟ್ಟಿಕೊಂಡಿರುವ ರೈತ ಎಚ್.ಎಂ. ದಿಸ್ಸನಾಯಕೆ ಹಾಗೂ ಅವರ ಪತ್ನಿ ಮಲಾನಿ ಮಂಗಲಿಕಾ ಅವರು ಮೀನು ಮತ್ತು ಮಾಂಸವನ್ನು ಬಳಸುವುದನ್ನು ಕಡಿಮೆ ಮಾಡಿದ್ದಾರೆ. ಮೊದಲು ವಾರಕ್ಕೆ ಮೂರು ಬಾರಿ ಇವುಗಳನ್ನು ಬಳಸುತ್ತಿದ್ದ ದಂಪತಿ ಈಗ ತಿಂಗಳಿಗೆ ಒಮ್ಮೆ ಮಾತ್ರ ಬಳಸುತ್ತಿದ್ದಾರೆ. ಕಡೆಯ ಬಾರಿ ಹಾಲು ಕುಡಿದಿದ್ದು ಯಾವಾಗ ಎಂಬುದು ಇವರಿಗೆ ಸರಿಯಾಗಿ ನೆನಪಿಲ್ಲ. ಆರು ತಿಂಗಳ ಹಿಂದೆ ಎಂದು ಮಂಗಲಿಕಾ ಹೇಳುತ್ತಾರೆ. ಮೊಟ್ಟೆ ತಿಂದು ಎರಡು ತಿಂಗಳು ಕಳೆದಿದೆ.

2.2 ಕೋಟಿ ಜನಸಂಖ್ಯೆ ಹೊಂದಿರುವ ಶ್ರೀಲಂಕಾ ಪರಿಸ್ಥಿತಿಯನ್ನು ನಿಭಾಯಿಸಲಿದೆಯೇ ಅಥವಾ ಆರ್ಥಿಕವಾಗಿ ಇನ್ನಷ್ಟು ಆಳಕ್ಕೆ ಬೀಳಲಿದೆಯೇ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಹಲವು ಸಣ್ಣ ದೇಶಗಳು ನಿಭಾಯಿಸಲು ಆಗದಷ್ಟು ಸಾಲ ಮಾಡಿಕೊಂಡು ಕಷ್ಟಪಡುತ್ತಿವೆ. ಹೀಗೆ ಕಷ್ಟಪಡುತ್ತಿರುವ ಹಲವು ದೇಶಗಳು ದೊಡ್ಡ ಮಟ್ಟದಲ್ಲಿ ಸಾಲ ಪಡೆದಿರುವುದು ಚೀನಾದಿಂದ. ಸಾಲ ಮರುಪಾವತಿಗೆ ಹಣಕಾಸು ನೆರವು ಪಡೆಯಲು ಶ್ರೀಲಂಕಾ, ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಜೊತೆ ಮಾತುಕತೆಯಲ್ಲಿ ತೊಡಗಿದೆ. ಇದಕ್ಕೆ ಐಎಂಎಫ್ ಒಡ್ಡಿರುವ ಷರತ್ತಿನ ಭಾಗವಾಗಿ ಶ್ರೀಲಂಕಾ, ತಾನು ಸಾಲ ಮರುಪಾವತಿಸಬೇಕಿರುವ ಚೀನಾದಂತಹ ದೇಶಗಳ ಜೊತೆ ಸಾಲಕ್ಕೆ ಸಂಬಂಧಿಸಿದ ನಿಬಂಧನೆಗಳಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಬೇಕು. ಶ್ರೀಲಂಕಾಕ್ಕೆ ಅತಿಹೆಚ್ಚು ಸಾಲ ಕೊಟ್ಟಿರುವ ಚೀನಾದ ಕಡೆಯಿಂದ ಪ್ರತಿಕ್ರಿಯೆಯು ಕ್ಷಿಪ್ರವಾಗಿ ಸಿಕ್ಕಿಲ್ಲದ ಕಾರಣದಿಂದಾಗಿ, ಐಎಂಎಫ್ ಜೊತೆಗಿನ ಒಪ್ಪಂದವು ವಿಳಂಬವಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಶ್ರೀಲಂಕಾಕ್ಕೆ ಹೆಚ್ಚಿನ ಸಾಲ ನೀಡಿರುವ ಭಾರತವು ಸಾಲದ ಮರುಹೊಂದಾಣಿಕೆ ವಿಚಾರವಾಗಿ ಭರವಸೆ ಕೊಟ್ಟಿದೆ.

ಚೀನಾದಿಂದ ಸ್ಪಷ್ಟ ಭರವಸೆಗೆ ಕಾಯುತ್ತಿರುವ ಹೊತ್ತಿನಲ್ಲಿ ಶ್ರೀಲಂಕಾ, ಐಎಂಎಫ್‌ನ ಇತರ ಷರತ್ತುಗಳನ್ನು ಪಾಲಿಸಲು ಮುಂದಾಗುತ್ತಿದೆ. ಬಜೆಟ್ ಕೊರತೆಯನ್ನು ತಗ್ಗಿಸಲು ಅದು ಕ್ರಮ ಕೈಗೊಳ್ಳುತ್ತಿದೆ. ಅಂದರೆ, ತೆರಿಗೆ ಹೆಚ್ಚಿಸುತ್ತಿದೆ, ಇಂಧನ ಹಾಗೂ ವಿದ್ಯುತ್ತಿನ ಮೇಲೆ ಸಬ್ಸಿಡಿಗಳನ್ನು ಕಡಿತ ಮಾಡುತ್ತಿದೆ. ನಷ್ಟದಲ್ಲಿರುವ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ಸುಧಾರಣೆ ತರಲು ಯತ್ನಿಸುತ್ತಿದೆ.

ಬಿಕ್ಕಟ್ಟು ತೀವ್ರವಾಗಿದ್ದ ಸಂದರ್ಭಕ್ಕೆ ಹೋಲಿಸಿದರೆ ಈಗ ಅಗತ್ಯ ವಸ್ತುಗಳ ಪೂರೈಕೆ ಹಾಗೂ ಲಭ್ಯತೆಯನ್ನು ಸರ್ಕಾರವು ಸುಧಾರಿಸಿದೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಶೆಹನ್ ಸೇಮಸಿಂಘೆ ಹೇಳುತ್ತಾರೆ. ಆದರೆ ದೇಶದ ವಿದೇಶಿ ವಿನಿಮಯ ಮೀಸಲು ನಗಣ್ಯ ಪ್ರಮಾಣದಲ್ಲಿದೆ, ವೆಚ್ಚಗಳ ವಿಚಾರದಲ್ಲಿ ದೇಶವು ಈಗಲೂ ಬಹಳ ಹಿಡಿತದಲ್ಲಿ ಸಾಗಬೇಕಾಗಿದೆ ಎಂದು ಅವರು ವಿವರಿಸುತ್ತಾರೆ. ‘ನಾವು ಹಲವು ಕ್ರಮಗಳನ್ನು ಅನುಸರಿಸಿದ್ದೇವೆ. ನಾವು ಬೇಡಿಕೆಯನ್ನು ಬಹಳ ದೊಡ್ಡ ಮಟ್ಟದಲ್ಲಿ ಹತ್ತಿಕ್ಕಿದ್ದೇವೆ’ ಎಂದು ಅವರು ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.

ದಿಸ್ಸನಾಯಕೆ ಅವರಂತಹ ರೈತರು ವೆಚ್ಚಗಳನ್ನು ಈ ಹಿಂದೆ ಯಾವತ್ತೂ ಈ ಮಟ್ಟದಲ್ಲಿ ಕಡಿಮೆ ಮಾಡಬೇಕಾದ ಸಂದರ್ಭ ಎದುರಿಸಿರಲಿಲ್ಲ. ಅವರು ಅನುಭವಿಸಿದ ಆರ್ಥಿಕ ಬಿಕ್ಕಟ್ಟಿಗೆ ಒಂದಿಷ್ಟು ಕಾರಣ ಸರ್ಕಾರ ಕೈಗೊಂಡ ಕೆಲವು ಕ್ರಮಗಳು. ಗೊಟಬಯ ರಾಜಪಕ್ಸ ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ 2021ರಲ್ಲಿ, ದೇಶದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ನಿಷೇಧಿಸಿದರು. ಅವರು ದೇಶದಲ್ಲಿ ಸಾವಯವ ಕೃಷಿ ಪದ್ಧತಿ ಬರಬೇಕು ಎಂದು ಹೇಳಿದರು. ಇದರ ಪರಿಣಾಮವಾಗಿ ದೊಡ್ಡ ದುರಂತವೇ ಎದುರಾಯಿತು. ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ದೇಶದ ಕೃಷಿ ಉತ್ಪಾದನೆಯು ಶೇ 50ರಷ್ಟು ಕಡಿಮೆ ಆಯಿತು. ಪ್ರತಿಭಟನೆಗಳನ್ನು ಗಮನಿಸಿ, ತನ್ನ ತೀರ್ಮಾನವನ್ನು ಸರ್ಕಾರ ಹಿಂದಕ್ಕೆ ಪಡೆಯುವ ಹೊತ್ತಿಗೆ, ರಸಗೊಬ್ಬರ ಆಮದು ಮಾಡಿಕೊಳ್ಳಲು ಅಗತ್ಯವಿರುವಷ್ಟು ವಿದೇಶಿ ವಿನಿಮಯವೂ ದೇಶದಲ್ಲಿ ಇರಲಿಲ್ಲ.

ಈ ಹಂಗಾಮಿನಲ್ಲಿ ಸರ್ಕಾರವು ಭತ್ತ ಬೆಳೆಯುವ ರೈತರಿಗೆ ಯೂರಿಯಾವನ್ನು ರಿಯಾಯಿತಿ ದರದಲ್ಲಿ ಪೂರೈಸಿದೆ. ಹೀಗಿದ್ದರೂ ಅದರ ಬೆಲೆಯು ಈಗ, ರೈತರು ಹಿಂದೊಮ್ಮೆ ಪಾವತಿಸುತ್ತಿದ್ದ ಬೆಲೆಗೆ ಹೋಲಿಸಿದರೆ 20 ಪಟ್ಟು ಹೆಚ್ಚಿದೆ. ಈಗ ಭತ್ತದ ಬೆಳೆಯು ಮೊದಲಿದ್ದ ಹಂತಕ್ಕೆ ಬರಲಿದೆ ಎಂಬ ವಿಶ್ವಾಸವು ದಿಸ್ಸನಾಯಕೆ, ಅವರ ಊರಿನ ರೈತರು ಹಾಗೂ ಸರ್ಕಾರದ ಅಧಿಕಾರಿಗಳಲ್ಲಿ ಇದೆ. ಆದರೆ ಈಗ ತರಕಾರಿ ಹಾಗೂ ಹಣ್ಣು ಬೆಳೆಯುವವರು ಮಾರುಕಟ್ಟೆಯ ಕೃಪೆಯನ್ನು ನೆಚ್ಚಿಕೊಂಡು ಬದುಕುತ್ತಿದ್ದಾರೆ. ‘ನಾವು ಭತ್ತ ಬೆಳೆಗಾರರಲ್ಲ ಎಂಬ ಕಾರಣಕ್ಕೆ ಸರ್ಕಾರವು ನಮಗೆ ರಸಗೊಬ್ಬರ ನೀಡುತ್ತಿಲ್ಲ’ ಎಂದು ಎಂ.ಡಿ.ಎಸ್. ವಿಜೆಸಿಂಘೆ ಹೇಳುತ್ತಾರೆ. ಅವರು ಹಿಂದೊಮ್ಮೆ ಪಪ್ಪಾಯ ಹಾಗೂ ಟೊಮೆಟೊ ಕೃಷಿಯಲ್ಲಿ ಯಶಸ್ಸು ಸಾಧಿಸಿದ್ದವರು. ಆದರೆ ಸಾವಯವ ಕೃಷಿ ಕುರಿತ ತೀರ್ಮಾನವು ಇವರಿಗೆ ಏಟು ಕೊಟ್ಟಿತು. ‘ನಮಗೆ ರಸಗೊಬ್ಬರವನ್ನು ಮಾರುಕಟ್ಟೆಯ ದುಬಾರಿ ಬೆಲೆಗೆ ಖರೀದಿಸಲು ಆಗದು’ ಎಂದು ಅವರು ಹೇಳುತ್ತಾರೆ.

ಈಗ ಕೊಲಂಬೊದಲ್ಲಿ, ವಿದೇಶಗಳಲ್ಲಿ ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡುವ ಉದ್ಯಮವು ವ್ಯಾಪಕವಾಗಿ ಬೆಳೆಯುತ್ತಿದೆ. 2022ರಲ್ಲಿ ಶ್ರೀಲಂಕಾದ ಮೂರು ಲಕ್ಷ ಜನ ಉದ್ಯೋಗ ಅರಸಿ ವಿದೇಶಗಳಿಗೆ ತೆರಳಿದ್ದಾರೆ. ಟರ್ಕಿಯಲ್ಲಿ ಉದ್ಯೋಗ ಕೊಡಿಸುವ ಸುಳ್ಳು ಜಾಹೀರಾತೊಂದನ್ನು ನೋಡಿ 500 ಜನ ಕೊಲಂಬೊಕ್ಕೆ ಬಂದಿದ್ದರು. ಜನರಲ್ಲಿ ಹತಾಶೆ ಆ ಮಟ್ಟದಲ್ಲಿದೆ. ‘ಎಲ್ಲರಿಗೂ ದೇಶ ತೊರೆಯಬೇಕು ಅನ್ನಿಸುತ್ತಿದೆ’ ಎಂದು ರವಿ ಎಸ್. ಹೇಳುತ್ತಾರೆ. ಅವರು ನೇಮಕಾತಿ ಸಂಸ್ಥೆಯೊಂದರಲ್ಲಿ ಅಧಿಕಾರಿ. ವಿದೇಶಗಳಲ್ಲಿ ಕೆಲಸ ಇದೆಯೇ ಎಂದು ಬೇರೆ ಬೇರೆ ಕಂಪನಿಗಳ ಸಿಇಒ ಹುದ್ದೆಯಲ್ಲಿರುವವರೂ ವಿಚಾರಿಸುತ್ತಿದ್ದಾರೆ ಎಂದು ಅವರು ಹೇಳುತ್ತಾರೆ.

ಕೆ. ಶಿವನಾಥನ್ ಅವರಿಗೆ ಬ್ಯಾಂಕ್‌ನಲ್ಲಿ ಉದ್ಯೋಗ ದೊರೆತಾಗ, ತಮ್ಮ ಸಂಬಳ ಹಾಗೂ ತಂದೆಯ ಸಂಬಳ ಜೊತೆಗೂಡಿದರೆ ಕುಟುಂಬಕ್ಕೆ ಬೇಕಾಗುವಷ್ಟಾಗುತ್ತದೆ ಎಂದು ಭಾವಿಸಿದ್ದರು. ಆದರೆ, ಬೆಲೆಗಳು ಗಗನಕ್ಕೇರಿರುವ ಪರಿಣಾಮವಾಗಿ ಶಿವನಾಥನ್ ಅವರ ಸಂಬಳದಲ್ಲಿ ಮೂರನೆಯ ಒಂದು ಪಾಲು ಬಸ್ ಖರ್ಚು ಹಾಗೂ ಮಧ್ಯಾಹ್ನದ ಊಟಕ್ಕೆ ವಿನಿಯೋಗವಾಗುತ್ತಿದೆ. ಬೇಡಿಕೆ ತಗ್ಗಿರುವ ಕಾರಣ ಅವರ ತಂದೆಯ ವೇತನ ಶೇ 80ರಷ್ಟು ಕಡಿಮೆಯಾಗಿದೆ.

ದಿ ನ್ಯೂಯಾರ್ಕ್ ಟೈಮ್ಸ್

ಚುರುಮುರಿ



ಸ್ಮಶಾನ ಕಾಯೋನು

● ಲಿಂಗರಾಜು ಡಿ.ಎಸ್.

‘ಈ ದೇಸದಲ್ಲಿ ವಾಕಿಂಗ್ ಸ್ವಾತಂತ್ರವೇ ಇಲ್ಲ ಅಂದದೆ ಖರ್ಗೆ ಮಾಮ!’ ಅಂದ ಚಂದ್ರು.

‘ಅದು ವಾಕಿಂಗ್ ಸ್ವಾತಂತ್ರ ಅಲ್ಲ ಕಪ್ಪಾ ವಾಕ್ ಸ್ವಾತಂತ್ರ’ ಯಂಟಪ್ಪಣ್ಣ ತಿದ್ದಿದ್ದು.

‘ಅದಕ್ಕೆ ಏನೋ ಮೋದಿ ಮಾವಾರು ಚುನಾವಣೆ ಖಾತೆ, ಪಹಣಿ ನೋಡಕ್ಕೆ ಅಂತ ವಾರವಾರಲೂ ವಾಕಿಂಗ್ ಬಂದು ಮೊಕ್ಕಾಂ ಹೂಡ್ತಾವ್ರೆ. ಶಾ-ನುಭೋಗರೂ ಫಸಲು ಜಮಾಬಂದಿ ವಾಕಿಂಗ್ ಸುರು ಮಾಡ್ಯವ್ರೆ. ಲೋಕಲ್ ನಾಯಕರೆಲ್ಲ ಸತಾಪಲುಗಳು ಅಂತ ಗೊತ್ತಾಗಿರಬಕು!’ ಅಂತಂದೆ.

‘ಅವ್ರೆಲ್ಲಾ ಜಾತಿ, ಧರ್ಮವ ಕೂದು ಪಾಲು ಹಾಕ್ಯಣಕದ್ರಲ್ಲೇ ಬಿಜಿ ಅವ್ರೆ ಕಪ್ಪಾ!’ ಯಂಟಪ್ಪಣ್ಣ ಸಿಡಿಯಿತು.

‘ಬಡವರದ್ದು ಮಾತ್ರ ‘ಹಗಲು ಸತ್ತರೆ ಅಕ್ಕೀಗೆ ಗತಿಲ್ಲ, ಇಳ್ಳು ಸತ್ತರೆ ಎಣ್ಣೆಗೆ ಗತಿಲ್ಲ’ ಅನ್ನೋ ವಡಬಾಳಾಗ್ಯದೆ!’ ನನ್ನ ಮಾತು ಸೇರಿಸಿದೆ.

‘ಭ್ರಷ್ಟಾಚಾರ ಡೆವಲಪಿಂಗ್ ಅಥಾರಿಟಿಗಳು, ಪೋಲಿ ಪಾಲಿಕೆಗಳು, ಕಾಸಿಗಾಗಿ ಅಂಗಲಾಚೋ ಅಧಿಕಾರಿಗಳಿಗೆ ಕೋರ್ಟು, ಲೋಕಾಯುಕ್ತಗಳು ಮಕ್ಕುಗಿಯದು ಕಂಡು ಡಲ್ಲಾಳಿಗಳೆಲ್ಲಾ ಡಲ್ಲಾಗ್ಯವರಂತೆ ಕನಣ್ಣೆ!’ ಚಂದ್ರುವೂ ರಾಂಗಾದ.

‘ಶಾಸಕಾಂಗ, ಕಾರ್ಯಾಂಗಗಳು ಮೂರೂ ಬುಟ್ಟು ಬೀದಿಗೆ ಬಂದ ಮ್ಯಾಲೆ ಸರ್ಕಾರ ಐತಾ ಇಲ್ಲವಾ ಅನ್ನದೇ ಗೊತ್ತಾಯ್ತಿಲ್ಲ ಸಾ. ಬಸಣ್ಣ ಯಾಕೋ ಸ್ಯಾನೆ ಈಕಾಗಿ ಬುಡ್ತು!’ ನನ್ನ ಅನುಮಾನ ಹೇಳಿದೆ.

‘ನನ್ನ ಯಾರೂ ಲೆಕ್ಕಕೇ ಮಡಗಿಲ್ಲ, ಉಸುರು ಈಚೆಗೆ ಕಡೆಯಕ್ಕೂ ಹೈಕಮಾಂಡ್ ಪರ್ಮಿಸನ್ ಕೊಡಬಕು. ನಮ್ಮ ಪಾಲೂ ಸರಿಯಾಗಿ ಕೊಡ್ತಿಲ್ಲ, ಅನ್ನಂಗಿಲ್ಲ, ಆಡಂಗಿಲ್ಲ!’ ಅಂತ ನೊಂದ್ಕತಿರಬಕು ಪಾಪ’ ಯಂಟಪ್ಪಣ್ಣ ಲೊಚಗುಟ್ಟಿತು.

‘ನೋಡಿರ್ಲಾ ಬೊಡ್ಡಿಹೈದ್ರಾ, ರಾಜ್ಯದ ಸಿಎಂ ಅಂದ್ರ ಮಸಾಣ ಕಾಯೋನಿದ್ದಂಗೆ. ಮಸಾಣದೇಲಿ ಪೀಡೆ, ಪಿಶಾಚಿ, ಕೊಳ್ಳಿದೆವ್ವ, ಮೋಹಿನಿ, ಬ್ರಹ್ಮರಾಕ್ಷಸ, ದಯ್ಯ-ಭೂತಗಳೆಲ್ಲಾ ಇರತವೆ. ಲೆಕ್ಕಕ್ಕೆ ಅವೆಲ್ಲಾ ಅವನ ಅಧೀನದಲ್ಲೇ ಇರತವೆ. ಆದರೆ ಯಾವೂ ಅವನ ಮಾತೇ ಕೇಳಕುಲ್ಲ! ಸರ್ಕಾರವೂ ಹಂಗೇ ಆಗೋಗ್ಯದೆ’ ಅಂತ ತುರೇಮಣೆ ಫಿಟಿಂಗ್ ಇಟ್ಟರು.

ದಿನದ ಟ್ವೀಟ್

ಅಚ್ಚರಿದಾಯಕ ಕಾರಣ

ಇಂದು ರಾಜ್ಯಸಭೆಯಲ್ಲಿ, ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ & ಉಕ್ಕಿನ ಕಾರ್ಖಾನೆಯನ್ನು ಶಾಶ್ವತವಾಗಿ ಮುಚ್ಚಲಾಗುತ್ತಿದೆ ಎಂದು ಸರ್ಕಾರ ಒಪ್ಪಿಕೊಂಡಿದೆ. ಕಾರ್ಖಾನೆಗೆ ಕಬ್ಬಿಣದ ಅದಿರಿನ ಮೂಲ ಇಲ್ಲ ಎಂಬ ಕಾರಣ ನೀಡಿ ಮುಚ್ಚಲಾಗುತ್ತಿದೆ. ರಾಜ್ಯದಲ್ಲಿ ಖಾಸಗಿ ಕಾರ್ಖಾನೆಗಳು ಗಣಿಗಳನ್ನು ಹೊಂದಿದ್ದರೂ SAILಗೆ ಗಣಿ ಇಲ್ಲ ಎಂಬುದು ಆಶ್ಚರ್ಯಕರ!

ಜೈರಾಂ ರಮೇಶ್, ಕಾಂಗ್ರೆಸ್ ಮುಖಂಡ

ಕಿಡಿನುಡಿ

ಪ್ರಧಾನಿ ಮೋದಿ ಅವರಿಗೆ ಬೆಂಗಳೂರಿಗೆ ಬಂದು ಕರ್ನಾಟಕದ ಕ್ರಿಕೆಟಿಗರು ಹಾಗೂ ಸಿನಿಮಾ ತಾರೆಯರ ಜೊತೆ ಊಟ ಮಾಡಲು ಸಮಯವಿದೆ. ಆದರೆ, 2019ರಲ್ಲಿ ಪ್ರವಾಹದ ಕಾರಣದಿಂದಾಗಿ ಕರ್ನಾಟಕ ಮುಳುಗಿದ್ದಾಗ ಇವರು ರಾಜ್ಯ ಭೇಟಿಯ ಬಗ್ಗೆ ಏಕೆ ಆಲೋಚಿಸಲಿಲ್ಲ ಎಂಬುದು ನನ್ನ ಪ್ರಶ್ನೆ. ಚುನಾವಣೆಯು ಯಾವಾಗಲೂ ಅವರ ಭೇಟಿಯನ್ನು ತೀರ್ಮಾನಿಸುತ್ತದೆ.

ರಾಮಚಂದ್ರ ಎಮ್, ಬರಹಗಾರ

25 ವರ್ಷಗಳ ಹಿಂದೆ

ಶನಿವಾರ, 14-2-1998

● **ಚುನಾವಣೆ ಸಮೀಕ್ಷೆ ಪ್ರಕಟಣೆ ನಿಷೇಧ ಆದೇಶ ಜಾರಿಯಲ್ಲಿದೆ**

ನವದೆಹಲಿ, ಫೆ. 13– ಚುನಾವಣಾ ಸಮೀಕ್ಷೆಗಳನ್ನು ನಿಷೇಧಿಸುವ ಕುರಿತು ಚುನಾವಣಾ ಆಯೋಗ ಹೊರಡಿಸಿರುವ ಆದೇಶಕ್ಕೆ ವಿರುದ್ಧವಾಗಿ ಆಯೋಗಕ್ಕೆ ಸುಪ್ರೀಂ ಕೋರ್ಟ್ ಯಾವುದೇ ನಿರ್ದೇಶನ ನೀಡಿಲ್ಲ, ಆದ್ದರಿಂದ ಚುನಾವಣಾ ಆಯೋಗ ಈ ಮೊದಲು ಹೊರಡಿಸಿರುವ ಆದೇಶ ಜಾರಿಯಲ್ಲಿರುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ ಎಂ.ಎಸ್. ಗಿಲ್ ಅವರು ಸ್ಪಷ್ಟಪಡಿಸಿದ್ದಾರೆ.

ಫೆಬ್ರುವರಿ ತಿಂಗಳ 14ರಿಂದ 28ರ ವರೆಗೆ ಯಾವುದೇ ಸಮೀಕ್ಷೆಗಳನ್ನು ಪ್ರಕಟಿಸಬಾರದು ಎಂದು ಆಯೋಗ ಆದೇಶ ನೀಡಿತ್ತು.

ಸಮೀಕ್ಷೆ ಪ್ರಕಟಿಸುವ ಪತ್ರಿಕೆ ಹಾಗೂ ಟೆಲಿವಿಷನ್ ಜಾಲಗಳ ವಿರುದ್ಧ ಕ್ರಮ ಕೈಗೊಳ್ಳುವುದೇ ಎಂಬ ಪ್ರಶ್ನೆಗೆ ಉತ್ತರಿಸಲಿಲ್ಲ.

● **ರಾಯಚೂರು ಬಳಿ ಅಪಘಾತ: 12 ಜನ ಸಾವು**

ಕುಷ್ಟಗಿ, ಫೆ. 13– ಇಲ್ಲಿಂದ 28 ಕಿಲೊಮೀಟರ್ ದೂರದ ತಾವರೆಗೆರೆ ಹತ್ತಿರ ರಾಯಚೂರಿನಿಂದ ಬರುತ್ತಿದ್ದ ರಾಜ್ಯ ಸಾರಿಗೆ ಬಸ್ ಮತ್ತು ಟೆಂಪೋ ಪರಸ್ಪರ ಡಿಕ್ಕಿ ಹೊಡೆದು 12 ಜನರು ಸ್ಥಳದಲ್ಲೇ ಮೃತಪಟ್ಟ ಘಟನೆ ಇಂದು ಸಂಜೆ 4.15ರ ಸುಮಾರಿಗೆ ನಡೆದಿದೆ.

ಎರಡೂ ವಾಹನಗಳ ಚಾಲಕರು ಸೇರಿದಂತೆ ಹನ್ನೆರಡು ಜನ ಮೃತಪಟ್ಟಿದ್ದಾರೆ. ಅವರಲ್ಲಿ ಐವರು ಮಹಿಳೆಯರೂ ಸೇರಿ 10 ಮಂದಿ ಟೆಂಪೋ ಪ್ರಯಾಣಿಕರಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 14-2-1973

● **ಡಾಲರಿನ ಮೌಲ್ಯ ಶೇ 10ರಷ್ಟು ವಿಚ್ಛೇದನ, ಯೆನ್ ಮುಕ್ತ ಚಲಾವಣೆ**

ವಾಷಿಂಗ್ಟನ್, ಫೆ. 13– ಅಮೆರಿಕ ಇಂದು ಡಾಲರನ್ನು ಶೇಕಡ 10ರಷ್ಟು ಅಪಮೌಲ್ಯಗೊಳಿಸಿತು. ಈ ಹದಿನಾಲ್ಕು ತಿಂಗಳ ಅವಧಿಯಲ್ಲಿ ಇದು ಎರಡನೆಯ ಬಾರಿ ಅಮೆರಿಕ ಡಾಲರನ್ನು ಅಪಮೌಲ್ಯಗೊಳಿಸುತ್ತಿರುವುದು.

ಡಾಲರು ಅಪಮೌಲ್ಯಗೊಳಿಸುವ ನಿರ್ಧಾರದಿಂದಾಗಿ ಅಮೆರಿಕದ ಕಾರ್ಮಿಕರು ಹಾಗೂ ವಾಣಿಜ್ಯೋದ್ಯಮಿಗಳಿಗೆ ಅನುಕೂಲ ಉಂಟಾಗುವುದೆಂದು ಅರ್ಥ ಶಾಖೆ ಕಾರ್ಯದರ್ಶಿ ಅವರು ಸೋಮವಾರ ಮಧ್ಯರಾತ್ರಿಗೆ ಒಂದು ಗಂಟೆ ಮುಂಚಿತವಾಗಿ ಹಠಾತ್ತನೆ ಕರೆದ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

● **‘ಕೆ.ಜಿ.ಎಫ್: ರಾಷ್ಟ್ರೀಕರಣ ಮಾಡದಿದ್ದರೆ ಬರಿ ಡೊಗರು ಉಳಿಯುತ್ತಿತ್ತು’**

ಬೆಂಗಳೂರು, ಫೆ. 13– ಕೋಲಾರದ ಚಿನ್ನದ ಗಣಿಯನ್ನು 1956ರಲ್ಲಿ ರಾಷ್ಟ್ರೀಕರಣ ಮಾಡಿರದಿದ್ದರೆ ಗಣಿಗಳ ಮಾಲೀಕರು ಈ ದೇಶಕ್ಕೆ ಒಂದು ಭಾರಿ ಡೊಗರನ್ನು ಮಾತ್ರ ಬಿಟ್ಟುಹೋಗುತ್ತಿದ್ದರೆಂದು ಅಂದು ಕೈಗಾರಿಕಾ ಸಚಿವರಾಗಿ ರಾಷ್ಟ್ರೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆರೋಗ್ಯ ಸಚಿವ ಶ್ರೀ ಎಚ್. ಸಿದ್ಧವೀರಪ್ಪನವರು ಇಂದು ತಿಳಿಸಿದರು.

ರಾಷ್ಟ್ರೀಕರಣಕ್ಕೆ ಮುಂಚೆ ಮುಚ್ಚಲಾಗಿದ್ದ ನಂದಿದುರ್ಗ ಗಣಿಯಲ್ಲದೆ ಇತರ ಗಣಿಗಳಿಂದಲೂ ಯಂತ್ರಗಳನ್ನು ಹೊರಕ್ಕೆ ಸಾಗಿಸಲು ಗಣಿಗಳ ಆಡಳಿತವರ್ಗ ಪ್ರಯತ್ನ ನಡೆಸಿತ್ತೆಂದೂ ಅದನ್ನು ತಪ್ಪಿಸಲಾಯಿತೆಂದೂ ಪತ್ರಿಕಾಗೋಷ್ಠಿಯಲ್ಲಿ ಸಚಿವರು ತಿಳಿಸಿದರು.

ಸಂಗತ

ಮತದಾನ ಮಾರಾಟದ ವಸ್ತುವೇನು?

ಜನ ಆಮಿಷಗಳಿಗೆ ಬಲಿಯಾಗಿ ವೋಟು ಹಾಕಿದರೆ, ಅಧಿಕಾರ ಹಿಡಿದವರು ಐದು ವರ್ಷಗಳ ಕಾಲ ಸರ್ಕಾರಿ ಬೊಕ್ಕಸ ಲೂಟಿ ಹೊಡೆಯಲು ಪರವಾನಗಿ ಪಡೆಯುತ್ತಾರೆ

● ದೊಡ್ಡರಂಗೇಗೌಡ

ಯಾವುದೇ ರಾಷ್ಟ್ರವಿರಲಿ ಅಲ್ಲಿ ಪ್ರಜಾಪ್ರಭುತ್ವವಿದ್ದರೆ ಅದೊಂದು ದೊಡ್ಡ ಆದರ್ಶವಾಗುತ್ತದೆ. ಎಲ್ಲ ರೀತಿಯ ರಾಜಕೀಯ ಆಳ್ವಿಕೆಯಲ್ಲಿ ಇದ್ದುದರಲ್ಲಿ ಪ್ರಜಾಪ್ರಭುತ್ವವೇ ಮೇಲು. ಏಕೆಂದರೆ ಅಲ್ಲಿ ಪ್ರಜೆಗಳೇ ಪ್ರಭುಗಳು. ಪ್ರಜಾಪ್ರಭುತ್ವದಲ್ಲಿ ಬಹುಮತ ಸಾಬೀತಾಗಬೇಕು. ಬಹುತೇಕ ಜನರ ಅಭಿಪ್ರಾಯವೇ ನಿರೂಪಿತವಾಗುವುದರಿಂದ ಪ್ರಜಾಪ್ರಭುತ್ವಕ್ಕೆ ಶ್ರೇಷ್ಠತೆಯ ಪಟ್ಟ!

ಪ್ರಜಾಪ್ರಭುತ್ವವೆಂದರೆ ಪ್ರಜೆಗಳು ಪ್ರಜೆಗಳಿಂದ ಪ್ರಜೆಗಳಿಗಾಗಿ ನಿರ್ಮಾಣವಾಗುವ ರಾಜಕೀಯ ಆಡಳಿತ ವ್ಯವಸ್ಥೆ. ಆದ್ದರಿಂದಲೇ ಎಲ್ಲಕ್ಕೂ ಮಿಗಿಲು ಬಹುಮತ. ಜನರ ಪರವಾಗಿ ಜನಪ್ರತಿನಿಧಿಗಳು ಕೆಲಸ ಮಾಡುತ್ತಾರೆ. ಅವರು ಒಳ್ಳೆಯ ಕೆಲಸ ಮಾಡಲು ಜನಸಾಮಾನ್ಯರು ಅನುವು ಮಾಡಿಕೊಡಬೇಕು. ಅವರಿಗೆ ಒಳ್ಳೆಯ ಕೆಲಸ ಮಾಡಬೇಕು ಎಂಬ ಇರಾದೆ ಇರಬೇಕು. ಅವರ ಅಂತರಂಗದಲ್ಲಿ ಒಳ್ಳೆಯದನ್ನೇ ಮಾಡುವ ಇಚ್ಛಾಶಕ್ತಿಯೂ ಇರಬೇಕಾಗುತ್ತದೆ. ಅದಕ್ಕೆ ಒಳ್ಳೆಯ ಮನಸ್ಸಿನವರು ಆಗಿರಬೇಕಾಗುತ್ತದೆ. ಅವರಲ್ಲಿ ಸಂಸ್ಕೃತಿ ಇರಬೇಕಾಗುತ್ತದೆ, ಆದರ್ಶವೂ ಇರಬೇಕು. ಎಲ್ಲಕ್ಕೂ ಮಿಗಿಲಾಗಿ ಒಳ್ಳೆಯ ವ್ಯಕ್ತಿತ್ವದವರಾಗಿರಬೇಕಾಗುತ್ತದೆ. ಇದು ಬಹಳ ಮುಖ್ಯ.

ಪ್ರಜಾಪ್ರಭುತ್ವದಲ್ಲಿ ಒಳ್ಳೆಯ ವ್ಯಕ್ತಿಯಾಗಿರುವುದು ಅತ್ಯಂತ ಮುಖ್ಯ. ಅಂಥವರ ಆಯ್ಕೆ ಪ್ರಜೆಗಳ ನಿರ್ಧಾರವಾಗಬೇಕು. ಈಗ ಅಂಥ ಪರಿಸರವಿಲ್ಲ. ಚುನಾವಣೆಯೂ ವ್ಯಾಪಾರ ಆಗಿದೆ. ಒಳ್ಳೆಯವರೇ ಚುನಾವಣೆಗೆ ನಿಲ್ಲುತ್ತಾರೆ ಎಂಬ ಭರವಸೆ ಇಲ್ಲ. ಚುನಾವಣೆಗೆ ಸ್ಪರ್ಧಿಸಿದವರಲ್ಲಿ ಕಡಿಮೆ ಕೆಟ್ಟವನನ್ನು ಪ್ರಜೆಗಳು ಆರಿಸಬೇಕಾಗುತ್ತದೆ. ಇಲ್ಲ ಅಂದರೆ ಎಲ್ಲರನ್ನೂ ನಿರಾಕರಿಸಿ ಚುನಾವಣೆಗೆ ಬಹಿಷ್ಕಾರ ಹಾಕಬೇಕಾಗುತ್ತದೆ. ಈಗ ನಿರಾಕರಣ ಎಲ್ಲಿ ಬಂತು? ಎಲ್ಲವೂ ಸ್ವೀಕರಣ! ಏನೋ ನಂಜಣ್ಣ ಅಂದರೆ ಬಂದಷ್ಟೇ ಗುಂಜಣ್ಣ ಎಂಬ ಗಾದೆಯಂತೆ.

ಈ ಹೊತ್ತು ಭಾರತದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಹೆಸರನ್ನು ಕೆಡಿಸಿಕೊಂಡಿವೆ. ಎಲ್ಲರೂ ಮತದಾರರಿಗೆ ಆಮಿಷಗಳ ಒಡ್ಡುವವರೆ. ಆಮಿಷ ಒಡ್ಡಿದರೆ ಮತಗಳು ಗ್ಯಾರಂಟಿ ಎಂಬ ಒಂದು ರೀತಿಯ ನಂಬಿಕೆ!

ಕೆಲವರು ನೇರವಾಗಿ ಮನೆ ಮನೆಗೆ ದುಡ್ಡು ಹಂಚುತ್ತಾರೆ. ಇನ್ನು ಕೆಲವರು ದುಬಾರಿ ವಸ್ತುಗಳನ್ನು ಹಂಚಿ ಜನರ ಸಂಪ್ರೀತಿ ಸಂಪಾದಿಸುತ್ತಾರೆ. ಹಂಚುವವರೆಗೂ ಮಾನ ಮರ್ಯಾದೆ ಇಲ್ಲ, ರಾಜಕೀಯದವರು ಹಂಚಿದ್ದನ್ನು ಸ್ವೀಕರಿಸುವ ಮಹಾ ಮಹಾನುಭಾವರಿಗೂ ಸ್ವಲ್ಪವೂ ನಾಚಿಕೆ ಇಲ್ಲ.

‘ಅವನು ಅಧಿಕಾರದಲ್ಲಿದ್ದಾಗ ದುಡ್ಡು ಹೊಡೆದಿದ್ದಾನೆ, ಸಖತ್ ಸಂಪಾದನೆ ಮಾಡಿ ಸ್ವಂತ ಖಜಾನೆ ತುಂಬಿಕೊಂಡಿದ್ದಾನೆ, ಕೊಡಲಿ ಬಿಡು, ಯಾರಪ್ಪನ ದುಡ್ಡು? ಅದೂ ಪ್ರಜೆಗಳ ದುಡ್ಡೇ ತಾನೆ’ ಎಂಬ ಕುತರ್ಕ ಕೆಲವರಲ್ಲಿ. ಹೀಗಾಗಿ ಭ್ರಷ್ಟತೆಯ ಅನಿಷ್ಟ ಪದ್ಧತಿಗೆ ಎಲ್ಲರ ಅಂಕಿತ.

ಈ ಹೊತ್ತು ಭಾರತದಲ್ಲಿ ಜಾತಿ ಮುಖ್ಯವಾಗುತ್ತದೆ. ಜಾತ್ಯತೀತ ಎಂದು ಬಾಯಲ್ಲಿ ಹೇಳುತ್ತೇವೆ. ಆದರೆ ವೋಟ್ ಬ್ಯಾಂಕ್‌ಗಳು ಜಾತಿಯ ಮೇಲೆಯೇ ಅವಲಂಬಿತವಾಗಿವೆ. ಅವನು ನಮ್ಮ ಜಾತಿಯವನು, ಅವನಿಗೆ ವೋಟು ಹಾಕೋಣ, ಯಾವತ್ತಾದರೂ ಒಂದಿಷ್ಟಾದರೂ ಕೆಲಸಕ್ಕೆ ಬರುತ್ತಾನೆ, ಸಂಪೂರ್ಣ ಅಲ್ಲಗಳೆಯುವುದು ಬೇಡ ಎಂಬುದು ಜಾತಿವಾದಿಗಳ ಕುತರ್ಕ. ಅವರ ಲೆಕ್ಕಾಚಾರವು ಸರಿಯೇ. ಎಲ್ಲರೂ ಜಾತಿ ಜಾತಿ ಎನ್ನುವಾಗ ಎಲ್ಲೋ ಕೆಲವರು ಜಾತಿಗಳ ವಿರೋಧಿಸಿ ತತ್ವಗಳ ಎತ್ತಿ ಹಿಡಿದರೆ, ಆ ಒಳ್ಳೆಯವರೇ ಕೆಟ್ಟವರ ಕಂಗಳಲ್ಲಿ ಮೂರ್ಖರು ಎನಿಸಿಕೊಳ್ಳುತ್ತಾರೆ. ಅವನಿಗೆ ಇನ್ನೂ ಬದುಕೋ ಮಾರ್ಗ ಗೊತ್ತಿಲ್ಲ ಎಂದು ಹೀಯಾಳಿಸುತ್ತಾರೆ. ಹೀಗಾಗಿ ಎಲ್ಲೆಡೆ ಆಮಿಷಗಳೇ ತುಂಬಿ ತುಳುಕಿ ಮಾನವನ ದುರಾಸೆಗಳು ಹೆಡೆಯೆತ್ತಿ ‘ಮತದಾನ’ವೇ ತನ್ನ ಕಿಮ್ಮತ್ತು ಕಳೆದುಕೊಂಡಿದೆ.

ಜಾತಿ, ಧರ್ಮ, ಸ್ವಜನಪಕ್ಷಪಾತ, ಪಕ್ಷನಿಷ್ಠೆ ಈ ಎಲ್ಲವೂ ಸೇರಿ ಪ್ರಜೆ ಶುದ್ಧ ಅಂತಃಕರಣದಿಂದ ಯೋಚಿಸಿ ಮತ ನೀಡುವ ಕಾಲ ಈಗಿಲ್ಲ. ಇದೇ ವಿಪರ್ಯಾಸ. ಈ ಹೊತ್ತು ಚುನಾವಣೆಯೇ ಒಂದು ಅಣಕು ಪ್ರದರ್ಶನವಾಗಿದೆ. ಕೇವಲ ನಾಮ್‌ಕೆವಾಸ್ತೆ ಎಂಬಂತೆ. ಮತದಾನದ ಆಶಯವೇ ಮಣ್ಣಾಗಿದೆ. ಮೌಲ್ಯಪಾತದ ದಿನಗಳಲ್ಲಿ ಇದು ವಾಸ್ತವ ದುರಂತ. ಅಂತರಂಗದ ಅನ್ನಿಸಿಕೆಯ ಬದಿಗೆ ತಳ್ಳಿ ಲಾಭಕೋರ ಪ್ರವೃತ್ತಿ ಮೇಲುಗೈ ಪಡೆದು ನಿಜವಾದ ಮತದಾನ ಆಗುತ್ತಿಲ್ಲ. ಇದು ವಿಷಾದನೀಯ.

ರಾಜಕೀಯ ದಲ್ಲಾಳಿಗಳು, ಮಧ್ಯವರ್ತಿಗಳು, ಜಾತೀಯಪೀಡರು, ಧರ್ಮಗುರುಗಳು ಎಲ್ಲರೂ ಇಲ್ಲಿ ತಪ್ಪು ಹೆಜ್ಜೆ ಇರಿಸಿರುವುದರಿಂದ ‘ನೈಜ ಮತ ಪ್ರದರ್ಶನ’ ಸಾಧ್ಯವಾಗುತ್ತಿಲ್ಲ. ಇದೊಂದು ರೀತಿ ತೋರಾಣಿಕೆಯ ರಂಗನಾಟಕ!

ಮತಗಳು ಮಾರಾಟದ ಸರಕಾದದ್ದು ಪ್ರಜಾಪ್ರಭುತ್ವದ ಕ್ರೂರ ವಿಪರ್ಯಾಸ. ಜಾಗೃತನಾಗಬೇಕಿದೆ ಮತದಾರ. ಭ್ರಷ್ಟರಿಗೆ ಮತ ಹಾಕದೆ ಪ್ರಜಾಪ್ರಭುತ್ವ ಉಳಿಸಬೇಕಾಗಿದೆ. ಗಟ್ಟಿಯಾಗಬೇಕಾದರೆ ಪರಾಮರ್ಶೆ ನಡೆಯಬೇಕು. ಮೌಲ್ಯಮಾಪನ ಸರಿಯಾಗಿ ಆಗಿ ಅಂಥವರಿಗೇ ಮತ ನೀಡಿ ‘ಶುದ್ಧರು’ ಗೆದ್ದರೆ ಆಗ ಪ್ರಜಾಪ್ರಭುತ್ವದ ಗೆಲುವು. ನಿಜವಾದ ಉಳಿವು. ಇಲ್ಲವಾದರೆ ಎಲ್ಲವೂ ಹುಸಿ. ಪಡಪೋಸಿ ಚುನಾವಣೆ! ಕುತಂತ್ರಗಳ ಮೂಲಕ ಗೆದ್ದವರು ಅಧಿಕಾರ ಹಿಡಿದು ಇನ್ನೈದು ವರ್ಷಗಳ ಕಾಲ ಸರ್ಕಾರಿ ಬೊಕ್ಕಸ ಲೂಟಿ ಹೊಡೆಯಲು ಪರವಾನಗಿ ಪಡೆಯುತ್ತಾರೆ. ಆಮಿಷಗಳಿಗೆ ಬಲಿಯಾಗಿ ವೋಟು ಹಾಕಿದ ಜನ ಮೂಕಪ್ರೇಕ್ಷಕರಾಗುತ್ತಾರೆ. ಆದ್ದರಿಂದ ಮತ ಚಲಾಯಿಸುವ ಮುನ್ನ ವ್ಯಕ್ತಿಯ ವ್ಯಕ್ತಿತ್ವ ನೋಡಿ ಮತ ನೀಡಬೇಕು. ಪ್ರಜಾಪ್ರಭುತ್ವದ ಮೌಲ್ಯ ಕಾಪಾಡಬೇಕು.

ವಾಚಕರ ವಾಣಿ

ಸ್ತ್ರೀ ಎಂದರೆ ಅಷ್ಟೇ ಸಾಕೆ...?!

‘ಮನೆಗೆಲಸ: ಮಹಿಳೆಯರಿಗೇ ಅಧಿಕ’ ಎಂಬ ಸುದ್ದಿ (ಪ್ರ.ವಾ. ಫೆ. 13) ಕೆಲ ಅಧಿಕೃತ ಅಂಶಗಳನ್ನು ತಿಳಿಸಿತು. ದಿನನಿತ್ಯದ ಬದುಕಿನಲ್ಲಿ 15 ವರ್ಷದ ಬಾಲಕಿಯರಿಂದ ಹಿಡಿದು 60 ವರ್ಷದ ಮಹಿಳೆಯರು ದಿನದಲ್ಲಿ 7.2 ಗಂಟೆ ಕಾಲ ವೇತನರಹಿತ ಮನೆಗೆಲಸ ಮಾಡುತ್ತಾರೆ ಎಂಬುದನ್ನು ಅಹಮದಾಬಾದ್‌ನ ಪ್ರಾಧ್ಯಾಪಕಿಯೊಬ್ಬರು ಸಂಶೋಧನೆ ಮೂಲಕ ಕಂಡುಕೊಂಡಿರುವುದು ಹೆಮ್ಮೆಯ ಸಂಗತಿ. ಇದನ್ನು ಓದಿದ ನಂತರವಾದರೂ ಮನೆಗೆಲಸವನ್ನು ಹಂಚಿಕೊಳ್ಳಲು ಪುರುಷರು ಮನಸ್ಸು ಮಾಡಲಿ.

ಅದಕ್ಕೇ ಅಲ್ಲವೆ ಜಿ.ಎಸ್.ಶಿವರುದ್ರಪ್ಪ ಅವರ ಕವಿ ಹೃದಯ ಹೇಳಿದ್ದು, ‘ಆಕಾಶದ ನೀಲಿಯಲ್ಲಿ, ಚಂದ್ರ ತಾರೆ ತೊಟ್ಟಿಲಲ್ಲಿ, ಬೆಳಕನಿಟ್ಟು ತೂಗಿದಾಕೆ, ನಿನಗೆ ಬೇರೆ ಹೆಸರು ಬೇಕೆ, ಸ್ತ್ರೀ ಎಂದರೆ ಅಷ್ಟೇ ಸಾಕೆ’ ಎಂದು.

ಆರ್.ಶಿವರಾಂ, ಸಂಡೂರು

ಮಾದರಿ ನಡೆ, ಉತ್ತಮ ಆಶಯ

‘ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕುವೆಂಪು ಅವರ ಹೆಸರು ಇಡಲಾಗುವುದು’ ಎಂದು ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರು ಹೇಳಿರುವುದು ಸ್ವಾಗತಾರ್ಹ. ನಿಲ್ದಾಣಕ್ಕೆ ಪ್ರಸ್ತುತ ಯಡಿಯೂರಪ್ಪ ಅವರ ಹೆಸರಿಡಬೇಕೆಂಬ ಬೇಡಿಕೆ ಮುಂಚೂಣಿಯಲ್ಲಿರುವಾಗ ರಾಷ್ಟ್ರಕವಿಯ ಹೆಸರನ್ನು ಅವರು ಸೂಚಿಸಿರುವುದು ಉತ್ತಮ ಸ್ಪಂದನ. ಯಡಿಯೂರಪ್ಪ ಅವರ ದೃಷ್ಟಿ ಮತ್ತು ಆಲೋಚನೆ ಇಲ್ಲಿ ಅಭಿನಂದನೆಗೆ ಅರ್ಹ.

ಡಾ. ಜಿ.ಎಮ್.ಮಂಜುನಾಥ, ಬೆಂಗಳೂರು

ಕಾನೂನು ಮೀರಿದ ನೈತಿಕ ಪ್ರಶ್ನೆ

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಅವರನ್ನು ಆಂಧ್ರಪ್ರದೇಶದ ರಾಜ್ಯಪಾಲರನ್ನಾಗಿ ನೇಮಕ ಮಾಡಿರುವುದಕ್ಕೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ನಿವೃತ್ತ ನ್ಯಾಯಮೂರ್ತಿಗಳನ್ನು ರಾಜ್ಯಪಾಲರನ್ನಾಗಿ ಅಥವಾ ರಾಜ್ಯಸಭಾ ಸದಸ್ಯರನ್ನಾಗಿ ನೇಮಿಸುವ ಪರಿಪಾಟ ಹಿಂದಿನಿಂದಲೂ ನಡೆದುಬಂದಿದೆ. ಅದೀಗ ಅಬ್ದುಲ್ ನಜೀರ್ ಅವರವರೆಗೂ ಬಂದುನಿಂತಿದೆ. ನ್ಯಾಯಮೂರ್ತಿಗಳನ್ನು ಅವರ ನಿವೃತ್ತಿಯ ನಂತರ ಸಂವಿಧಾನಾತ್ಮಕ ಹುದ್ದೆಗಳಿಗೆ ನೇಮಿಸುವುದು ಕಾನೂನಿನ ಪ್ರಶ್ನೆಗಳನ್ನು ಮೀರಿ ನೈತಿಕ ಪ್ರಶ್ನೆಗಳನ್ನು ಸೃಷ್ಟಿಸುತ್ತದೆ. ನ್ಯಾಯಾಂಗದಂತಹ ಸರ್ವಶ್ರೇಷ್ಠ ವ್ಯವಸ್ಥೆಯಲ್ಲಿ ಕೆಲಸ ಮಾಡಿ ದೇಶದ ಸಮಸ್ತ ಕಾನೂನುಗಳ ಸಂವಿಧಾನಾತ್ಮಕತೆಯನ್ನು ಒರೆಗೆ ಹಚ್ಚುವ ಅಪರಿಮಿತ ಅಧಿಕಾರ ವ್ಯಾಪ್ತಿಯನ್ನು ಪಡೆದವರು ನ್ಯಾಯಮೂರ್ತಿಗಳು. ಅಂತಹವರು ನಿವೃತ್ತಿಯ ನಂತರ ಕಾರ್ಯಾಂಗದ ಅಂಗವಾಗಿ ಕೆಲಸ ಮಾಡಲು ಒಪ್ಪಲೇಬಾರದು. ಅದು ಅವರ ನೈತಿಕ ಅಧಃಪತನ ಎನ್ನುವುದರಲ್ಲಿ ಸಂದೇಹವಿಲ್ಲ. ಅಂತಹ ನ್ಯಾಯಮೂರ್ತಿಗಳು ಎಷ್ಟೇ ಪ್ರಾಮಾಣಿಕರಾಗಿದ್ದರೂ ಅವರು ಕೊಟ್ಟಿದ್ದ ತೀರ್ಪುಗಳನ್ನು ಜನ ಅನುಮಾನದಿಂದಲೇ ನೋಡುತ್ತಾರಲ್ಲದೆ ಸಾಮಾಜಿಕವಾಗಿ ಅವರ ವಿಶ್ವಾಸಾರ್ಹತೆ ಟೀಕೆಗೆ ಒಳಗಾಗುತ್ತದೆ. ಅದಕ್ಕೆ ಅವಕಾಶ ಕಲ್ಪಿಸುವಂಥ ಕೆಲಸವನ್ನು ಸರ್ಕಾರ ಮಾಡದಿರುವುದು ಪ್ರಜಾಪ್ರಭುತ್ವದ ಒಳಿತಿನ ದೃಷ್ಟಿಯಿಂದ ಒಳ್ಳೆಯದು.

ಮೋದೂರು ಮಹೇಶಾರಾಧ್ಯ, ಹುಣಸೂರು

ಮೌಲ್ಯಾಂಕನ ಪರೀಕ್ಷೆ: ಗೊಂದಲ ಬಗೆಹರಿಯಲಿ

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಐದನೇ ತರಗತಿಯ ಮಕ್ಕಳಿಗೆ ಮೌಲ್ಯಾಂಕನ ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿ, ಪರೀಕ್ಷಾ ದಿನಾಂಕವನ್ನು ನಿಗದಿಪಡಿಸಿರುವುದು ಸ್ವಾಗತಾರ್ಹ ಕ್ರಮ. ಆದರೆ ಪರೀಕ್ಷೆಗೆ ಇರುವ ಪಠ್ಯದ ಕುರಿತು ಗೊಂದಲಗಳನ್ನು ಇಲಾಖೆ ಸರಿಯಾಗಿ ಬಗೆಹರಿಸುತ್ತಿಲ್ಲ. ಕಲಿಕಾ ಚೇತರಿಕೆಗೆ ಸಂಬಂಧಿಸಿದಂತೆ ಅನ್ವಯಾತ್ಮಕ ಮಾದರಿಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ ಎಂದು ಒಮ್ಮೆ ಹೇಳಿದರೆ, ಪಠ್ಯಾಧಾರಿತ ಮಾದರಿಯ ಪರೀಕ್ಷೆ ನಡೆಸಲಾಗುತ್ತದೆ ಎಂದು ಇನ್ನೊಮ್ಮೆ ಹೇಳಲಾಗುತ್ತಿದೆ. ಇಲಾಖೆ ಪ್ರಕಟಿಸುತ್ತಿರುವ ಮಾದರಿ ಪ್ರಶ್ನೆಪತ್ರಿಕೆಗಳೂ ಹೀಗೆ ಗೊಂದಲವನ್ನೇ ಮೂಡಿಸುತ್ತಿವೆ. ಆದ್ದರಿಂದ ಇಲಾಖೆಯು ಪರೀಕ್ಷೆಯ ವಿಧಾನ ಮತ್ತು ಪಠ್ಯಕ್ರಮದ ಬಗ್ಗೆ ಸರಿಯಾದ ಮಾಹಿತಿ ನೀಡಿದರೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಿ ನಡೆಸಲು ಸಹಾಯಕವಾಗುತ್ತದೆ.

ಸುವರ್ಣ ಸಿ.ಡಿ., ತರೀಕೆರೆ

ಮತದಾನಕ್ಕೆ ಸೀಮಿತ ಉದ್ದೇಶ ತರವಲ್ಲ

ಲಿಂಗಾಯತ ‘ಸ್ವತಂತ್ರ ಧರ್ಮ’ ಬೆಂಬಲಿಸುವ ಪಕ್ಷಕ್ಕೆ ಮುಂಬರುವ ಚುನಾವಣೆಯಲ್ಲಿ ಮತ ಹಾಕುವುದಾಗಿ ಅಖಿಲ ಭಾರತ ಲಿಂಗಾಯತ ಸಮನ್ವಯ ಸಮಿತಿಯ ಗೌರವಾಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ ಹೇಳಿರುವುದು ವರದಿಯಾಗಿದೆ (ಪ್ರ.ವಾ., ಫೆ. 12). ಒಂದು ಪಕ್ಷದ ನೇತೃತ್ವದ ಸರ್ಕಾರ, ಅದರ ಆಡಳಿತ ಯಾವುದೋ ಒಂದು ಧರ್ಮಕ್ಕೆ, ಒಂದು ಭಾಷೆಗೆ, ಒಂದು ಪ್ರದೇಶಕ್ಕೆ, ಪಂಥ, ಪಂಗಡಗಳಿಗೆ ಸೀಮಿತವಾಗಿರುವುದಿಲ್ಲ, ಸೀಮಿತವಾಗಿರಬಾರದು.

ಪಕ್ಷದ ಸಾಮರ್ಥ್ಯವನ್ನು ಒರೆಗೆ ಹಚ್ಚಿ ರಾಜ್ಯದ ಪ್ರಜೆಗಳು ಮತ ಹಾಕಿ ಅಂಥ ಪಕ್ಷದ ಅಭ್ಯರ್ಥಿಗಳನ್ನು ಚುನಾಯಿಸಬೇಕಾಗಿದೆ. ಯಾವ ಪಕ್ಷ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಸಮರ್ಥವಾಗಬಲ್ಲದೋ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸಬಲ್ಲದೋ ಲಿಂಗ, ಜಾತಿ, ಧರ್ಮ, ಭಾಷೆ, ಪಂಥ, ಪಂಗಡಗಳ ತಾರತಮ್ಯವಿಲ್ಲದೆ ಎಲ್ಲರನ್ನೂ ಸಮಾನತೆಯಿಂದ ನೋಡಬಲ್ಲದೋ ಬಡತನ ನಿರ್ಮೂಲನೆ ಮಾಡುವ ಮತ್ತು ಬಡವ, ಶ್ರೀಮಂತರ ನಡುವಿನ ಅಂತರವನ್ನು ಕಡಿಮೆ ಮಾಡಬಲ್ಲದೋ ಕೃಷಿಕರು, ಕೃಷಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಸಫಾಯಿ ಕರ್ಮಚಾರಿಗಳು, ಹಿಂದುಳಿದವರು, ದಲಿತರು ಹಾಗೂ ಸಮಾಜದ ಕಟ್ಟಕಡೆಯ ಪ್ರಜೆಗಳ ಜೀವನಮಟ್ಟ ಸುಧಾರಿಸಲು ಯೋಜನೆಗಳನ್ನು ಹೊಂದಿದೆಯೋ ಲಂಚ, ಸ್ವಜನಪಕ್ಷಪಾತವನ್ನು ತಡೆಯಲು ಸಮರ್ಥವಾಗಿದೆಯೋ ಅಂಥ ಪಕ್ಷವನ್ನು ಚುನಾವಣೆಯಲ್ಲಿ ಮತ ಹಾಕಿ ಗೆಲ್ಲಿಸುವುದು ಪ್ರಜೆಗಳ ಆದ್ಯ ಕರ್ತವ್ಯವೇ ವಿನಾ ಅದು ಯಾವುದೋ ಒಂದು ಉದ್ದೇಶಕ್ಕೆ ಸೀಮಿತವಾಗಿರಬಾರದು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತ್ರಿಪುರಾದಲ್ಲಿ 16ರಂದು, ನಾಗಾಲ್ಯಾಂಡ್ ಮತ್ತು ಮೇಘಾಲಯದಲ್ಲಿ 27ರಂದು ವಿಧಾನಸಭೆಗಳಿಗೆ ಮತದಾನ ನಡೆಯಲಿದೆ. ಮಾರ್ಚ್ 2ರಂದು ಫಲಿತಾಂಶ ಪ್ರಕಟವಾಗಲಿದೆ. ತ್ರಿಪುರಾ ಮತ್ತು ಅಸ್ಸಾಂನಲ್ಲಿ ಬಿಟ್ಟರೆ ಈಶಾನ್ಯದ ಇತರ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಪ್ರಾಬಲ್ಯ. ಸಣ್ಣ ಸಣ್ಣ ಈ ರಾಜ್ಯಗಳ ಚುನಾವಣಾ ಕಣವು ಬಹಳ ಸ್ವಾರಸ್ಯಕರ. ಮೂರು ರಾಜ್ಯಗಳಲ್ಲಿ ಹಲವು ಪಕ್ಷಗಳ ನಡುವಣ ಜಿದ್ದಾಜಿದ್ದಿಯ ಕುರಿತಂತೆ ಒಂದು ನೋಟ ಇಲ್ಲಿದೆ...

ಅಗರ್ತಲಾದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಸೇರಿದ್ದ ಜನರು ಪಿಟಿಐ ಚಿತ್ರ

ಈಶಾನ್ಯ ರಾಜ್ಯಗಳಲ್ಲಿ ಚುನಾವಣಾ ರಂಗು

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಟಿಎಂಸಿ ಪರವಾಗಿ ಮೇಘಾಲಯದ ಗಾರೋ ಹಿಲ್‌ನಲ್ಲಿ ಇತ್ತೀಚೆಗೆ ಪ್ರಚಾರ ನಡೆಸಿದರು

ಮೇಘಾಲಯ: ಪುಟ್ಟ ರಾಜ್ಯದಲ್ಲಿ ಬಹುಕೋನ ಸ್ಪರ್ಧೆ

• ಅಮೃತ್‌ಕಿರಣ್ ಬಿ.ಎಂ.

ಬುಡಕಟ್ಟು ಹಾಗೂ ಕ್ರೈಸ್ತ ಸಮುದಾಯದ ಪ್ರಾಬಲ್ಯವಿರುವ ಈಶಾನ್ಯದ ಪುಟ್ಟ ರಾಜ್ಯ ಮೇಘಾಲಯದಲ್ಲಿ ಇದೇ 27ರಂದು ವಿಧಾನಸಭೆಗೆ ಮತದಾನ ನಡೆಯಲಿದೆ. ಕಳೆದ ಬಾರಿ ಚುನಾವಣೋತ್ತರ ಮೈತ್ರಿ ಮಾಡಿಕೊಂಡು ಸರ್ಕಾರವನ್ನು ಬೆಂಬಲಿಸಿದ್ದ ಹಲವು ಪಕ್ಷಗಳು ಈ ಬಾರಿ ಪರಸ್ಪರ ಎದುರಾಳಿಗಳಾಗಿ ಕಣಕ್ಕಿಳಿದಿರುವುದು ಇಲ್ಲಿಯ ವಿಶೇಷ.

ಕಳೆದ ಚುನಾವಣೆಯವರೆಗೂ ಕಾಂಗ್ರೆಸ್ ಇಲ್ಲಿ ಅತಿದೊಡ್ಡ (21 ಸ್ಥಾನ) ಪಕ್ಷವಾಗಿತ್ತು. ಆದರೆ, ಸುದೀರ್ಘ ಕಾಲದ ಕಾಂಗ್ರೆಸ್ ಆಡಳಿತ 2018ರ ಚುನಾವಣೆಯಲ್ಲಿ ಕೊನೆಗೊಂಡಿತು. ಎನ್‌ಪಿಪಿ ಮುಖ್ಯಸ್ಥ ಕಾನ್ರಾಡ್ ಕೆ. ಸಂಗ್ಮಾ ಅವರು ಸಣ್ಣಪುಟ್ಟ ಪಕ್ಷಗಳನ್ನು ಒಟ್ಟುಗೂಡಿಸಿ ಮೇಘಾಲಯ ಡೆಮಾಕ್ರಟಿಕ್ ಅಲಯನ್ಸ್ (ಎಂಡಿಎ) ನೇತೃತ್ವದಲ್ಲಿ ಸರ್ಕಾರ ರಚಿಸಿದರು. ಬಿಜೆಪಿ, ಈ ಮೈತ್ರಿಕೂಟದ ಕಿರಿಯ ಪಾಲುದಾರ ಪಕ್ಷ. ಯುಡಿಎಫ್, ಪಿಡಿಎಫ್, ಎಚ್‌ಎಸ್‌ಪಿಡಿಪಿ ಶಾಸಕರು ಹಾಗೂ ಪಕ್ಷೇತರರು ಸಂಗ್ಮಾ ಸರ್ಕಾರವನ್ನು ಬೆಂಬಲಿಸಿದ್ದರು.

ಆದರೆ ಈ ಐದು ವರ್ಷಗಳ ಅವಧಿಯಲ್ಲಿ ಸರ್ಕಾರದ ಪಾಲುದಾರ ಪಕ್ಷಗಳ ನಡುವಿನ ಬಂಧ ಗಟ್ಟಿಯಾಗುವ ಬದಲು, ಇನ್ನಷ್ಟು ಸಡಿಲಗೊಂಡಿದೆ. ರಾಜಕೀಯ ಸಮೀಕರಣವು, 2018ರ ಚುನಾವಣೆಗೂ ಮುನ್ನ ಇದ್ದ ಹಂತಕ್ಕೆ ಬಂದಿದೆ. ಕಳೆದ ಬಾರಿ ಈ ಎಲ್ಲ ಪಕ್ಷಗಳೂ ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ಈ ಬಾರಿಯೂ ಅದೇ ನಿರ್ಧಾರಕ್ಕೆ ಬಂದಿವೆ. ಒಂದೇ ಮೈತ್ರಿಕೂಟದಲ್ಲಿದ್ದ ಪಕ್ಷಗಳ ನಡುವಿನ ಸ್ಪರ್ಧೆಯಿಂದಾಗಿ ಚುನಾವಣೆ ಕುತೂಹಲ ಕೆರಳಿಸಿದೆ.

ಕಳೆದ ಬಾರಿ ಅತಿಹೆಚ್ಚು (ಶೇ 29ರಷ್ಟು) ಮತಗಳನ್ನು ಗಳಿಸಿಯೂ ಪ್ರತಿಪಕ್ಷದಲ್ಲಿ ಕುಳಿತುಕೊಂಡಿದ್ದ ಕಾಂಗ್ರೆಸ್ ಪ್ರಾಬಲ್ಯ ಈ ಬಾರಿ ಇನ್ನಷ್ಟು ಕುಸಿದಿದೆ. ಪ್ರಮುಖ ನಾಯಕ ಮುಕುಲ್ ಸಂಗ್ಮಾ ನೇತೃತ್ವದಲ್ಲಿ 11 ಶಾಸಕರು ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಕಳೆದ ವರ್ಷ ವಲಸೆ ಹೋದರು. ಇದು ಪಕ್ಷಕ್ಕೆ ಬಲವಾದ ಪೆಟ್ಟು ನೀಡಿತು. ಈಗ ರಾಜ್ಯದಲ್ಲಿ ಪ್ರಬಲ ಪ್ರತಿಪಕ್ಷ ಎಂದು ಟಿಎಂಸಿಯನ್ನು ಗುರುತಿಸಲಾಗುತ್ತಿದೆ. ಚುನಾವಣೆ ಘೋಷಣೆಗೂ ಮುನ್ನ ಈ ಪುಟ್ಟ ರಾಜ್ಯದಲ್ಲಿ ಪಕ್ಷಾಂತರದ ಪರ್ವವೇ ನಡೆಯಿತು. 18 ಶಾಸಕರು ಪಕ್ಷಾಂತರ ಮಾಡಿ ಅಚ್ಚರಿ ಮೂಡಿಸಿದರು.

ಬುಡಕಟ್ಟು ರಾಜ್ಯದಲ್ಲಿ ಅಷ್ಟಾಗಿ ನೆಲೆ ಕಂಡುಕೊಳ್ಳದ ಬಿಜೆಪಿ ಕಳೆದ ಚುನಾವಣೆಯಲ್ಲಿ ಶೇ 9.6ರಷ್ಟು ಮತ ಗಳಿಸಿತ್ತು. ಪಕ್ಷದಿಂದ ಆಯ್ಕೆಯಾಗಿದ್ದ ಇಬ್ಬರು ಶಾಸಕರು, ಸ್ಥಳೀಯವಾಗಿ ಪ್ರಬಲರು. ಬಿಜೆಪಿಗೆ ಬರುವ ಮುನ್ನ, ಇತರ ಪಕ್ಷಗಳ ಟಿಕೆಟ್‌ನಡಿಯೂ ಅವರು ಗೆದ್ದ ಇತಿಹಾಸವಿದೆ. ಎಲ್ಲ 60 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಬಿಜೆಪಿ, ಮೇಘಾಲಯದಲ್ಲಿ ಈ ಬಾರಿ ತನ್ನ ಮತ ಪ್ರಮಾಣವನ್ನು ಎರಡಂಕಿಗೆ ಹೆಚ್ಚಿಸಿಕೊಳ್ಳುವ ಸನ್ನಾಹದಲ್ಲಿದೆ. 10ರಿಂದ 15 ಕ್ಷೇತ್ರಗಳಲ್ಲಿ ಗೆಲ್ಲುವ ಕನಸು ಕಾಣುತ್ತಿದೆ.

ಗಾರೋ ಜಿಲ್ಲಾ ಸ್ವಾಯತ್ತ ಪ್ರದೇಶದ ನಾಯಕ ಬರ್ನಾರ್ಡ್ ಮರಾಕ್ ಅವರು ಈ ಬಾರಿ ಬಿಜೆಪಿಯ ಪ್ರಬಲ ನಾಯಕರಾಗಿ ಹೊರಹೊಮ್ಮಿದ್ದಾರೆ. ಇವರ ಮೇಲೆ ಎನ್‌ಪಿಪಿ ಸರ್ಕಾರವು ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಿತ್ತು. ಈ ವಿದ್ಯಮಾನವು ಬಿಜೆಪಿ–ಎನ್‌ಪಿಪಿ ನಡುವಿನ ಸಂಬಂಧದಲ್ಲಿ ಬಿರುಕು ಮೂಡಿಸಿತ್ತು. ಮರಾಕ್ ಅವರನ್ನು ಎದುರಾಳಿಯಾಗಿ ಬಿಜೆಪಿ ಕಣಕ್ಕಿಳಿಸಿದ್ದು, ಸಂಗ್ಮಾ ಅವರನ್ನು ಹಣಿಯಲು ಮುಂದಾಗಿದೆ. ಎನ್‌ಪಿಪಿ, ಬಿಜೆಪಿ, ಟಿಎಂಸಿ, ಕಾಂಗ್ರೆಸ್ ಹಾಗೂ ಸಣ್ಣಪುಟ್ಟ ಪಕ್ಷಗಳ ಪ್ರತ್ಯೇಕ ಸ್ಪರ್ಧೆಯಿಂದಾಗಿ ರಾಜ್ಯದಲ್ಲಿ ಬಹುಕೋನ ಸ್ಪರ್ಧೆ ಏರ್ಪಟ್ಟಿದೆ.

ಕಾನ್ರಾಡ್ ಕೆ. ಸಂಗ್ಮಾ



ತ್ರಿಪುರಾ: ಊಹೆಗೆ ನಿಲುಕದು ಮತದಾರನ ಮನ

• ಹಮೀದ್ ಕೆ.

ಸದ್ಯವೇ ವಿಧಾನಸಭಾ ಚುನಾವಣೆ ನಡೆಯಲಿರುವ ಈಶಾನ್ಯ ರಾಜ್ಯಗಳಾದ ತ್ರಿಪುರಾ, ಮೇಘಾಲಯ ಮತ್ತು ನಾಗಾಲ್ಯಾಂಡ್ ಪೈಕಿ ಅತಿ ಹೆಚ್ಚು ಜಿದ್ದಾಜಿದ್ದಿಯ ಹೋರಾಟ ಇರುವುದು ತ್ರಿಪುರಾದಲ್ಲಿ. ಇಲ್ಲಿನ ವಿಧಾನಸಭೆಗೆ 2018ರಲ್ಲಿ ನಡೆದ ಚುನಾವಣೆಯು ತ್ರಿಪುರಾ ರಾಜಕಾರಣದಲ್ಲಿ ಹಲವು ಪಲ್ಲಟಗಳಿಗೆ ಕಾರಣವಾಯಿತು. ಈಶಾನ್ಯ ರಾಜ್ಯವೊಂದರಲ್ಲಿ ಬಿಜೆಪಿ ಅದೇ ಮೊದಲ ಬಾರಿಗೆ ಸ್ವಂತ ಬಲದಲ್ಲಿ ಅಧಿಕಾರ ಹಿಡಿಯುವ ಮಟ್ಟಕ್ಕೆ ಬೆಳೆಯಿತು. ಚುನಾವಣೆ ನಡೆದ 59 ಕ್ಷೇತ್ರಗಳಲ್ಲಿ (ಒಟ್ಟು ಕ್ಷೇತ್ರಗಳು 60) 35ರಲ್ಲಿ ಬಿಜೆಪಿ ಗೆಲುವು ದಾಖಲಿಸಿತು. ಬಿಜೆಪಿಯ ಮಿತ್ರಪಕ್ಷ ಐಪಿಎಫ್‌ಟಿ ಎಂಟು ಕ್ಷೇತ್ರಗಳನ್ನು ಗೆದ್ದಿತು. ಬಿಜೆಪಿ ಮತ್ತು ಐಪಿಎಫ್‌ಟಿ ಜೊತೆಯಾಗಿ ಸರ್ಕಾರ ರಚಿಸಿದವು.

2018ರ ಚುನಾವಣೆಯೊಂದಿಗೆ ಸಿಪಿಎಂನ ಸತತ 20 ವರ್ಷಗಳ ಆಳ್ವಿಕೆ ಕೊನೆಗೊಂಡಿತು. ಆದರೆ, ಪ್ರಬಲ ಪ್ರತಿಪಕ್ಷವಾಗಿ ಸಿಪಿಎಂ ಅಲ್ಲಿ ಉಳಿದುಕೊಂಡಿದೆ. ಬಿಜೆಪಿಯ ಲಾಭ, ಕಾಂಗ್ರೆಸ್‌ನ ನಷ್ಟವಾಗಿ ಪರಿಣಮಿಸಿತು. ಒಂದೂ ಸ್ಥಾನ ಗೆಲ್ಲಲು ಸಾಧ್ಯವಾಗದೆ ರಾಜ್ಯದಲ್ಲಿ ಅಸ್ತಿತ್ವವನ್ನೇ ಕಳೆದುಕೊಳ್ಳುವ ಮಟ್ಟಕ್ಕೆ ಆ ಪಕ್ಷ ಬಂದಿದೆ. ಆ ಪಕ್ಷಕ್ಕೆ ಸಿಕ್ಕ ಮತಪ್ರಮಾಣ ಶೇ 1.79ರಷ್ಟು ಮಾತ್ರ (2013ರ ಚುನಾವಣೆಯಲ್ಲಿ ಶೇ 36.53). ಕಾಂಗ್ರೆಸ್‌ನ ಸ್ಥಿತಿ ಹೇಗಿದೆ ಎಂಬುದನ್ನು ಈ ಮತಪ್ರಮಾಣವೇ ಹೇಳುತ್ತದೆ.

ಈ ಬಾರಿಯ ಚುನಾವಣಾ ಕಣದ ಚಿತ್ರಣ ಬಹಳ ಭಿನ್ನವಾಗಿಯೇ ಇದೆ. ಗೆಲುವು ಸರಾಗ ಎಂಬ ಸ್ಥಿತಿಯಲ್ಲಿ ಬಿಜೆಪಿ ಇಲ್ಲ. ಪುಟಿದೇಳುವುದು ಅಸಾಧ್ಯವೇನಲ್ಲ ಎಂಬ ಸ್ಥಿತಿಯಲ್ಲಿ ಸಿಪಿಎಂ ಇದೆ. ಒಟ್ಟು ಚುನಾವಣಾ ಕಣ ಹೆಚ್ಚು ಸಂಕೀರ್ಣವಾಗಿದೆ.

ಕಳೆದ ಬಾರಿ ಎಂಟು ಕ್ಷೇತ್ರಗಳನ್ನು ಗೆದ್ದ ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರಾ (ಐಪಿಎಫ್‌ಟಿ) ಈಗ ತೀರಾ ದುರ್ಬಲವಾಗಿದೆ. ಪ್ರಮುಖ ನಾಯಕ ಎನ್.ಸಿ. ದೇಬಬರ್ಮಾ ಮೃತರಾಗಿದ್ದಾರೆ. ಬುಡಕಟ್ಟು ಜನರನ್ನೇ ನಂಬಿಕೊಂಡಿರುವ ಈ ಪಕ್ಷಕ್ಕೆ ಬಲವಾದ ಎದುರಾಳಿಯಾಗಿ ಪ್ರದ್ಯೋತ್ ದೇಬಬರ್ಮಾ ಅವರ ಟಿಪ್ರ ಮೊಥಾ ಮೂಡಿ ಬಂದಿದೆ. ಬುಡಕಟ್ಟು ಜನರಿಗೆ ಗ್ರೇಟರ್ ತ್ರಿಪುರಾ ಎಂಬ ಪ್ರತ್ಯೇಕ ರಾಜ್ಯವೇ ಬೇಕು ಎಂಬ ಗಟ್ಟಿ ಬೇಡಿಕೆಯೊಂದಿಗೆ ಟಿಪ್ರ ಮೊಥಾ ಕಣಕ್ಕೆ ಇಳಿದಿದೆ. ಕಳೆದ ಬಾರಿ ಐಪಿಎಫ್‌ಟಿ ಇದೇ ವಿಚಾರ ಮುಂದಿಟ್ಟು ಚುನಾವಣಾ ಕಣ ಪ್ರವೇಶಿಸಿತ್ತು. ಚುನಾವಣೆಯ ಬಳಿಕ ಈ ಬೇಡಿಕೆಯನ್ನು ಈಡೇರಿಸಿಕೊಳ್ಳುವುದು ಐಪಿಎಫ್‌ಟಿಗೆ ಸಾಧ್ಯವಾಗಲಿಲ್ಲ. ಹಾಗಾಗಿ, ಐಪಿಎಫ್‌ಟಿಗೆ ಬುಡಕಟ್ಟು ಜನರ ಬೆಂಬಲ ದೊರೆಯುವುದು ಅನುಮಾನ. ಈ ಸಮುದಾಯಗಳು ಒಟ್ಟಾಗಿ ಟಿಪ್ರ ಮೊಥಾ ಬೆಂಬಲಕ್ಕೆ ನಿಲ್ಲುವ ಸಾಧ್ಯತೆಯೇ ಅಧಿಕ. ತ್ರಿಪುರಾ ಬುಡಕಟ್ಟು ಪ್ರದೇಶ ಸ್ವಾಯತ್ತ ಜಿಲ್ಲಾ ಮಂಡಳಿಗೆ ನಡೆದ ಚುನಾವಣೆಯಲ್ಲಿ ಸಿಕ್ಕ ಗೆಲುವು ಪ್ರದ್ಯೋತ್ ಅವರ ಶಕ್ತಿ ಏನು ಎಂಬುದರ ಸೂಚನೆ.

ರಾಜ್ಯ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ, ತ್ರಿಪುರಾದ ಈ ಹಿಂದಿನ ರಾಜ ಕುಟುಂಬದ ಪ್ರದ್ಯೋತ್ ಅವರು ಜನರ ಮನಗೆಲ್ಲಬಲ್ಲ ವರ್ಚಸ್ಸು ಹೊಂದಿರುವ ನಾಯಕ. ಒಳ್ಳೆಯ ಮಾತುಗಾರ.

ಪ್ರದ್ಯೋತ್ ದೇಬಬರ್ಮಾ, ಮಾಣಿಕ್ ಸಹಾ

ಬಿಜೆಪಿ, ಸಿಪಿಎಂ ಮತ್ತು ಕಾಂಗ್ರೆಸ್ ಪಕ್ಷ ಟಿಪ್ರ ಮೊಥಾ ಜೊತೆಗೆ ಚುನಾವಣಾಪೂರ್ವ ಹೊಂದಾಣಿಕೆಗೆ ತುದಿಗಾಲಲ್ಲಿ ನಿಂತಿದ್ದವು. ಬಿಜೆಪಿ ಹೈಕಮಾಂಡ್ ಜೊತೆಗೆ ಹಲವು ಸುತ್ತಿನ ಮಾತುಕತೆಯನ್ನೂ ಪ್ರದ್ಯೋತ್ ನಡೆಸಿದ್ದಾರೆ. ಆದರೆ, ಖಚಿತ ಭರವಸೆ ಸಿಗದ ಕಾರಣ ಅವರು ಮೈತ್ರಿಗೆ ಮುಂದಾಗಲಿಲ್ಲ. ರಾಷ್ಟ್ರೀಯ ಪಕ್ಷಗಳ ಜೊತೆಗೆ ಗುರುತಿಸಿಕೊಂಡು ಬುಡಕಟ್ಟು ವಿರೋಧಿ ಎಂಬ ಹಣೆಪಟ್ಟಿ ಕಟ್ಟಿಕೊಳ್ಳಬಾರದು ಎಂಬುದರನ್ನು ಅರಿತಿರುವ ಚತುರ ರಾಜಕಾರಣಿ ಅವರು. ಸ್ವತಃ ಕಿಂಗ್ ಆಗದೇ ಇದ್ದರೂ ಕಿಂಗ್‌ಮೇಕರ್ ಆಗುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ.

ಬಿಜೆಪಿಯ ಸ್ಥಿತಿ ಸದೃಢವೇನೂ ಅಲ್ಲ. ಏಕೆಂದರೆ, 2018ರಲ್ಲಿ ಬಿಪ್ಲಬ್ ದೇಬ್ ಅವರನ್ನು ಮುಖ್ಯಮಂತ್ರಿ ಮಾಡಲಾಗಿತ್ತು. ಅವರಿಗೆ ಅಂತಹ ಜನಪ್ರಿಯತೆ ಇಲ್ಲ ಎಂಬುದನ್ನು ಅರಿತ ಪಕ್ಷವು ಕಳೆದ ವರ್ಷ ಅವರ ಸ್ಥಾನಕ್ಕೆ ಮಾಣಿಕ್ ಸಹಾ ಅವರನ್ನು ತಂದಿತು. ಹಾಗಾಗಿ, ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿನಿಲ್ಲಲೇಬೇಕಿರುವ ಸ್ಥಿತಿ ಇದೆ. ಪೌರತ್ವ (ತಿದ್ದುಪಡಿ) ಕಾಯ್ದೆ, ರಾಷ್ಟ್ರೀಯ ಪೌರತ್ವ ನೋಂದಣಿಯಂತಹ ವಿಚಾರಗಳು ಬಿಜೆಪಿಗೆ ಹಿನ್ನಡೆ ಉಂಟು ಮಾಡಬಹುದು. ಸಹಾ ಅವರು ಮುಖ್ಯಮಂತ್ರಿಯಾದ ಮೇಲೆ ನಾಲ್ಕು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಮೂರರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ ಎಂಬುದು ಆ ಪಕ್ಷಕ್ಕೆ ಇರುವ ಬಹುದೊಡ್ಡ ಆಶಾಕಿರಣ.

ತಳಮಟ್ಟದಲ್ಲಿ ಕಾರ್ಯಕರ್ತರನ್ನು ಹೊಂದಿರುವ ಸಿಪಿಎಂ, ಈ ಬಾರಿ ಕಾಂಗ್ರೆಸ್ ಜೊತೆಗೆ ಮೈತ್ರಿ ಮಾಡಿಕೊಂಡಿದೆ. ಕಳೆ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಶೇ 43.59ರಷ್ಟು ಮತ ಸಿಕ್ಕಿದೆ. ಸಿಪಿಎಂ ಶೇ 42.22ರಷ್ಟು ಮತ ಪಡೆದಿದೆ. ಬಿಜೆಪಿ ಮತ್ತು ಸಿಪಿಎಂ ಪಡೆದ ಸ್ಥಾನಗಳಲ್ಲಿ ದೊಡ್ಡ ಅಂತರ ಇದ್ದರೂ ಮತ ಪ್ರಮಾಣದ ಅಂತರ ಶೇ 1.33ರಷ್ಟು ಮಾತ್ರ. ಕಾಂಗ್ರೆಸ್‌ಗೆ ಕಳೆದ ಬಾರಿ ಶೇ 1.79ರಷ್ಟು ಮತ ಸಿಕ್ಕಿತ್ತು. ಹಲವು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿನ ಅಂತರ ಬಹಳ ಕಡಿಮೆ ಇತ್ತು. ಈ ಎಲ್ಲ ಅಂಶಗಳು ಸಿಪಿಎಂಗೆ ಅನುಕೂಲಕರವಾಗಿದೆ.

ನಾಗಾಲ್ಯಾಂಡ್: ಸರಳವಲ್ಲ ಚುನಾವಣಾ ಕಣ

• ಜಯಸಿಂಹ ಆರ್.

ನಾಗಾಲ್ಯಾಂಡ್ ವಿಧಾನಸಭೆಯ 60 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಆಡಳಿತಾರೂಢ ಎನ್‌ಡಿಪಿಪಿ ಮತ್ತು ಬಿಜೆಪಿ ಮೈತ್ರಿಕೂಟವು ಕ್ರಮವಾಗಿ 40 ಮತ್ತು 20 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿವೆ. ಪ್ರಮುಖ ವಿರೋಧ ಪಕ್ಷವಾಗಿದ್ದ ಎನ್‌ಪಿಎಫ್ ಸಹ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಇದೇ 27ಕ್ಕೆ ಮತದಾನ ನಡೆದು, ಮಾರ್ಚ್ 3ರಂದು ಫಲಿತಾಂಶ ಪ್ರಕಟವಾಗಲಿದೆ. ಮೇಲ್ನೋಟಕ್ಕೆ ಕಾಣುತ್ತಿರುವಂತೆ ನಾಗಾಲ್ಯಾಂಡ್‌ನ ಚುನಾವಣಾ ಕಣ ಸರಳವಾಗಿಲ್ಲ. ತೀರಾ ಸಂಕೀರ್ಣವಾಗಿಯೂ ಇಲ್ಲ.

ಚುನಾವಣೆ ಘೋಷಣೆಗೂ ಮುನ್ನವೇ ನಾಗಾ ಬುಡಕಟ್ಟು ಸಮುದಾಯಗಳ 15ಕ್ಕೂ ಹೆಚ್ಚು ಪಕ್ಷಗಳು ಚುನಾವಣೆಯನ್ನು ಬಹಿಷ್ಕರಿಸಿದ್ದವು. 'ಸಲ್ಯೂಷನ್ ಬಿಫೋರ್ ಎಲೆಕ್ಷನ್' (ಚುನಾವಣೆಗೂ ಮುನ್ನವೇ ಪರಿಹಾರ) ಎಂದು ಈ ಪಕ್ಷಗಳು ಪಟ್ಟು ಹಿಡಿದಿದ್ದವು. ನಾಗಾ ಬುಡಕಟ್ಟು ಸಮುದಾಯಗಳ ಪ್ರಾಬಲ್ಯವಿರುವ ಜಿಲ್ಲೆಗಳಿಗೆ, ಸಂವಿಧಾನದ 6ನೇ ಪರಿಚ್ಛೇದದ ಅಡಿಯಲ್ಲಿ ಸ್ವಾಯತ್ತ ಜಿಲ್ಲೆಯ ಮಾನ್ಯತೆ ನೀಡಬೇಕು. ಇಡೀ ನಾಗಾಲ್ಯಾಂಡ್ ಅನ್ನು ಈ ಪರಿಚ್ಛೇದದ ಅಡಿಯಲ್ಲಿ ತರಬೇಕು ಎಂಬುದು ನಾಗಾ ಬುಡಕಟ್ಟು ಪಕ್ಷಗಳ ಹಲವು ದಶಕಗಳ ಒತ್ತಾಯ. ಆದರೆ, ಈ ಬೇಡಿಕೆಯನ್ನು ಬಿಜೆಪಿ ಸಹ ಈಡೇರಿಸುತ್ತಿಲ್ಲ ಎಂಬುದೇ ಚುನಾವಣಾ ಬಹಿಷ್ಕಾರಕ್ಕೆ ಪ್ರಮುಖ ಕಾರಣ. 'ಬಿಜೆಪಿ ಸಹ ನಮಗೆ ದ್ರೋಹ ಬಗೆದಿದೆ' ಎಂದು ಈ ಜನರು ಹೇಳುತ್ತಿದ್ದಾರೆ.

ಈ ಪ್ರದೇಶಗಳನ್ನು ಅಥವಾ ಇಡೀ ರಾಜ್ಯವನ್ನು 6ನೇ ಪರಿಚ್ಛೇದಕ್ಕೆ ಸೇರಿಸಿದರೆ, ಕಾನೂನು ರಚನೆ ಮತ್ತು ಭೂಮಂಜೂರಾತಿಯಲ್ಲಿ ಸ್ಥಳೀಯರಿಗೆ ಹೆಚ್ಚಿನ ಅಧಿಕಾರ ದೊರೆಯಲಿದೆ. ಇಂತಹ ಅಧಿಕಾರ ದೊರೆತರೆ ನಾಗಾ ಬುಡಕಟ್ಟು ಜನರ ಸಂಸ್ಕೃತಿ ರಕ್ಷಣೆ ಸಾಧ್ಯವಾಗಲಿದೆ ಎಂಬುದು ಈ ಬೇಡಿಕೆಯ ಹಿಂದಿನ ಉದ್ದೇಶ. ಈ ಬೇಡಿಕೆಯನ್ನು ಈಡೇರಿಸುವ ಸಂಬಂಧ ಬಿಜೆಪಿಯು 2015ರಲ್ಲಿ ಈ ಪಕ್ಷಗಳ ಒಟ್ಟಿಗೆ ಮತ್ತು ನಾಗಾ ಬಂಡುಕೋರರ ಒಟ್ಟಿಗೆ ಶಾಂತಿ ಒಪ್ಪಂದ ಮಾಡಿಕೊಂಡಿತ್ತು. 2017ರಲ್ಲೂ ಮತ್ತಷ್ಟು ಪಕ್ಷಗಳ ಜತೆಗೆ ಇನ್ನೊಂದು ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದಗಳ ಫಲವಾಗಿಯೇ, ಎನ್‌ಡಿಪಿಪಿ ಒಟ್ಟಿಗೆ ಮೈತ್ರಿಮಾಡಿಕೊಂಡು 2013ರ ಚುನಾವಣೆಯಲ್ಲಿ ಗೆದ್ದು ಸರ್ಕಾರ ರಚನೆಯಲ್ಲಿ ಬಿಜೆಪಿ ಭಾಗಿಯಾಗಿತ್ತು. ಆದರೆ ಆನಂತರದ ಸತತ ಮಾತುಕತೆಯ ನಂತರವೂ ನಾಗಾ ಬುಡಕಟ್ಟು ಸಮುದಾಯಗಳ ಬೇಡಿಕೆಯನ್ನು ಈಡೇರಿಸಲು ಎನ್‌ಡಿಪಿಪಿ–ಬಿಜೆಪಿ ಮೈತ್ರಿಕೂಟಕ್ಕೆ ಸಾಧ್ಯವಾಗಲಿಲ್ಲ. ಹೀಗಾಗಿಯೇ ಹಲವು ಬುಡಕಟ್ಟು ಪಕ್ಷಗಳು ಚುನಾವಣೆಯನ್ನು ಬಹಿಷ್ಕರಿಸಿದ್ದವು. ಈ ಬಹಿಷ್ಕಾರವನ್ನು ಆಡಳಿತಾರೂಢ ಎನ್‌ಡಿಪಿಪಿ ಸಹ ಬೆಂಬಲಿಸಿತ್ತು. ಆನಂತರ ಚುನಾವಣಾ ಚಟುವಟಿಕೆಯಲ್ಲಿ ಅತ್ಯಂತ ಸಕ್ರಿಯವಾಗಿ ಪಾಲ್ಗೊಂಡಿತು.

ಬಿಜೆಪಿಯ ಈ ನಿಲುವುಗಳ ವಿರುದ್ಧ ಪ್ರತಿಭಟನೆ ನಡೆಯುತ್ತಿದ್ದರೂ, ಅದು ಮತದಾನದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ತಜ್ಞರು ಅಂದಾಜಿಸಿದ್ದಾರೆ. ಬಿಜೆಪಿಯನ್ನು ವಿರೋಧಿಸಿದ್ದ ಎನ್‌ಪಿಎಫ್ ಈಚೆಗಷ್ಟೇ ಯಾವುದೇ ಪಕ್ಷದ ಜತೆಗೆ ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳಲು ಸಿದ್ಧ ಎಂದು ಹೇಳಿದೆ. ಹೀಗಾಗಿ ಯಾವುದೇ ಪಕ್ಷ ಹೆಚ್ಚು ಸ್ಥಾನಗಳಿಸಿದರೂ ಎನ್‌ಡಿಪಿಪಿ, ಬಿಜೆಪಿ ಮತ್ತು ಎನ್‌ಪಿಎಫ್ ಸರ್ಕಾರದಲ್ಲಿ ಪಾಲುದಾರರಾಗುವುದು ಖಚಿತವಾದಂತಾಗಿದೆ.

ವಿಭಿನ್ನ ಕಥೆ ಹೊತ್ತು ಬರುತ್ತಿದೆ 'ಆರ'

ದೀಪಿಕಾ ಆರಾಧ್ಯ

ವಿಭಿನ್ನವಾದ ಕಥೆ ಹೊತ್ತ ಚಿತ್ರವೊಂದನ್ನು ತೆರೆಮೇಲೆ ತರಲು ಹೊಸಬರ ತಂಡವೊಂದು ಸಜ್ಜಾಗಿದೆ. ಚಂದನವನದಲ್ಲಿ ನಡೆಯುತ್ತಿರುವ ಪ್ರಯೋಗಾತ್ಮಕ ಚಿತ್ರಗಳ ಸಾಲಿಗೆ ಸೇರುವ ಕನಸು ಹೊತ್ತು ಯುವತಂಡವೊಂದು 'ಆರ' ಸಿನಿಮಾ ನಿರ್ಮಾಣ ಮಾಡಿದೆ. ಅಶ್ವಿನ್ ವಿಜಯ ಮೂರ್ತಿ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಪೋಸ್ಟರ್ ಸದ್ಯ ಗಮನಸೆಳೆಯುತ್ತಿದೆ.

ದೈವ ಹಾಗೂ ದುಷ್ಟ ಶಕ್ತಿಗಳ ಕಥೆ ಹೇಳಲು ಹೊರಟ 'ಆರ' ಸಿನಿಮಾ ದೈವಿಕ ಕಥಾಹಂದರದ ಥ್ರಿಲ್ಲರ್ ಸಬ್ಜೆಕ್ಟ್ ಒಳಗೊಂಡಿದೆ. 'ಆರ' ಎಂಬ ಹುಡುಗನ ಪಯಣ ಈ ಚಿತ್ರದಲ್ಲಿದೆ. ತನ್ನ ತಾತನಿಂದ ಬಳುವಳಿಯಾಗಿ ಬಂದ ಕಾಡನ್ನು ದುಷ್ಟ ಶಕ್ತಿಗಳಿಂದ ಆತ ಉಳಿಸಿಕೊಳ್ಳುತ್ತಾನಾ ಎನ್ನುವುದೇ ಚಿತ್ರದ ಎಳೆ.

ಚಿತ್ರರಂಗದಲ್ಲಿ ಸಕ್ರಿಯರಾಗಿರುವ ನಿರ್ದೇಶಕ ಅಶ್ವಿನ್, ದಿನೇಶ್ ಬಾಬು ನಿರ್ದೇಶನದ 'ನನಗಿಷ್ಟ' ಸಿನಿಮಾದಲ್ಲಿ ನಟಿಸಿದ್ದಾರೆ. 'ಕಿನ್ನರಿ', 'ಸೇವಂತಿ ಸೇವಂತಿ' ಧಾರಾವಾಹಿಗಳಲ್ಲೂ ಬಣ್ಣಹಚ್ಚಿರುವ ಅಶ್ವಿನ್ ಅವರ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದೆ. ಚಿತ್ರೀಕರಣ ಪೂರ್ಣಗೊಳಿಸಿ ಸದ್ಯ ಚಿತ್ರತಂಡವು ಸಿನಿಮಾ ಪ್ರಚಾರ ಆರಂಭಿಸಿದೆ. ಸಿನಿಮಾ ಏಪ್ರಿಲ್ ಅಥವಾ ಮೇನಲ್ಲಿ ತೆರೆಗೆ ಬರಲಿದೆ. ಚಿತ್ರದಲ್ಲಿ ರೋಹಿತ್ ಹಾಗೂ ದೀಪಿಕಾ ಆರಾಧ್ಯ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ಈ ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ರೋಹಿತ್ ಬರೆದಿದ್ದಾರೆ.

'ಲಂಕಾಸುರ'ನ ಮಾಡರ್ನ್ ಮಹಾಲಕ್ಷ್ಮಿ!

ವಿನೋದ್ ಪ್ರಭಾಕರ್ ನಾಯಕರಾಗಿ ನಟಿಸಿರುವ 'ಲಂಕಾಸುರ' ಸಿನಿಮಾದ 'ಮಾಡರ್ನ್ ಮಹಾಲಕ್ಷ್ಮಿ' ಹಾಡು ಬಿಡುಗಡೆಯಾಗಿದ್ದು, ಸಿನಿಮಾದಲ್ಲಿನ ವಿನೋದ್ ಅವರ ಹೊಸ ಲುಕ್ ವೀಕ್ಷಕರಲ್ಲಿ ಕುತೂಹಲ ಹುಟ್ಟಿಸಿದೆ.

ವಿನೋದ್ ಅವರ ಪತ್ನಿ ನಿಶಾ ವಿನೋದ್ ಅವರ 'ಟೈಗರ್ ಟಾಕಿಸ್' ಮೂಲಕ ನಿರ್ಮಾಣವಾಗುತ್ತಿರುವ ಚೊಚ್ಚಲ ಚಿತ್ರ ಇದಾಗಿದೆ. 'ಬಹದ್ದೂರ್', 'ಜೇಮ್ಸ್' ಸಿನಿಮಾ ಖ್ಯಾತಿಯ ನಿರ್ದೇಶಕ ಚೇತನ್ ಕುಮಾರ್ ಬರೆದಿರುವ ಚಿತ್ರದ 'ಮಾಡರ್ನ್ ಮಹಾಲಕ್ಷ್ಮಿ' ಹಾಡನ್ನು ನಟಿ ಮಾಲಾಶ್ರೀ ಇತ್ತೀಚೆಗೆ ಬಿಡುಗಡೆಗೊಳಿಸಿದರು. 'ನಾನು ವಿನೋದ್ ಪ್ರಭಾಕರ್ ಅವರ ಅಭಿಮಾನಿ. ಅವರು ಮಾಡುವ ಸಾಹಸ ಸನ್ನಿವೇಶಗಳು ನನಗೆ ತುಂಬಾ ಇಷ್ಟ' ಎಂದು ಚಿತ್ರಕ್ಕೆ ಮಾಲಾಶ್ರೀ ಶುಭಕೋರಿದರು.

'ಕೋವಿಡ್ ಮುಂಚೆ ರಾಘವ ಮುನಿಸ್ವಾಮಿ ಅವರು ನನಗೆ ಮುಂಗಡ ಹಣ ನೀಡಿ ಈ ಚಿತ್ರ ಆರಂಭಿಸಿದ್ದರು. ತದನಂತರ ಕಾರಣಾಂತರಗಳಿಂದ ನಾವೇ ಟೈಗರ್ ಟಾಕೀಸ್ ಸಂಸ್ಥೆ ಮೂಲಕ ಈ ಚಿತ್ರವನ್ನು ನಿರ್ಮಾಣ ಮಾಡಿದೆವು' ಎಂದರು ವಿನೋದ್.

ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಎಲ್ಲಾ ಹಾಡುಗಳನ್ನು ಚೇತನ್ ಬರೆದಿದ್ದಾರೆ. 'ಲೂಸ್ ಮಾದ' ಯೋಗಿ ನಟಿಸಿದ್ದು, ದೇವರಾಜ್, ರವಿಶಂಕರ್ ಮುಂತಾದವರ ತಾರಾಬಳಗದಲ್ಲಿದ್ದಾರೆ.

ವಿನೋದ್ ಪ್ರಭಾಕರ್ ಹಾಗೂ ನಿಶಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸ್ವಾಭಾವಿಕ ಸುಖ

ಏನೇನು ಹಾರಾಟ ಸುಖಕೆಂದು ಲೋಕದಲಿ |
ತಾನಾಗಿ ಬಂದ ಗಾಳಿವೊಲ್ ಬಂದ ಸುಖವೆ ಸುಖ ||
ನೀನೆ ಕೈಬೀಸಿಕೊಳೆ ನೋವುಬೆವರುಗಳೆ ಫಲ |
ಮಾಣು ಮನದುಬ್ಬಸವ – ಮಂಕುತಿಮ್ಮ || 821 ||

ಪದ-ಅರ್ಥ: ಸುಖಕೆಂದು = ಸುಖಕೆ + ಎಂದು, ಗಾಳಿವೊಲ್ = ಗಾಳಿಯಂತೆ, ಮಾಣು = ಬಿಡು, ಮನದುಬ್ಬಸವ = ಮನದ + ಉಬ್ಬಸವ

ವಾಚ್ಯಾರ್ಥ: ಸುಖ ಬೇಕೆಂದು ಲೋಕದಲ್ಲಿ ಎಷ್ಟೊಂದು ಹಾರಾಟ ನಡೆದಿದೆ? ತಾನಾಗಿಯೇ, ಅತಿಯಾದ ಪರಿಶ್ರಮವನ್ನು ಬಳಸದೆ ಬಂದ ಸುಖವೆ ನಿಜವಾದ ಸುಖ. ನಾವಾಗಿಯೇ ಕೈಬೀಸಿ, ಗಾಳಿ ಹಾಕಿಕೊಂಡರೆ ನೋವು, ಬೆವರುಗಳೆ ಅದರ ಫಲ. ಮನದ ಅತಿಯಾದ ಹೊಯ್ದಾಟವನ್ನು ಬಿಡು.

ವಿವರಣೆ: ಎಲ್ಲರ ಬದುಕಿನ ಗುರಿಯೂ ಒಂದೇ. ತನ್ನ ಬದುಕಿನಲ್ಲಿ ಪ್ರತಿ ಕ್ಷಣವೂ ಸುಖ ತುಂಬಿರಬೇಕು. ಕಷ್ಟದ ನೆರಳೂ ಅಲ್ಲಿ ಕಾಣಬಾರದು. ಅಲ್ಲಿ ಸುಖ ಸಿಕ್ಕೀತು, ಇಲ್ಲಿ ಸುಖ ದೊರೆತೀತು ಎಂದು ದಿಕ್ಕುದಿಕ್ಕಿಗೆ ಓಡುತ್ತದೆ ಜೀವ. ಸುಖ ದೊರಕಿತೇ? ಓಡಾಡಿದ ಶ್ರಮ ಮಾತ್ರ ದೊರಕಿತು. ಅದಕ್ಕೇ ಅಲ್ಲಮಪ್ರಭು ಹೇಳಿದ. "ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ". ನಾವು ಸುಖಕ್ಕಾಗಿ ಪ್ರಯತ್ನ ಪಟ್ಟಷ್ಟೂ ಕಷ್ಟಗಳೇ ಬಂದು ತಲೆಯಮೇಲೆ ಕೂಡ್ರುತ್ತವೆ ತಾನೊಂದು ಬಗೆದರೆ ವಿಧಿಯೊಂದನ್ನು ಯೋಜಿಸುತ್ತಿರುತ್ತದೆ. ಅಕಸ್ಮಾತ್ತಾಗಿ ನಮ್ಮ ಪ್ರಯತ್ನ, ವಿಧಿಯ ಯೋಜನೆಗೆ ಅನುಗುಣವಾಗಿದ್ದರೆ, ಅದು ನಡೆಯುತ್ತದೆ, ಅದರಿಂದ ಸುಖ ಬರುತ್ತದೆ. ಇದಕ್ಕಾಗಿ ವಿಶೇಷ ಧಾವಂತ ಬೇಡ. ಅದನ್ನೇ ಕಗ್ಗ ತಾನಾಗಿಯೇ ಬಂದ ಸುಖ ಎನ್ನುತ್ತದೆ.

ನಮ್ಮ ಪ್ರಯತ್ನ ವಿಧಿಯ ಯೋಜನೆಗೆ ಅನುಗುಣವಾಗಿರದಿದ್ದರೆ ನಮ್ಮ ಪ್ರಯತ್ನಗಳು, ಅವು ಎಷ್ಟೇ ತೀವ್ರವಾಗಿದ್ದರೂ ಫಲ ನೀಡುವುದಿಲ್ಲ. ಬೇಗ ಶ್ರೀಮಂತರಾಗಬೇಕೆಂದು ಜನ ಏನೇನು ಪ್ರಯತ್ನಮಾಡುತ್ತಾರೆ ಅಲ್ಲವೆ? ಮನೆಯಲ್ಲಿದ್ದ ಹಣವನ್ನು ಎರಡುಪಟ್ಟು ಮಾಡಿಕೊಡುತ್ತೇವೆಂದು ಬಂದವನನ್ನು ನಂಬಿ ಇದ್ದದ್ದನ್ನೂ ಕಳೆದುಕೊಂಡು ಒದ್ದಾಡಿದವರಿಲ್ಲವೆ? ಲಂಚದ ಹಣದಿಂದ ಬದುಕನ್ನು ಶ್ರೀಮಂತವಾಗಿಸಿಕೊಳ್ಳಲು ಹೊರಟು, ಒಂದಷ್ಟು ದಿನ ಹಣದ ಹೊಳೆಯಲ್ಲಿ ಹೊರಳಾಡಿ, ಕೊನೆಗೆ ಒತ್ತಡ, ಸಾಮಾಜಿಕ ಅವಹೇಳನವನ್ನು ತಡೆದುಕೊಳ್ಳಲಾರದೆ ನೇಣಿಗೆ ಶರಣಾದವರಿದ್ದಾರೆ. ಅದಕ್ಕೆ ಕಗ್ಗ ಒಂದು ಸಲಹೆ ಕೊಡುತ್ತದೆ. ಸುಖಕ್ಕಾಗಿ ಏನೇನೋ ಪ್ರಯತ್ನಮಾಡಬೇಡ. ಮಾಡುವ ಕೆಲಸವನ್ನುಪ್ರಾಮಾಣಿಕವಾಗಿ, ಶ್ರದ್ಧೆಯಿಂದ ಮಾಡು. ಅದು ದೈವಕ್ಕೆ ಒಪ್ಪಿಗೆಯಾದೀತು. ಆಗ ಸುಖ, ತಂಗಾಳಿಯಂತೆ ಬಂದು ಹಿತತಂದೀತು. ಬರೀ ಸುಖಕ್ಕಾಗಿ ಏನೇನೋ ಅಧರ್ಮದ, ಅನ್ಯಾಯದ ಕೆಲಸಗಳನ್ನು ಮಾಡಿದರೆ, ಅದು ತಾನಾಗಿಯೇ ಕೈಬೀಸಿಕೊಂಡುಗಾಳಿ ಹಾಕಿಕೊಂಡಂತೆ. ಆ ಗಾಳಿಯಿಂದ ತಂಪು ಇಲ್ಲ, ಬದಲಾಗಿ ಅದುಮೈಕೈ ನೋವು ತರುವ ಚಟುವಟಿಕೆ. ಅದು ಸ್ವಾಭಾವಿಕಸುಖವನ್ನು ತರಲಾರದು. ಅದಕ್ಕಾಗಿ ಏನು ಮಾಡಬೇಕು?. ಮನದ ಉಬ್ಬಸಬೇಡ. ಸುಖಕ್ಕಾಗಿ ಮನದಲ್ಲಿ ಅನಾವಶ್ಯಕಆತಂಕಗಳನ್ನು ತಂದುಕೊಂಡು ದಿಕ್ಕು ದಿಕ್ಕಿಗೆಅಲೆಯುವುದು ಬೇಡ. ಆತಂಕದಿಂದ ಪ್ರಯತ್ನಿಸಿದಷ್ಟೂ ನವಿಫಲತೆಯೇ ಎದುರಾಗಿ ಸುಖ ಮೃಗಜಲವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಫೆಬ್ರುವರಿ 14, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಅಷ್ಟಮಿ ಗಂ. 09-04 ನಕ್ಷತ್ರ: ಅನುರಾಧ ಗಂ. 26-01 ಯೋಗ: ಧ್ರುವ ಗಂ. 12-25, ಕರಣ: ಕೌಲವ ಗಂ. 09-04, ಕುಂಭ ಮಾಸದ 01 ನೇ ದಿನ.

ರಾಹುಕಾಲ: ಮಧ್ಯಾಹ್ನ 03-00 -04-30

ಸೂರ್ಯೋದಯ: 06-57 ಸೂರ್ಯಾಸ್ತ : 06-32

ಮುಸ್ಲಿಂ ದಿನಾಂಕ: 22 ರಜಬ್

ಅದೃಷ್ಟ ಸಂಖ್ಯೆ: 8, 12

ಮೇಷ: ಶನಿಯು ತಿರುಗಾಟ ಮಾಡಿಸುವುದರಿಂದ ಆರೋಗ್ಯದ ಬಗ್ಗೆ ಗಮನಹರಿಸುವುದು ಅನಿವಾರ್ಯವಾಗುತ್ತದೆ. ನಿಷ್ಠೂರದ ಮಾತುಗಾರಿಕೆಯಿಂದಾಗಿ ಸಹೋದರರ ಕಲಹ ಉಂಟಾಗಬಹುದು.

ವೃಷಭ: ರಾಜಕೀಯ ವ್ಯಕ್ತಿಗಳು ಸಾಮಾಜಿಕ ಕಾರ್ಯಕ್ರಮದಿಂದ ಮತ್ತು ಮಾಧ್ಯಮದಿಂದ ದೂರ ಉಳಿಯುವ ಬಗ್ಗೆ ತೀರ್ಮಾನಿಸಿ. ನಿಸ್ವಾರ್ಥ ಬುದ್ಧಿಯನ್ನು ತ್ಯಜಿಸಿ ಇಂದು ಸ್ವಾರ್ಥಿಗಳಾಗುವಂತೆ ಪರಿಸ್ಥಿತಿ ಎದುರಾಗಬಹುದು.

ಮಿಥುನ: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜತೆಯಲ್ಲಿ ವಿದೇಶದಲ್ಲಿ ಕೆಲಸ ಮಾಡುವ ಅವಕಾಶ ಸಿಗಬಹುದು. ದಾಂಪತ್ಯ ಜೀವನ ಸುಖಮಯವಾಗಿರುತ್ತದೆ. ಅವಿವಾಹಿತರಿಗೆ ಕಂಕಣ ಭಾಗ್ಯವಿದೆ.

ಕರ್ಕಾಟಕ: ಓಂ ಗುರುಭ್ಯೋನಮಃ ಎಂದು ಹೇಳಿ ದಿನ ಪ್ರಾರಂಭಿಸಿದರೆ ಮನಸ್ಸಿಗೆ ನೆಮ್ಮದಿ ಜೊತೆಗೆ ಜಯಸಿಗುವುದು. ದೀರ್ಘಕಾಲದ ಆರೋಗ್ಯ ಸಮಸ್ಯೆಗೆ ವೈದ್ಯರಿಂದ ಸಲಹೆ ಸಿಗಲಿದೆ . ಆರೋಗ್ಯದಲ್ಲಿ ಚೇತರಿಕೆ ಕಾಣುವಿರಿ.

ಸಿಂಹ: ಗೃಹದಲ್ಲಿ ಸಂತೋಷ ತರುವಂತಹ ಶುಭ ಸಮಾರಂಭಗಳು ನಡೆಯುವುದು. ನ್ಯಾಯಾಲಯದ ಕೆಲಸದಲ್ಲಿ ಕೆಲವು ಅಡೆತಡೆಗಳು ಎದುರಾದರೂ ಸತ್ಯಕ್ಕೆ ಜಯವಿದೆ ಎನ್ನುವುದರಿಂದ ಚಿಂತಿಸಬೇಕಿಲ್ಲ.

ಕನ್ಯಾ: ದೈಹಿಕ ಶ್ರಮ ಜಾಸ್ತಿಯಾದರೂ ಆದಾಯ ಉತ್ತಮ ಸ್ಥಿತಿಯಲ್ಲಿರುತ್ತದೆ. ಆಗಾಗ ಹಲವು ವಿಚಾರಗಳಲ್ಲಿ ತೊಂದರೆ ಕಂಡುಬಂದರೂ ಆಂಜನೇಯನ ಆರಾಧನೆ ಮಾಡುವುದರಿಂದ ಎಲ್ಲಾ ಸಮಸ್ಯೆಗಳು ಪರಿಹಾರವಾಗುವುದು.

ತುಲಾ: ಹೊರದೇಶದಲ್ಲಿ ಉದ್ಯೋಗದ ಅನ್ವೇಷಣೆ ಮಾಡುವುದಕ್ಕೆ ಒಳ್ಳೆಯ ದಿನ. ಇಂದಿನ ಪ್ರಯಾಣ ನೀವು ಅಂದುಕೊಂಡಂತೆ ಸುಗಮವಾಗಿರುವುದಿಲ್ಲ, ಜೋಪಾನವಾಗಿರಿ. ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ

ವೃಶ್ಚಿಕ: ಸ್ವ ಉದ್ಯೋಗಿಗಳಿಂದ ಅಪೇಕ್ಷೆಯ ರೀತಿಯಾಗಿ ಧನಸಹಾಯ ಸಿಗಲಿದೆ. ಕಟ್ಟಡ ನಿರ್ಮಾಣ ಸಾಮಗ್ರಿ ಕೊಳ್ಳಲು ಈ ದಿನವು ಶುಭವಾಗಿ ತೋರುವುದಿಲ್ಲ. ತಾಮ್ರದ ವಸ್ತುವಿನಿಂದ ಅಥವಾ ಅದರ ಮಾರಾಟದಿಂದ ಲಾಭ ಇದೆ.

ಧನು: ಸೋದರ ಮಾವನವರ ಆರೋಗ್ಯ ಉತ್ತಮಗೊಳ್ಳುವುದು. ಸೌಂದರ್ಯ ಸಾಮಗ್ರಿಗಳ ಖರೀದಿಯ ಯೋಗವಿದೆ ಮತ್ತು ಅದಕ್ಕಾಗಿ ಅತಿಯಾಗಿ ಹಣ ವ್ಯಯವಾಗಲಿದೆ. ಕಾರ್ಯಗಳು ಯಾವುದೇ ಅಡಚಣೆಗಳಿಲ್ಲದೆ ಸಾಗುವವು.

ಮಕರ: ಸಂಗೀತಗಾರರಿಗೆ ಮತ್ತು ನರ್ತಕರಿಗೆ ಇಂದು ವಿಶೇಷ ದಿನ. ಯೋಚಿಸುವ ಪ್ರತಿಯೊಂದು ಕೆಲಸ-ಕಾರ್ಯಗಳು ಪ್ರಕೃತ ವಿಳಂಬ ರೀತಿಯಲ್ಲಿ ನಡೆದರೂ ಮುಂದೆ ಯಶಸ್ಸು ನಿಮಗೆ ಕಟ್ಟಿಟ್ಟ ಬುತ್ತಿಯಾಗಿರುತ್ತದೆ.

ಕುಂಭ: ಸರ್ಕಾರಿ ನೌಕರರಿಗೆ ಇತರೆ ಕಾರ್ಯಗಳಿಂದ ಅಧಿಕವಾದ ಒತ್ತಡ ಉಂಟಾಗಬಹುದು. ಸಹೋದ್ಯೋಗಿಗಳೊಂದಿಗಿನ ಇರುವ ಬಾಂಧವ್ಯ ಇನ್ನಷ್ಟು ಉತ್ತಮಗೊಳ್ಳಲಿದೆ. ಶುಭಕ್ಕಾಗಿ ದುರ್ಗಾಪರಮೇಶ್ವರಿಯನ್ನು ಆರಾಧಿಸಿ.

ಮೀನ: ಜೀವನ ನಿರ್ವಹಣೆಗೆ ಅತ್ಯಂತ ಅವಶ್ಯಕವಾಗಿರುವ ವಸ್ತುಗಳ ಖರೀದಿಯಿಂದ ಮನಸ್ಸಿಗೆ ನೆಮ್ಮದಿ ಸಿಗುವುದು.. ವೇದಾಧ್ಯಯನದಲ್ಲಿರುವವರಿಗೆ ಇಂದು ಮಂತ್ರಸಿದ್ಧಿ ಆಗಬಹುದು.

ಪದಬಂಧ 5230

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ವಾದ ನಡೆಯುತ್ತಿದ್ದಾಗಲೇ ಈ ಭಾಷಾಂತರ! (4)
3. ರಾಯರಿಗೆ ಅಬಾರಿಯಾಗಿರುವ ರಾಜಪ್ರತಿನಿಧಿ (4)
5. ಮಣಿ ಧರಿಸಿರುವ ಚಲುವೆ (3)
6. ಯಮನ ಜೊತೆ ಕಳೆದ ಕಾಲ (3)
8. ನಗರದಲ್ಲಿ ಕೇಳಿಸಿದ ಚರ್ಮ ವಾದ್ಯ (3)
9. ವರ ನೀಡಿದ ವಿಸ್ತಾರ ಹೇಳಿಕೆ (3)
10. ಪೂಜಾ ವೇಳೆಯಲ್ಲಿ ನೀರು ತುಂಬಿದ ಚೊಂಬು (3)
12. ಜಲದೊಳಗೆ ಸಂಕೀರ್ಣ! (3)
14. ನೆಮ್ಮದಿ ಈ ರೀತಿ ಬಂದಿದೆ (4)
15. ಪರದೆಯ ಹಿಂದಿರುವ ಗುಟ್ಟು (4)

ಮೇಲಿಂದ ಕೆಳಕ್ಕೆ

1. ಬಟ್ಟೆಗಳನ್ನು ಮಡಿಮಾಡುವವನು (3)
2. ದರಬಾರಿನಲ್ಲಿ ವಿಧಿಸಿದ ಬೆಲೆ (2)
3. ರಾಜನ ಹೆಂಡತಿ (2)
4. ದುರಸ್ತಿಯನ್ನು ಹೀಗೆನ್ನಿ (3)
7. ಮೃತ್ಯುದೇವತೆಯ ಆಳು (5)
8. ನಯವಾದ ಮಾತಿನಲ್ಲೇ ಮೋಸ ಮಾಡಿದವ (5)
9. ಸರಸದ ವಿರುದ್ಧ ಪದ (3)
11. ಅಕ್ಕರೆಯಿಂದ ತಿನ್ನಿಸಿದ ಸಿಹಿ (3)
12. ಜವಾನನ ಸುತ್ತ ನೆರೆದಿರುವ ಮಂದಿ (2)
13. ಮರಕ್ಕೆ ಹಬ್ಬಿದ ಬಳ್ಳಿ (2)



5229ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಡಿಪಾಯ
3.ಆಯವ್ಯಯ 5.ಮಡದಿ
6.ಮರುಳ 7.ಗಹನ
9.ತಲ್ಲೀನ 11.ವಿರಾಮ
12.ಮಸೂರ 14.ಯಮಸುತ
15.ವಿನಾಯಕ

ಮೇಲಿಂದ ಕೆಳಕ್ಕೆ:
1.ಅನುರಾಗ 2.ಯಮ
3.ಆದಿ 4.ಯಮಳ
6.ಮಡಿವಂತ 8.ನವಸುಮ
10.ನಳಪಾಕ 11.ವಿದಾಯ
12.ಮತ 13.ರವಿ

ಸುಡೊಕು 5616

1		9		2			8	
	6				9		5	2
	8			4	5			
2							6	
		4		3				1
5					2			
		5		9			7	6
7			2		6	8		
	4			7			3	

5615 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಸಂಕ್ಷಿಪ್ತ ಸುದ್ದಿ

ರಷ್ಯಾದಿಂದ 5 ವರ್ಷದಲ್ಲಿ ₹1.07 ಲಕ್ಷ ಕೋಟಿ ಶಸ್ತ್ರಾಸ್ತ್ರ

ಮಾಸ್ಕೊ (ರಾಯಿಟರ್ಸ್): ರಷ್ಯಾವು ಕಳೆದ ಐದು ವರ್ಷಗಳ ಅವಧಿಯಲ್ಲಿ ಭಾರತಕ್ಕೆ ₹ 1.07 ಲಕ್ಷ ಕೋಟಿ ಮೌಲ್ಯದ ಶಸ್ತ್ರಾಸ್ತ್ರ ಹಾಗೂ ಸೇನಾ ಪರಿಕರಗಳನ್ನು ಪೂರೈಸಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಅಲ್ಲದೆ, ಭಾರತವು 83 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ವಿವಿಧ ಶಸ್ತ್ರಾಸ್ತ್ರಗಳು ಮತ್ತು ಸೇನಾ ಪರಿಕರಗಳಿಗಾಗಿ ಖರೀದಿ ಆದೇಶವನ್ನು ನೀಡಿದೆ. ರಷ್ಯಾದಿಂದ ಶಸ್ತ್ರಾಸ್ತ್ರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವ ರಾಷ್ಟ್ರ ಭಾರತ. ರಷ್ಯಾದ ಈಗಿನ ಒಟ್ಟು ಖರೀದಿ ಆದೇಶದಲ್ಲಿ ಶೇ 20ರಷ್ಟು ಭಾರತದ್ದೇ ಆಗಿದೆ ಎಂದು ವರದಿಯಾಗಿದೆ.

ಈ ಹಿನ್ನೆಲೆಯಲ್ಲಿ ಉಕ್ರೇನ್ ಮೇಲಿನ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸುತ್ತಿಲ್ಲ ಎಂದೂ ಈ ವರದಿಗಳು ವ್ಯಾಖ್ಯಾನಿಸಿವೆ. ಬಿಕ್ಕಟ್ಟು ಪರಿಹಾರಕ್ಕೆ ಸಂಧಾನದ ಮಾರ್ಗವನ್ನು ಅನುಸರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ಮಾಡಿದ್ದಾರೆ. ಉಕ್ರೇನ್ ಮೇಲಿನ ದಾಳಿ ಹಿನ್ನೆಲೆಯಲ್ಲಿ ಸದ್ಯ ವಿವಿಧ ರಾಷ್ಟ್ರಗಳು ರಷ್ಯಾದ ಮೇಲೆ ನಿರ್ಬಂಧ ಹೇರಿವೆ.

ಅಂತರಿಕ್ಷಕ್ಕೆ ಸೌದಿಯಿಂದ ಮಹಿಳೆ

ರಿಯಾದ್ (ಎಎಫ್‌ಪಿ): ಸೌದಿ ಆರೇಬಿಯಾ ತನ್ನ ಅಂತರಿಕ್ಷ ಯಾನ ಯೋಜನೆಯಡಿ ಪ್ರಥಮಬಾರಿಗೆ ಮಹಿಳಾ ಗಗನಯಾತ್ರಿಯೊಬ್ಬರನ್ನು ಈ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಅಂತರಿಕ್ಷಕ್ಕೆ ಕಳುಹಿಸಲಿದೆ ಎಂದು ಅಧಿಕೃತ ಮಾಧ್ಯಮ ವರದಿ ಮಾಡಿದೆ. ಅಂತರ ರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ (ಐಎಸ್‌ಎಸ್) ತೆರಳುವ ಯೋಜನೆಯಡಿ ದೇಶದ ಪುರುಷ ಗಗನಯಾತ್ರಿ ಅಲಿ ಅಲ್ ಖಾರ್ನಿ ಅವರ ಜೊತೆಗೆ ಮಹಿಳಾ ಗಗನ ಯಾತ್ರಿ ರಯ್ಯಾನ ಬರ್ನಾವಿ ತೆರಳಲಿದ್ದಾರೆ.

ಇವರು ಅಮೆರಿಕದಿಂದ ಕಕ್ಷೆಗೆ ಉಡಾವಣೆಗೊಳ್ಳಲಿರುವ ಎಎಕ್ಸ್-2 ಅಂತರಿಕ್ಷ ಯೋಜನೆಯ ನೌಕೆಯಲ್ಲಿ ಇತರೆ ಗಗನಯಾತ್ರಿಗಳನ್ನು ಸೇರಿಕೊಳ್ಳಲಿದ್ದಾರೆ.

ಭೂಕಂಪದಲ್ಲಿ ಕಟ್ಟಡಗಳು ನಾಶ: ಟರ್ಕಿ, ಸಿರಿಯಾದಲ್ಲಿ ಗೋಚರಿಸುತ್ತಿವೆ ಮನ ಕಲಕುವ ದೃಶ್ಯಗಳು

ಗುತ್ತಿಗೆದಾರರ ಮೇಲೂ ಗದಾಪ್ರಹಾರ

ಅಂಕಾರಾ (ಎಪಿ): ಸಾವಿರಾರು ಕಟ್ಟಡಗಳು ನೆಲಸಮ ಆಗಿರುವುದರಲ್ಲಿ ಕಂಪನದ ಜತೆಗೆ ಕಳಪೆ ನಿರ್ಮಾಣವೂ ಕಾರಣವೆಂಬ ದೂರುಗಳು ಟರ್ಕಿಯಾದ್ಯಂತ ವ್ಯಾಪಕವಾಗಿವೆ. ಇದರಿಂದ ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಮುಂದಾಗಿರುವ ಟರ್ಕಿ ಸರ್ಕಾರ, ಭೂಕಂಪ ಸಂಬಂಧಿತ ಅಪರಾಧಗಳ ತನಿಖಾ ಬ್ಯೂರೊ ಸ್ಥಾಪಿಸುವುದಾಗಿ ಘೋಷಿಸಿದೆ.

ಈ ತನಿಖಾ ಸಂಸ್ಥೆ ಸಾಕ್ಷ್ಯಗಳನ್ನು ಸಂಗ್ರಹಿಸಲಿದೆ. ಕಟ್ಟಡಗಳ ನಿರ್ಮಾಣದಲ್ಲಿ ಜವಾಬ್ದಾರರಾದ ಗುತ್ತಿಗೆದಾರರು, ವಾಸ್ತುಶಿಲ್ಪಿಗಳು, ಭೂವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳನ್ನು ಗುರುತಿಸಿ, ಬಾಧ್ಯಸ್ಥರನ್ನಾಗಿಸಲು ಸೂಚಿಸಲಾಗಿದೆ. ಅಲ್ಲದೆ, ಕಟ್ಟಡ ಪರವಾನಗಿಗಳು ಮತ್ತು ಉದ್ಯೋಗ ಪರವಾನಗಿಗಳನ್ನು ಪರಿಶೀಲಿಸಿ ಸಂಬಂಧಿಸಿದವರ ಮೇಲೆ ಕ್ರಮಕ್ಕೆ ಆದೇಶಿಸಲಾಗಿದೆ ಎಂದು ಕಾನೂನು ಸಚಿವಾಲಯ ಹೇಳಿದೆ.

ಭೂಕಂಪ ತಾಳಿಕೊಳ್ಳದ ಕಟ್ಟಡಗಳ ಸಂಬಂಧ 131 ಗುತ್ತಿಗೆದಾರರು ಮತ್ತು ಎಂಜಿನಿಯರ್‌ಗಳನ್ನು ಹೊಣೆ ಮಾಡಲಾಗಿದೆ. ಇವರ ವಿರುದ್ಧ ತನಿಖೆ ನಡೆಸಲಾಗುತ್ತಿದೆ ಎಂದು ಟರ್ಕಿಯ ಕಾನೂನು ಸಚಿವ ಬೆಕಿರ್ ಬೊಜ್ಡಾಗ್ ಹೇಳಿದ್ದಾರೆ.

ಗಾಝಿಯಾನ್‌ಟೆಪ್ ಪ್ರಾಂತ್ಯದಲ್ಲಿ ಮೂವರನ್ನು ಬಂಧಿಸಿದ್ದು, ವಿಚಾರಣೆ ಬಾಕಿ ಇದೆ. ಇನ್ನೂ ಏಳು ಮಂದಿಯನ್ನು ವಶಕ್ಕೆ ಪಡೆದು, ದೇಶಬಿಡದಂತೆ ನಿರ್ಬಂಧ ಹೇರಲಾಗಿದೆ.

ಅದಿಯಾಮನ್‌ನಲ್ಲಿ ಹಲವು ಕಟ್ಟಡಗಳು ನಾಶವಾಗಿವೆ. ಇದರಿಂದ ಸರ್ಕಾರದ ಕ್ರಮಕ್ಕೆ ಹೆದರಿ, ದೇಶಬಿಡಲು ಮುಂದಾಗಿದ್ದ ಇಬ್ಬರು ಗುತ್ತಿಗೆದಾರರನ್ನು ಭಾನುವಾರ ಇಸ್ತಾಂಬುಲ್ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ ಎಂದು ಡಿಎಚ್‌ಎ ಸುದ್ದಿ ಸಂಸ್ಥೆ ವರದಿ ಮಾಡಿದೆ.

‘ನನ್ನ ಆತ್ಮಸಾಕ್ಷಿಯು ಸ್ಪಷ್ಟವಿದೆ. ನಾನು 44 ಕಟ್ಟಡಗಳನ್ನು ನಿರ್ಮಿಸಿದ್ದೆ. ಅವುಗಳಲ್ಲಿ ನಾಲ್ಕು ನೆಲಸಮವಾಗಿವೆ. ನಿಯಮಾನುಸಾರವೇ ಕಟ್ಟಡಗಳನ್ನು ನಿರ್ಮಿಸಿದ್ದೆ’ ಎಂದು ಬಂಧಿತ ಗುತ್ತಿಗೆದಾರ ಯಾವುಜ್ ಕರಕಸ್ ಸುದ್ದಿ ಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಭೂಕಂಪ ತಾಳಿಕೊಳ್ಳುವ ಎಂಜಿನಿಯರಿಂಗ್ ಮಾನದಂಡಗಳನ್ನು ಪೂರೈಸುವಂತೆ ಟರ್ಕಿಯಲ್ಲಿ ಕಟ್ಟಡ ನಿರ್ಮಾಣ ನಿಯಮಾವಳಿ ರೂಪಿಸಲಾಗಿದೆ. ಆದರೆ, ಇವು ಕಾಗದಕ್ಕೆ ಸೀಮಿತವಾಗಿದ್ದು, ಜಾರಿಯಾಗಿಲ್ಲ.

ಟರ್ಕಿಯ ಕಹ್ರಾಮನ್ಮಾರಾಸ್‌ನಲ್ಲಿ ಅವಶೇಷಗಳಡಿ ಸೋಮವಾರ ಪತ್ತೆಯಾದ ಶವ ಗುರುತಿಸಿದ ಸಂಬಂಧಿಕರು ರೋದಿಸಿದರು –ಎಎಫ್‌ಪಿ ಚಿತ್ರ

ಬಾಲಕನ ರಕ್ಷಣೆ; ಮಹಿಳೆಯರ ಕಣ್ಣಲ್ಲಿ ಆನಂದ ಭಾಷ್ಪ

ಅದಿಯಾಮನ್‌ನಲ್ಲಿ ಅವಶೇಷಗಳಡಿ ಸಿಲುಕಿದ್ದ 6 ವರ್ಷದ ಬಾಲಕನನ್ನು ರಕ್ಷಣಾ ಸಿಬ್ಬಂದಿಯೊಬ್ಬರು ಸುರಕ್ಷಿತವಾಗಿ ಹೊರತಂದರು. ಅಲ್ಲಿ ಗುಂಪುಗೂಡಿದ್ದಮಹಿಳೆಯರ ಕಣ್ಣಲ್ಲಿ ಆನಂದಭಾಷ್ಪ. ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಬಾಲಕನ್ನು ರಕ್ಷಿಸಿದ ದೃಶ್ಯ ‘ಹೆಬರ್ ಟರ್ಕ್’ ವಾಹಿನಿಯಲ್ಲಿ ಪ್ರಸಾರವಾಗಿದೆ.

ಹತಾಯ್ ಪ್ರಾಂತ್ಯದ ಅಂಟಾಕ್ಯಾದಲ್ಲಿ 20ರಿಂದ 30 ವರ್ಷದ ವ್ಯಕ್ತಿಯನ್ನು ರಕ್ಷಿಸಲಾಯಿತು. ಅವಶೇಷಗಳಡಿ ಸಿಲುಕಿದ್ದ 9 ಜನರಲ್ಲಿ ಈತನೂ ಒಬ್ಬನಾಗಿದ್ದ.

ಆದರೆ, ಅಲ್ಲಿ ಬೇರೆಯವರ ಇರುವಿಕೆ ಬಗ್ಗೆ ಮೂರು ದಿನಗಳಿಂದ ಯಾವುದೇ ಸೂಚನೆ ಇಲ್ಲವೆಂದು ಆ ವ್ಯಕ್ತಿ ಹೇಳಿದ್ದಾನೆ. ಕಿರಿಖಾನ್‌ನಲ್ಲಿ 88 ವರ್ಷದ ವ್ಯಕ್ತಿಯನ್ನು ಜರ್ಮನಿ ಮತ್ತು ಟರ್ಕಿ ರಕ್ಷಣಾ ಸಿಬ್ಬಂದಿ ರಕ್ಷಿಸಿದರು ಎಂದು ಮಾಧ್ಯಮಗಳು ವರದಿ ಮಾಡಿವೆ.

ಶಂಕಾಸ್ಪದ ‘ವಸ್ತು’ ಹೊಡೆದುರುಳಿಸಿದ ಅಮೆರಿಕ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಸೇನೆಯು ದೇಶದ ವಾಯುಗಡಿಯಲ್ಲಿ ಕಾಣಿಸಿಕೊಂಡಿದ್ದ ಅಪರಿಚಿತ ವಸ್ತುವನ್ನು ಹೊಡೆದುರುಳಿಸಿವೆ. ಈ ‘ವಸ್ತು’ ಕೆನಡಾ ವಾಯುಗಡಿಯಲ್ಲಿ ಕಾಣಿಸಿಕೊಂಡಿದ್ದ ರೀತಿಯದ್ದೇ ಆಗಿದೆ ಎಂದು ಹೇಳಿವೆ.

ಸೇನೆಯು ಎಫ್–16 ಯುದ್ಧ ವಿಮಾನದ ಮೂಲಕ, ವಾಯುಗಡಿ ಯಲ್ಲಿ ಸುಮಾರು 20 ಸಾವಿರ ಅಡಿ ಎತ್ತರದಲ್ಲಿ ಚಲನೆಯಲ್ಲಿದ್ದ ಅಪರಿಚಿತ ವಸ್ತುವನ್ನು ಗುರಿಯಾಗಿಸಿ ಎಐಎಂ9ಎಕ್ಸ್ ಅನ್ನು ಪ್ರಯೋಗಿಸಿ ನಾಶಪಡಿಸಲಾಗಿದೆ ಎಂದು ಪೆಂಟಗನ್‌ನ ಮಾಧ್ಯಮ ವಕ್ತಾರರು ತಿಳಿಸಿದ್ದಾರೆ.

ಅಪರಿಚಿತ ವಸ್ತು ಅಷ್ಟಕೋನ ಆಕೃತಿಯಲ್ಲಿ ಇದ್ದು, ಎರಡು ರೆಕ್ಕೆಗಳಿದ್ದವು. ಮೇಲ್ನೋಟಕ್ಕೆ ಇದು ಕಣ್ಗಾವಲು ಸಾಮರ್ಥ್ಯ ಹೊಂದಿತ್ತು ಎಂಬುದು ಖಚಿತವಾಗಿಲ್ಲ. ಆದರೆ, ಆ ಸಾಧ್ಯತೆಯನ್ನು ತಳ್ಳಿಹಾಕಲಾಗದು ಎಂದು ತಿಳಿಸಿದ್ದಾರೆ. ಅಟ್ಲಾಂಟಿಕ್ ಸಾಗರದಲ್ಲಿ ಚೀನಾದ ಕಣ್ಗಾವಲು ಬಲೂನ್ ಅನ್ನು ಹೊಡೆದುರುಳಿಸಿದ ನಂತರ ಅಮೆರಿಕ ಸೇನೆ ಹೊಡೆದುರುಳಿಸುತ್ತಿರುವ 3ನೇ ಅಪರಿಚಿತ ವಸ್ತು ಇದಾಗಿದೆ. ಈ ಹಿಂದೆ ಅಲಾಸ್ಕ ಮತ್ತು ಕೆನಡಾದ ವಾಯುಗಡಿ ಭಾಗದಲ್ಲಿ ಇಂಥದೇ ಶಂಕಾಸ್ಪದ ವಸ್ತುವನ್ನು ಸೇನೆಯು ಹೊಡೆದುರುಳಿಸಿತ್ತು.

ಬಲೂನ್ ಅನ್ನು ಚೀನಾ ಹಾರಿ ಬಿಟ್ಟಿತ್ತು ಎಂದು ಅಮೆರಿಕ ಹೇಳಿದ್ದರೂ, ನಂತರದ 3 ಅಪರಿಚಿತ ಶಂಕಾಸ್ಪದ ವಸ್ತುಗಳ ಮೂಲ ಹೇಳಿಲ್ಲ. ಅವಶೇಷಗಳನ್ನು ಸಂಗ್ರಹಿಸಲು ಸುಲಭವಾಗುವಂತೆ ಹಾಗೂ ಅವಶೇಷಗಳು ವಸತಿ ಪ್ರದೇಶದಲ್ಲಿ ಬೀಳ ದಂತೆ ಶಂಕಾಸ್ಪದ ವಸ್ತು ಹೊಡೆದು ರುಳಿಸಲು ಸ್ಥಳವನ್ನು ಗೊತ್ತುಪಡಿಸಲಾಗಿತ್ತು ಎಂದು ಸೇನೆ ತಿಳಿಸಿದೆ.

ಅಮೆರಿಕದ 10 ಬಲೂನ್ ಹಾರಾಟ–ಚೀನಾ

ಬೀಜಿಂಗ್ (ಎ.ಪಿ): ಅಮೆರಿಕದ ಸುಮಾರು 10 ಬಲೂನ್‌ಗಳು ತನ್ನ ವಾಯುಗಡಿ ಪರಿಮಿತಿಯಲ್ಲಿ ಎತ್ತರದ ಪ್ರದೇಶದಲ್ಲಿ ಕಳೆದ ಒಂದು ವರ್ಷದಿಂದ ಹಾರಾಡುತ್ತಿವೆ ಎಂದು ಚೀನಾ ಸೋಮವಾರ ಪ್ರತಿಪಾದಿಸಿದೆ.

ಚೀನಾ ತನ್ನ ಕಣ್ಗಾವಲು ಬಲೂನ್ ಅನ್ನು ತನ್ನ ವಾಯುಗಡಿಯಲ್ಲಿ ಹಾರಿಬಿಟ್ಟಿದೆ ಎಂದು ಅಮೆರಿಕ ಆರೋಪಿಸಿದ ಹಿಂದೆಯೇ ವಿದೇಶಾಂಗ ಸಚಿವಾಲಯದ ವಕ್ತಾರರು ಈ ಮಾತು ಹೇಳಿದ್ದಾರೆ. ಆದರೆ, ಬಲೂನ್‌ಗಳಿಗೂ ಮತ್ತು ಸರ್ಕಾರ ಅಥವಾ ಸೇನೆಗೆ ಸಂಬಂಧವಿದೆಯೇ, ಹೇಗೆ ನಿಭಾಯಿಸಲಾಗುವುದು ಎಂಬ ಬಗ್ಗೆ ಪ್ರತಿಕ್ರಿಯಿಸಲಿಲ್ಲ. ‘ಅಮೆರಿಕಕ್ಕೆ ಇತರೆ ದೇಶಗಳ ವಾಯುಗಡಿಗೆ ಬಲೂನ್ ಹಾರಿಬಿಡುವುದು ಸಾಮಾನ್ಯವಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಕ್ತಾರ ವಾಂಗ್ ವೆನ್‌ಬಿನ್ ಹೇಳಿದರು. ಚೀನಾದ ಪೂರ್ವಾನುಮತಿಯಿಲ್ಲದೇ ಒಂದು ವರ್ಷದಿಂದ ಹೀಗೆ ತನ್ನ ವಾಯು ಪರಿಮಿತಿಯಲ್ಲಿ 10 ಬಲೂನ್‌ಗಳು ಹಾರಾಟ ನಡೆಸಿವೆ’ ಎಂದರು.

ಈ ಮೊದಲು ಅಮೆರಿಕ ಹೊಡೆದುರುಳಿಸಿದ್ದ ಬಲೂನ್, ಹವಾಮಾನ ಸ್ಥಿತಿಗತಿ ಅಧ್ಯಯನಕ್ಕೆ ಹಾರಿಬಿಡಲಾಗಿದ್ದ ಮಾನವರಹಿತ ಏರ್‌ಶಿಪ್ ಆಗಿತ್ತು. ಇದನ್ನು ಹೊಡೆದುರುಳಿಸಿ ಅಮೆರಿಕ ಅತಿಯಾಗಿ ಹೇಳಿಕೊಳ್ಳುತ್ತಿದೆ ಎಂದರು. ಆ ಬೆಳವಣಿಗೆ ನಂತರ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕೆನ್ ಚೀನಾ ಪ್ರವಾಸ ರದ್ದುಪಡಿಸಿದ್ದರು.

ರಷ್ಯಾದಿಂದ ನಿರ್ಗಮಿಸಿ: ಅಮೆರಿಕ ಪ್ರಜೆಗಳಿಗೆ ಸೂಚನೆ

ಮಾಸ್ಕೊ (ರಾಯಿಟರ್ಸ್): ರಷ್ಯಾದಿಂದ ಆದಷ್ಟು ಬೇಗ ನಿರ್ಗಮಿಸಬೇಕು ಎಂದು ಅಮೆರಿಕ ತನ್ನ ಪ್ರಜೆಗಳಿಗೆ ಸೂಚಿಸಿದೆ. ಸದ್ಯದ ಸ್ಥಿತಿಯಲ್ಲಿ ರಷ್ಯಾಕ್ಕೆ ಪ್ರಯಾಣಿಸಬಾರದು ಎಂದೂ ಎಚ್ಚರಿಸಿದೆ.

ರಷ್ಯಾ– ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ರಷ್ಯಾ ಅಧಿಕಾರಿಗಳು ಸ್ವಯಂಪ್ರೇರಿತವಾಗಿ ಬಂಧಿಸಬಹುದು ಅಥವಾ ಕಿರುಕುಳ ನೀಡುವ ಸಾಧ್ಯತೆಗಳ ಹಿನ್ನೆಲೆಯಲ್ಲಿ ಈ ಎಚ್ಚರಿಕೆ ನೀಡಲಾಗಿದೆ ಎಂದು ಮಾಸ್ಕೊದಲ್ಲಿರುವ ಅಮೆರಿಕದ ರಾಯಭಾರ ಕಚೇರಿ ಸಲಹೆ ಮಾಡಿದೆ.

ಅಮೆರಿಕ ಪದೇ ಪದೇ ತನ್ನ ಪ್ರಜೆಗಳಿಗೆ ಇಂಥ ಎಚ್ಚರಿಕೆ ನೀಡುತ್ತಿದೆ. ಕಳೆದ ಸೆಪ್ಟೆಂಬರ್ ತಿಂಗಳಿನಲ್ಲೂ ಹೀಗೇ ಎಚ್ಚರಿಕೆ ನೀಡಲಾಗಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು

ಡಾ|| ಜೆ.ಎಲ್. ತಿಮ್ಮಯ್ಯ
14ನೇ ಫೆಬ್ರವರಿ 1990
ಪತ್ನಿ, ಕುಟುಂಬವರ್ಗದವರು ಮತ್ತು ಸ್ನೇಹಿತರು

ಏಳನೇ ವರ್ಷದ ಪುಣ್ಯಸ್ಮರಣೆ



ಪದ್ಮಶಾಲಿ ಕನಮಾಕಲು
ಶ್ರೀ ಕೆ.ಪಿ.ಎಂ. ನಂಜಪ್ಪನವರು
ವಿಜಯನಗರ, ಬೆಂಗಳೂರು.
ನಿಧನ: 14–02–2016
ಅಧ್ಯಕ್ಷರು: ಶ್ರೀ ಭಾವನಾಋಷಿ ಪದ್ಮಪೀಠ ಮಹಾಸಂಸ್ಥಾನ(ರಿ)
ಮಾಜಿ ಅಧ್ಯಕ್ಷರು: ಕರ್ನಾಟಕ ಪದ್ಮಶಾಲಿ ಸಂಘ
ಮಾಜಿ ಅಧ್ಯಕ್ಷರು: ಕೊಡಿಯಾಲದವರ ಪದ್ಮಶಾಲಿ ಸಂಘ
ಮಾಲೀಕರು: ಭುವನೇಶ್ವರಿ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್
ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ: ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100-56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858.

BANGALORE, INDIRA Nagara, HAL, Alassor 150years old Biggest/ Financial Group requires urgently Life planners, Financial Advisors, Business Associate, Development Officers & others. 30-65years, PUC+, Interview Tuesday 14th. Ph:8861636491/ 8277059719

ಬೆಂಗಳೂರು, ಇಂದಿರಾನಗರ, HAL, ಅಲ್ಸೂರ್ ಭಾರತದ ಅತೀ ದೊಡ್ಡ ಕಂಪೆನಿಯೊಂದರಲ್ಲಿ ಉದ್ಯೋಗಗಳು. PUC ಆಗಿರಬೇಕು. 30-70 ವರ್ಷಗಳು Part/ Fulltime, ಸಂದರ್ಶನ 14ನೇ ಮಂಗಳವಾರ. PH:8861636491/ 8277059719

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

Wanted

PART TIME work ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಬರವಣಿಗೆಯ ಮೂಲಕ ತಿಂಗಳಿಗೆ 12,000 ರಿಂದ 20,000ವರೆಗೂ ಸಂಪಾದಿಸಿ ಕೋರಿಯರ್ ಸೌಲಭ್ಯವಿದೆ 8749098879

WORK FROM HOME: ವಾರಕ್ಕೆ 10,000 ಸಂಪಾದನೆ, ಟೈಪಿಂಗ್ ವರ್ಕ್. ವಿದ್ಯಾರ್ಹತೆ: 10th Mobile /Laptop ಇದ್ದರೆ ಸಾಕು. 8660325376

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವ್ಯಾಪಾರ
Business Offers
Franchise

BUSINESS OFFER ಅತ್ಯುತ್ತಮ ಕೆಲಸದ ಸದಾವಕಾಶ!ನೋಂದಾಯಿತ ಕಂಪನಿಯ ಫ್ರಾಂಚೈಸ್/ಡಿಎಂಎ ಅಥವಾ ಏಜೆಂಟ್‌ಶಿಪ್ ಪಡೆದುಕೊಳ್ಳಿ!! ಉತ್ತಮ ವೇತನ ಮತ್ತು ಕಮಿಷನ್ ಕಾಲ್: 9779977427

ಭವಿಷ್ಯ
Astrology

ಸ್ತ್ರೀ ವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ, ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್, 8722756967.

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9844174018

PROPERTY CORNER

LAND FOR SALE
Converted Land, between Chelur-Chintamani on the Main Road, 2.5 KM from Chelur, situated in A.P. adjecent to New Milk Dairy, measuring approx 17000 Sq.ft FOR SALE.
Contact: 9980113969

★||ಶ್ರೀಕ್ಷೇತ್ರ ಧರ್ಮಸ್ಥಳದಿಂದ||★ ನೇರಪರಿಹಾರ ಉಚಿತ_ಸಲಹೆ ಖಚಿತ ಪರಿಹಾರ ನಿಮ್ಮಸಮಸ್ಯೆ ಏನೇಯಿರಲಿ ಎಷ್ಟೇಕಠಿಣವಾಗಿರಲಿ 3ದಿನದಲ್ಲಿ ಪರಿಹಾರ ಶತಸಿದ್ಧ. ಸಂಪರ್ಕಿಸಿ: ಮಂಜುನಾಥ್‌ಭಟ್ 9880522577

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ
Travel

ನಮ್ಮ ಕಾಶಿಯಾತ್ರೆಗೆ ಅಥವಾ ಮುಕ್ತಿನಾಥ ನೇಪಾಳ ಯಾತ್ರೆಗೆ ನಿಮ್ಮ ಹೆತ್ತವರನ್ನು ಕಳಿಸಿಕೊಡಿ. ಕಾಳಜಿಯಿಂದ ಪ್ರವಾಸ ಮಾಡಿಸುತ್ತೇವೆ. ನಾಲಂದಾ, ಕುಂದಾಪುರ 8310028157.

ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9880847001 9902008056 9342848791 ಕಾಶ್ಮೀರ್ ಪ್ರವಾಸ 6/ 10 ದಿನಗಳು 14.03.2023 28.03.2023 11.04.2023 25.04.2023 9.05.2023, 23.05.2023 ಸಿಮ್ಲಾ ಮನಾಲಿ ಪ್ರವಾಸ 7/ 12 ದಿನಗಳು. 14.03.2023 21.03.2023 11.04.2023 18.04.2023 09.05.2023 16.05.2023 ಪುರಿ,ಕಲ್ಕತ್ತಾ,ಡಾರ್ಜಿಲಿಂಗ್ ಪ್ರವಾಸ 11 ದಿನಗಳು. 16.03.2023 30.03.2023 13.04.2023 27.04.2023 11.05.2023 25.05.2023 ಉತ್ತರಭಾರತ ಪ್ರವಾಸ 10/11 ದಿನಗಳು. 7.03.2023 27.03.2023 4.04.2023 18.04.2023 16.05.2023 30.05.2023 ಚಾರ್‌ಧಾಮ್ 13 ದಿನಗಳು. 26.04.2023 03.05.2023 17.05.2023 07.06.2023 21.06.2023 ಮುಕ್ತಿನಾಥ 13 ದಿನಗಳು. 13.03.2023 27.03.2023 10.04.2023 24.04.2023 08.05.2023 26.05.2023

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5 ರಿಂದ 12ದಿನಗಳು 3-3-23 ದಾಂಡೇಲಿ, ಯಾಣ,ಶಿರಸಿ,ಸಿಗಂದೂರ್ 7100, 28-3-23 ಸಮಗ್ರ ಕೇರಳ 7600,11-4-23 ಸೋಮನಾಥ, ದ್ವಾರಕ,ಮಾತೃಗಯ, ಉಜ್ಜಯಿನಿ,ಓಂಕಾರೇಶ್ವರ ಇತ್ಯಾದಿ 17,000. 9448390735, 9449721678

10.04.2023 16.05.2023 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 08.03.2023 ದುಬೈ ಅಬುಧಾಬಿ 5 ದಿನಗಳು. 18.04.2023 09.05.2023 ನೇಪಾಳ 9 ದಿನಗಳು. 12.04.2023 20.05.2023 ಭೂತಾನ್ 8 ದಿನಗಳು. 02.04.2023. 08.05.2023 ಗ್ಯಾಂಗ್‌ಟಾಕ್,ಡಾರ್ಜಿಲಿಂಗ್ 6 ದಿನಗಳು. 12.04.2023. 16.05.2023 ಕಾಶ್ಮೀರ್ 6 ದಿನಗಳು. 05.04.2023 27.04.2023 ಶಿಮ್ಲಾ,ಮನಾಲಿ 8 ದಿನಗಳು. 17.03.2023 ರಾಜಸ್ಥಾನ್ 9 ದಿನಗಳು. 05.04.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248, 7022547922

ಪುಷ್ಕರಲು ಪ್ರಯುಕ್ತ 26/04/2023ರಿಂದ ವಿಮಾನದಲ್ಲಿ ಮತ್ತು AC ಬಸ್ಸಿನಲ್ಲಿ 6ದಿನಗಳ ಕಾಶಿ,ವಿಂಧ್ಯಾಚಲ, ಗಯಾ,ಅಲಹಾಬಾದ್ ಸೀತಾಮಡು,ಬುದ್ಧಗಯಾ ಹಾಗೂ 30/06/2023ರಿಂದ 12/19 ದಿನಗಳ ಅಮರನಾಥ್ ವೈಷ್ಣೋದೇವಿ,ಕಾಶ್ಮೀರ,ಅಮೃತಸರ್ ಮಾರ್ಚ್ 31ಒಳಗೆ ಬುಕ್ ಮಾಡಿದರೆ 10% ರಿಯಾಯಿತಿ ದೊರೆಯುತ್ತದೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್: 8105657052/ 9480182865 (ಷಣ್ಮುಗಾನಂದ)

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
BOOK YOUR CLASSIFIEDS ONLINE ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH MATRI AUTO ASTRO NOTICE TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 9886213331 080 - 45557163 / 164
Email: dhclassifieds@deccanherald.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,856
ಇಂದಿನ ಅಂತ್ಯ	17,770
▼	85
ದಿನದ ಕನಿಷ್ಠ	17,880

ವಿನಿಮಯ ದರ

£ ಪೌಂಡ್	99.64
€ ಯುರೊ	83.3
¥ ಯೆನ್ (100ಕ್ಕೆ)	62.29

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1650)
ಸೋಯಾ (ರಿಫೈನ್ಡ್)	₹1170 (1160)
ಸೂರ್ಯಕಾಂತಿ (ರಿಫೈನ್ಡ್)	₹1175 (1170)
ಪಾಮೋಲಿನ್	₹965 (970)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹700-1000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹141
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹130.50

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹450-685
ದ್ವಿತಳಿ (ಬಿ.ವಿ)	₹205-783

ಹೊಸ ಸಂಗ್ರಹ ಬಿಡುಗಡೆ ಮಾಡಿದ ರಿಲಯನ್ಸ್ ಜುವೆಲ್ಸ್

ಬೆಂಗಳೂರು: ದೇಶದ ಪ್ರಮುಖ ಆಭರಣ ಮಾರಾಟ ಕಂಪನಿಯಾಗಿರುವ ರಿಲಯನ್ಸ್ ಜುವೆಲ್ಸ್, ಪ್ರೇಮಿಗಳ ದಿನದ ಸಂದರ್ಭದಲ್ಲಿ ವಜ್ರದ ಆಭರಣಗಳ ಹೊಸ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ಪೆಂಡೆಂಟ್, ಬ್ರೇಸ್‌ಲೆಟ್, ಉಂಗುರಗಳು ಈ ಸಂಗ್ರಹದಲ್ಲಿ ಲಭ್ಯವಿರಲಿವೆ. ಹಬ್ಬದ ಸಂದರ್ಭಗಳಿಗೆ, ಕಚೇರಿಗೆ ಮತ್ತು ಪಾರ್ಟಿಗಳಿಗೆ ಈ ವಿನ್ಯಾಸಗಳು ಚೆನ್ನಾಗಿ ಒಪ್ಪುತ್ತವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ಐಜಿಐ ಹಾಗೂ ಅಂತರರಾಷ್ಟ್ರೀಯ ಮಾನ್ಯತೆ ಪಡೆದಿರುವ ವಜ್ರವನ್ನು ಇದರಲ್ಲಿ ಅಳವಡಿಸಲಾಗಿದೆ.

ಹೊಸ ಸಂಗ್ರಹದ ಜೊತೆಯಲ್ಲೇ ರಿಲಯನ್ಸ್ ಜುವೆಲ್ಸ್, ವಿಶೇಷ ರಿಯಾಯಿತಿ ಕೊಡುಗೆಗಳನ್ನು ಘೋಷಿಸಿದೆ. ಇದು ಮಂಗಳವಾರದವರೆಗೆ ಜಾರಿಯಲ್ಲಿ ಇರಲಿದ್ದು, ವಜ್ರದ ಉತ್ಪನ್ನಗಳ ಇನ್‌ವಾಯ್ಸ್ ಮೌಲ್ಯದ ಮೇಲೆ ಶೇ 25ರಷ್ಟು ರಿಯಾಯಿತಿ ಸಿಗಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	700 - 750
ಹೆರಕಿದ್ದು	1,150-1,200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,350-1,450
ಕಾಳು ಮೆಣಸು	485

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಚನ್ನಗಿರಿ	
ರಾಶಿ	44899-46800
ಚಿತ್ರದುರ್ಗ	
ಆಪಿ	45719-46129
ಬೆಟ್ಟೆ	35059-35499
ಕೆಂಪುಗೋಟು	30000-30400
ರಾಶಿ	45239-45669
ಹೊನ್ನಾಳಿ	
ರಾಶಿ	45099-45099
ಕಾರ್ಕಳ	
ಹೊಸತು	30000-40000
ಹಳತು	40000-54500
ಕುಮಟಾ	
ಚಿಪ್ಪು	26809-31089
ಕೋಕ	16869-29009
ಫ್ಯಾಕ್ಟರಿ	11099-19629
ಹಳೆಚಾಲಿ	34809-37609
ಹೊಸಚಾಲಿ	33269-35209
ಸಾಗರ	
ಬಿಳಿಗೋಟು	24229-30599
ಚಾಲಿ	32500-36199
ಕೋಕ	27989-27989
ಕೆಂಪುಗೋಟು	30199-36899
ರಾಶಿ	34989-45799
ಸಿಪ್ಪೆಗೋಟು	17789-18589
ಶಿವಮೊಗ್ಗ	
ಬೆಟ್ಟೆ	46779-52269
ಗೊರಬಲು	16009-33786
ರಾಶಿ	39000-45799
ಸರಕು	44100-80796
ಸಿದ್ದಾಪುರ	
ಬಿಳಿಗೋಟು	27699-32699
ಚಾಲಿ	36829-38899
ಕೋಕ	2669-29799
ಹೊಸಚಾಲಿ	31889-34899
ಕೆಂಪುಗೋಟು	30889-36469
ರಾಶಿ	42359-45599
ತಟ್ಟಿಬೆಟ್ಟೆ	36419-44399
ಶಿರಸಿ	
ಬೆಟ್ಟೆ	34699-44099
ಬಿಳಿಗೋಟು	26399-33699
ಚಾಲಿ	31299-40799
ಕೆಂಪುಗೋಟು	26309-34199
ರಾಶಿ	41599-46299
ಯಲ್ಲಾಪುರ	
ಆಪಿ	51000-55965
ಬಿಳಿಗೋಟು	22812-32316
ಕೋಕ	16899-30212
ಹಳೆಚಾಲಿ	37599-40333
ಹೊಸಚಾಲಿ	33026-37625
ಕೆಂಪುಗೋಟು	26899-34199
ರಾಶಿ	41750-50009
ತಟ್ಟಿಬೆಟ್ಟೆ	37870-44612

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	15000	14900	173.70 ಸೆಂಟ್ಸ್
ಎಸಿ	7280	7250	6700	
ಆರ್‌ಪಿ	10250	10000	9900	ಲಂಡನ್
ಆರ್‌ಸಿ	5100	185	4900	2037ಡಾಲರ್ಸ್

ಅದಾನಿ ಎಫ್‌ಪಿಒ: ಕೇಂದ್ರಕ್ಕೆ ವಿವರ ನೀಡಲಿರುವ ಸೆಬಿ

ಮುಂಬೈ (ರಾಯಿಟರ್ಸ್): ಅದಾನಿ ಎಂಟರ್‌ಪ್ರೈಸಸ್‌ನ ಷೇರು ಮಾರಾಟ ಪ್ರಕ್ರಿಯೆಯ (ಎಫ್‌ಪಿಒ) ಕುರಿತು ನಡೆಸಿರುವ ತನಿಖೆಯ ವಿವರಗಳನ್ನು ಭಾರತೀಯ ಷೇರು ಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಕೇಂದ್ರ ಹಣಕಾಸು ಸಚಿವಾಲಯದ ಜೊತೆ ಬುಧವಾರ ಹಂಚಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ. ಎಫ್‌ಪಿಒ ಪ್ರಕ್ರಿಯೆಯನ್ನು ಕಂಪನಿಯು ಹಿಂದಕ್ಕೆ ಪಡೆದಿದೆ.

ಸೆಬಿ ಅಧಿಕಾರಿಗಳು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಬುಧವಾರ ಭೇಟಿ ಮಾಡಲಿದ್ದಾರೆ. ಅದಾನಿ ಸಮೂಹದ ಷೇರುಗಳ ಮೌಲ್ಯ ಈಚೆಗೆ ಕುಸಿದ ಸಂದರ್ಭದಲ್ಲಿ ವಿಚಕ್ಷಣೆಗೆ ಕೈಗೊಂಡ ಕ್ರಮಗಳ ಬಗ್ಗೆಯೂ ಸೆಬಿ ವಿವರ ನೀಡಲಿದೆ. ಈ ವಿಚಾರವಾಗಿ ಸೆಬಿ ಕಡೆಯಿಂದ ಪ್ರತಿಕ್ರಿಯೆ ದೊರೆತಿಲ್ಲ.

ಕೊಬ್ಬರಿ ಧಾರಣೆ

ಮಂಗಳೂರು	₹8300-8300
ಪುತ್ತೂರು	₹4100-5500
ತುರುವೇಕೆರೆ	₹10500-10500

ಮುಂಬೈ ಧಾರಣೆ

ಶೇಂಗಾ

13-2-2023

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	11000-11050
ದಪ್ಪ ಮಧ್ಯಪ್ರದೇಶ(ಹೊಸ)	11050-11150
ದಪ್ಪ ಗುಜರಾತ್(ಹೊಸ)	11850-11950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1660)
ಒಂದು ವಾರದ ಡೆಲಿವರಿ	1685 (1655)
ಸೋಯಾ ಕಚ್ಚಾ	1080 (1070)
ಪಾಮ್ ವಾರದ ಡೆಲಿವರಿ	963 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	1070 (1070)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,750 (56,900)
ಬೆಳ್ಳಿ ಕೆ.ಜಿ 66,350 (66,550)

ಆವರಣದಲ್ಲಿ ಶನಿವಾರದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದೆಹಲಿ ಮೇಯರ್ ಚುನಾವಣೆ: ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ತೀರ್ಪು

ನಾಮನಿರ್ದೇಶಿತ ಸದಸ್ಯರಿಗೆ ಮತ ಹಕ್ಕಿಲ್ಲ

ನವದೆಹಲಿ (ಪಿಟಿಐ): 'ಮಹಾನಗರ ಪಾಲಿಕೆಯ ಮೇಯರ್ ಚುನಾವಣೆಯಲ್ಲಿ ನಾಮನಿರ್ದೇಶಿತ ಸದಸ್ಯರು ಮತ ಚಲಾಯಿಸುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ದೆಹಲಿಯ ಆಮ್ ಆದ್ಮಿ ಪಕ್ಷದ (ಎಎಪಿ) ಮೇಯರ್ ಅಭ್ಯರ್ಥಿ ಶೆಲ್ಲಿ ಒಬೆರಾಯ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ, 'ನಾಮನಿರ್ದೇಶಿತ ಸದಸ್ಯರು ಮತ ಚಲಾಯಿಸುವಂತಿಲ್ಲ ಎಂಬುದನ್ನು ಸಾಂವಿಧಾನಿಕ ನಿಬಂಧನೆಗಳಲ್ಲೇ ಸ್ಪಷ್ಟಪಡಿಸಲಾಗಿದೆ' ಎಂದು ತಿಳಿಸಿತು.

ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ (ಎಎಸ್‌ಜಿ) ಸಂಜಯ್ ಜೈನ್, 'ಇದೇ 16ರಂದು ನಿಗದಿಯಾಗಿರುವ ಮೇಯರ್ ಚುನಾವಣೆಯನ್ನು17ರ ನಂತರ ನಡೆಸಬೇಕು' ಎಂದು ಮನವಿ ಮಾಡಿದರು. ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ. ಪಾರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು ಅವರ ಮನವಿಯನ್ನು ಮಾನ್ಯ ಮಾಡಿತು.

'ನಾಮನಿರ್ದೇಶಿತ ಸದಸ್ಯರು ಮತ ಚಲಾಯಿಸುವಂತಿಲ್ಲ. ಇದನ್ನು ಸ್ಪಷ್ಟವಾಗಿಯೇ ತಿಳಿಸಲಾಗಿದೆ ಜೈನ್ ಅವರೇ' ಎಂದು ಮುಖ್ಯ ನ್ಯಾಯಮೂರ್ತಿಯವರು ಎಎಸ್‌ಜಿಗೆ ತಿಳಿಸಿದರು. ಈ ವಿಚಾರದ ಕುರಿತು ವಾದ ಮಂಡಿಸಲು ನನಗೆ ಸ್ವಲ್ಪ ಕಾಲಾವಕಾಶ ನೀಡಿ ಎಂದು ಜೈನ್ ಅವರು ನ್ಯಾಯಪೀಠಕ್ಕೆ ಕೋರಿದರು.

ಎಎಪಿ ಮುಖಂಡರೊಬ್ಬರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು, 'ಮೂರು ಬಾರಿ ಸಭೆ ನಡೆಸಿ ಚರ್ಚಿಸಿದರೂ ಮೇಯರ್ ಚುನಾವಣೆ ನಡೆಸಿಲ್ಲ' ಎಂದು ಹೇಳಿದರು.

'ದೆಹಲಿ ಮಹಾನಗರ ಪಾಲಿಕೆಯ ಹಂಗಾಮಿ ಅಧ್ಯಕ್ಷರು ಮೇಯರ್, ಉಪ ಮೇಯರ್ ಮತ್ತು ಸ್ಥಾಯಿ ಸಮಿತಿ ಸದಸ್ಯರ ಚುನಾವಣೆಯನ್ನು ಏಕಕಾಲಕ್ಕೆ ನಡೆಸುವಂತೆ ಒತ್ತಡ ಹೇರುತ್ತಿದ್ದಾರೆ. ಇದು ದೆಹಲಿ ಮಹಾನಗರ ಪಾಲಿಕೆ ಕಾಯ್ದೆಗೆ ವಿರುದ್ಧವಾಗಿದೆ. ಇದನ್ನು ನಾವು ವಿರೋಧಿಸುತ್ತೇವೆ' ಎಂದರು.

'ನಾಮನಿರ್ದೇಶಿತ ಸದಸ್ಯರಿಗೆ ಮೇಯರ್ ಚುನಾವಣೆಯಲ್ಲಿ ಮತ ಚಲಾಯಿಸಲು ಅವಕಾಶ ನೀಡಬಾರದು. ಮೇಯರ್, ಉಪ ಮೇಯರ್ ಹಾಗೂ ಸ್ಥಾಯಿ ಸಮಿತಿಗೆ ಪ್ರತ್ಯೇಕವಾಗಿ ಚುನಾವಣೆ ನಡೆಸುವಂತೆ ನಿರ್ದೇಶನ ನೀಡಬೇಕು' ಎಂದು ಒಬೆರಾಯ್ ಅವರ ಪರ ವಕೀಲ ಶಾದನ್ ಫರಾಸತ್ ಅವರು ನ್ಯಾಯಪೀಠಕ್ಕೆ ಮನವಿ ಮಾಡಿದರು.

'ನಾಮನಿರ್ದೇಶಿತ ಸದಸ್ಯರು ಮತ ಚಲಾಯಿಸುವುದಕ್ಕೆ ಸಂವಿಧಾನದ 236-ಆರ್ ನೇ ವಿಧಿಯಲ್ಲಿ ಅವಕಾಶ ಇಲ್ಲ. ಹೀಗಿದ್ದರೂ ಅವರಿಗೆ ಮತದಾನದ ಅವಕಾಶ ಕಲ್ಪಿಸುವುದಾಗಿ ಹಂಗಾಮಿ ಅಧ್ಯಕ್ಷರು ಹೇಳುತ್ತಿದ್ದಾರೆ. ಹೀಗಾಗಿ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು' ಎಂದು ಸಿಂಘ್ವಿ ಅವರು ಈ ಹಿಂದೆ ನ್ಯಾಯಪೀಠಕ್ಕೆ ಕೋರಿದ್ದರು.

ಉಭಯ ಬಣದವರ ವಾದ ಆಲಿಸಿದ ನ್ಯಾಯಪೀಠವು ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ಎಎಪಿ–ಬಿಜೆಪಿ ವಾಕ್ಸಮರ

ಸುಪ್ರೀಂ ಕೋರ್ಟ್ ತೀರ್ಪಿನ ಬೆನ್ನಲ್ಲೇ ಎಎಪಿ ಹಾಗೂ ಬಿಜೆಪಿ ಮುಖಂಡರು ವಾಕ್ಸಮರ ನಡೆಸಿದ್ದಾರೆ.

'ಬಿಜೆಪಿಯು ದೆಹಲಿ ಮಹಾನಗರ ಪಾಲಿಕೆಯಲ್ಲಿ ಅಧಿಕಾರದ ಗದ್ದುಗೆ ಏರಲು ವಾಮ ಮಾರ್ಗ ಅನುಸರಿಸುತ್ತಿದೆ' ಎಂದು ಎಎಪಿ ಆರೋಪಿಸಿದೆ. ಎಎಪಿ ಆರೋಪಕ್ಕೆ ಬಿಜೆಪಿಯೂ ತಿರುಗೇಟು ನೀಡಿದೆ.

'ಪ್ರಭಾಕರನ್ ಕಾಣಿಸಿಕೊಳ್ಳಲು ಸಕಾಲ'

ತಮಿಳು ರಾಷ್ಟ್ರೀಯವಾದಿ ನಾಯಕ ಪಳ ನೆಡುಮಾರನ್ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ತಂಜಾವೂರು, ತಮಿಳುನಾಡು (ಪಿಟಿಐ): 'ಲಿಬರೇಶನ್ ಟೈಗರ್ಸ್ ಆಫ್ ತಮಿಳ್ ಈಳಂ (ಎಲ್‌ಟಿಟಿಇ) ನಾಯಕ ವೇಲುಪಿಳ್ಳೈ ಪ್ರಭಾಕರನ್ ಆರೋಗ್ಯವಾಗಿದ್ದಾರೆಮತ್ತುಬಹಿರಂಗವಾಗಿಕಾಣಿಸಿಕೊಳ್ಳಲು ಈ ಸಂದರ್ಭ ಪೂರಕವಾಗಿದೆ' ಎಂದು ತಮಿಳು ರಾಷ್ಟ್ರೀಯವಾದಿ ನಾಯಕ ಪಳ ನೆಡುಮಾರನ್ ಹೇಳಿದ್ದಾರೆ.

'ಅಂತರರಾಷ್ಟ್ರೀಯ (ರಾಜಕೀಯ) ವಾತಾವರಣ ಮತ್ತು ಶ್ರೀಲಂಕಾದಲ್ಲಿ ಸಿಂಹಳೀಯರು ರಾಜಪಕ್ಸೆಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವುದು ಪ್ರಭಾಕರನ್ ಬಹಿರಂಗವಾಗಿ ಕಾಣಿಸಿಕೊಳ್ಳಲು ಸೂಕ್ತ ವಾತಾವರಣ ಸೃಷ್ಟಿಸಿದೆ' ಎಂದು ಅವರು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಈ ಘೋಷಣೆಯು ಅವರ (ಪ್ರಭಾಕರನ್) ಬಗ್ಗೆ ಹಬ್ಬಿದ್ದ ಅನುಮಾನಗಳನ್ನು ಕೊನೆಗೊಳಿಸುತ್ತದೆ. ಪ್ರಭಾಕರನ್ ಶೀಘ್ರದಲ್ಲೇ ಶ್ರೀಲಂಕಾದಲ್ಲಿ ತಮಿಳರಿಗಾಗಿ ಯೋಜನೆ ಘೋಷಿಸಲು ಸಜ್ಜಾಗಿದ್ದಾರೆ. ವಿಶ್ವದ ಎಲ್ಲಾ ತಮಿಳರು ಅವರನ್ನು ಬೆಂಬಲಿಸಬೇಕು ಎಂದು ತಿಳಿಸಿದರು.

ಪ್ರಭಾಕರನ್

ಎಲ್‌ಟಿಟಿಇ ಪ್ರಬಲವಾಗಿರುವವರೆಗೂ ಶ್ರೀಲಂಕಾದಲ್ಲಿ ತಮ್ಮ ಹಿಡಿತದಲ್ಲಿರುವ ಪ್ರದೇಶಗಳಲ್ಲಿ ಭಾರತಕ್ಕೆ ವಿರುದ್ಧವಾದ ಯಾವುದೇ ಶಕ್ತಿಗಳಿಗೆ ಹಿಡಿತ ಸಾಧಿಸಲು ಅವರು ಅವಕಾಶ ನೀಡಲಿಲ್ಲ. ಅಲ್ಲದೆ, ಭಾರತವನ್ನು ವಿರೋಧಿಸುವ ರಾಷ್ಟ್ರಗಳಿಂದ ಯಾವುದೇ ಬೆಂಬಲ ಪಡೆದಿಲ್ಲ ಎಂದರು.

2009ರಲ್ಲಿ ಶ್ರೀಲಂಕಾ ಸೇನೆ ಮತ್ತು ಎಲ್‌ಟಿಟಿಇ ನಡುವಿನ ಯುದ್ಧದಲ್ಲಿ ಪ್ರಭಾಕರನ್ ಹತ್ಯೆಯಾಗಿದ್ದನ್ನು ಸ್ಮರಿಸಬಹುದು.

ಪ್ರಭಾಕರನ್ ಹತ್ಯೆ, ಸಾಕಷ್ಟು ಪುರಾವೆಗಳಿವೆ: ಶ್ರೀಲಂಕಾ ಸೇನೆ

ಚೆನ್ನೈ: 'ಎಲ್‌ಟಿಟಿಇ ನಾಯಕ ಪ್ರಭಾಕರನ್ ಜೀವಂತವಾಗಿದ್ದಾರೆ' ಎಂಬ ನೆಡುಮಾರನ್ ಹೇಳಿಕೆಯನ್ನು ತಳ್ಳಿ ಹಾಕಿರುವ ಶ್ರೀಲಂಕಾ ಸೇನೆ, ನಾಗರಿಕ ಯುದ್ಧದ ಕೊನೆಯ ಹಂತದಲ್ಲಿ ಪ್ರಭಾಕರನ್ ಹತ್ಯೆಗೀಡಾಗಿದ್ದ ಎಂಬುದನ್ನು ಸಾಬೀತುಪಡಿಸಲು ಛಾಯಾಚಿತ್ರಗಳು ಸೇರಿದಂತೆ ಸಾಕಷ್ಟು ಪುರಾವೆಗಳಿವೆ ಎಂದು ತಿಳಿಸಿದೆ.

ಶ್ರೀಲಂಕಾ ಸೇನಾ ವಕ್ತಾರ ಬ್ರಿಗೇಡಿಯರ್ ರವಿ ಹೆರಾತ್, '2009 ರಲ್ಲಿ ನಡೆದ ನಾಗರಿಕ ಯುದ್ಧದ ಕೊನೆಯ ಹಂತದಲ್ಲಿ ಪ್ರಭಾಕರನ್ ಹತ್ಯೆಗೀಡಾದ ಎಂಬುದಕ್ಕೆ ತಮ್ಮ ಬಳಿ ಡಿಎನ್‌ಎ ಪುರಾವೆಗಳೂ ಇವೆ' ಎಂದು ಹೇಳಿದ್ದಾರೆ.

ಎಲ್‌ಟಿಟಿಇಯ ಅಂತರರಾಷ್ಟ್ರೀಯ ರಾಜತಾಂತ್ರಿಕ ಸಂಬಂಧಗಳ ಮುಖ್ಯಸ್ಥ ಸೆಲ್ವರಸ ಪದ್ಮನಾಥನ್ ಅವರು 2009ರ ಮೇ 24 ರಂದು ಪ್ರಭಾಕರನ್ ಹುತಾತ್ಮರಾದರು ಎಂದು ಘೋಷಿಸಿದ್ದರು.

ಪ್ರಭಾಕರನ್ ಅವರನ್ನು ಭೇಟಿಯಾಗಲು ಉತ್ತರ ಶ್ರೀಲಂಕಾಕ್ಕೆ ಹಲವಾರು ಬಾರಿ ನುಸುಳಿದ್ದ ವೈಕೋ ಸಹ ನೆಡುಮಾರನ್ ಅವರ ಹೇಳಿಕೆಯನ್ನು ತಳ್ಳಿ ಹಾಕಿದ್ದಾರೆ.

ರಕ್ಷಣಾ ರಫ್ತು: 2024ಕ್ಕೆ ₹41 ಸಾವಿರ ಕೋಟಿ ಗುರಿ

ಒಂದನೇ ಪುಟದಿಂದ...

ಭಾರತಕ್ಕೆ ವಿವಿಧ ರಕ್ಷಣಾ ಉತ್ಪನ್ನಗಳನ್ನು ಮಾರಾಟಕ್ಕೆ ಮಾಡಲು ಈ ವೇದಿಕೆಯನ್ನು ಬಳಸಿಕೊಳ್ಳಲಾಗುತ್ತಿತ್ತು. ಕೆಲವೇ ವರ್ಷಗಳಲ್ಲಿ ಈ ಸನ್ನಿವೇಶ ಸಂಪೂರ್ಣ ಬದಲಾಗಿದೆ. ಏರೋ ಇಂಡಿಯಾ ಕೇವಲ ಪ್ರದರ್ಶನವಲ್ಲ. ಇದು ಭಾರತದ ಶಕ್ತಿ, ಸಾಮರ್ಥ್ಯ ಮತ್ತು ಆತ್ಮವಿಶ್ವಾಸ ಹಾಗೂ ಆಶೋತ್ತರಗಳನ್ನು ಬಿಂಬಿಸುತ್ತಿದೆ' ಎಂದು ಸಮರ್ಥಿಸಿಕೊಂಡರು.

'ಈ ಬಾರಿಯ ಏರೋ ಇಂಡಿಯಾದಲ್ಲಿ 100 ದೇಶಗಳು ಭಾಗವಹಿಸುತ್ತಿರುವುದು ಭಾರತದ ಮೇಲೆ ಜಗತ್ತು ಇರಿಸಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ. 800ಕ್ಕೂ ಹೆಚ್ಚು ಪ್ರದರ್ಶಕರು ಸಹ ಭಾಗವಹಿಸುತ್ತಿದ್ದಾರೆ. ಹೀಗಾಗಿ, ಇದು ಹೊಸ ದಾಖಲೆಯಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತನಾಡಿ, 'ಭಾರತದಲ್ಲಿ ವೈಮಾಂತರಿಕ್ಷ ಕ್ಷೇತ್ರದ ಬೆಳವಣಿಗೆಗೆ ಏರೋ ಇಂಡಿಯಾ ಉತ್ತೇಜನ ನೀಡಲಿದೆ' ಎಂದರು.

ಬೆಂಗಳೂರಿನಲ್ಲಿ ಆಯೋಜಿಸಲಾಗಿರುವ 'ಏರೋ ಇಂಡಿಯಾ–2023'ರಲ್ಲಿ ಸೋಮವಾರ ಸೂರ್ಯಕಿರಣ್ ವಿಮಾನಗಳ ಕಸರತ್ತು ಗಮನ ಸೆಳೆಯಿತು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಎಫ್–35' ಭಾಗಿ

ಅಮೆರಿಕದ ಅಲಾಸ್ಕಾ ಮತ್ತು ಉತಾಹ್ ವಾಯು ನೆಲೆಗಳಿಂದ ಸೂಪರ್‌ಸಾನಿಕ್ ಬಹುಮಾದರಿಯ ಎರಡು 'ಎಫ್–35' ಯುದ್ಧ ವಿಮಾನಗಳು ಸೋಮವಾರ ಯಲಹಂಕ ವಾಯು ನೆಲೆಗೆ ಬಂದಿಳಿದಿವೆ. ಈ ವಿಮಾನಗಳು ವೈಮಾನಿಕ ಪ್ರದರ್ಶನಕ್ಕೆ ಮತ್ತಷ್ಟು ಮೆರುಗು ತರಲಿವೆ. ಕರಾರುವಕ್ಕಾಗಿ ದಾಳಿ ನಡೆಸುವ ಸಾಮರ್ಥ್ಯಕ್ಕೆ ಇವು ಖ್ಯಾತಿ.

ಇಲ್ಲಿಗೆ ಬಂದಿವೆ. ಎಫ್–35 ಯುದ್ಧ ವಿಮಾನವನ್ನು ಲಾಕ್‌ಹೀಡ್ ಮಾರ್ಟಿನ್ ಕಂಪನಿ ತಯಾರಿಸಿದೆ.

ಇವುಗಳ ಜತೆಗೆ, ಎಫ್–16, ಬೋಯಿಂಗ್ ಎಫ್/ಎ–18ಇ ಮತ್ತು ಎಫ್/ಎ–18ಎಫ್ ಯುದ್ಧ ವಿಮಾನ ಸಹ ಪ್ರದರ್ಶನದಲ್ಲಿ ಭಾಗಿಯಾಗಲಿದೆ.

ಆಗಸದಲ್ಲಿ ಉಕ್ಕಿನ ಹಕ್ಕಿಗಳ ಕಾರುಬಾರು

ಶುಭ್ರ ಆಗಸಕ್ಕೆ ಮಿಂಚಿನ ವೇಗದಲ್ಲಿ ನೆಗೆದ ಲೋಹದ ಹಕ್ಕಿಗಳ ಚಮತ್ಕಾರಿ ಪ್ರದರ್ಶನ, ಧೂಮದ ರಂಗೋಲಿಯ ಬಿಡಿಸುವ ಹೆಲಿಕಾಪ್ಟರ್‌ಗಳು, ಬೆರಗುಗೊಳಿಸುವ ಹಾರಾಟ ಪ್ರದರ್ಶನ....

'ಏರೋ ಇಂಡಿಯಾ–2023'ರ ಉದ್ಘಾಟನಾ ಸಮಾರಂಭದಲ್ಲಿ ಲೋಹದ ಹಕ್ಕಿಗಳು ಚಿತ್ತಾರ ಬಿಡಿಸಿ, ನೋಡುಗರನ್ನು ಬೆರಗುಗೊಳಿಸಿದವು.

'ಏರೋ ಇಂಡಿಯಾ'ಗೆ ಚಾಲನೆ ನೀಡಲು ಪ್ರಧಾನಿ ಮೋದಿ ವೇದಿಕೆ ಬಳಿ ಆಗಮಿಸುತ್ತಿದ್ದಂತೆ ರಾಷ್ಟ್ರ ಧ್ವಜ, ಭಾರತೀಯ ವಾಯು ಪಡೆಯ ಧ್ವಜ, ಜಿ–20 ಧ್ವಜ ಮತ್ತು ಏರೋ ಇಂಡಿಯಾ ಧ್ವಜಗಳನ್ನು ಸಾಗಿದ ಹೆಲಿಕಾಪ್ಟರ್‌ಗಳು ವೈಮಾನಿಕ ಪ್ರದರ್ಶನದ 14ನೇ ಆವೃತ್ತಿಗೆ ಮುನ್ನುಡಿ ಬರೆದವು. ನಂತರ, ಸೂರ್ಯಕಿರಣ ವಿಮಾನಗಳ ಕಸರತ್ತು ರೋಮಾಂಚನಗೊಳಿಸಿತು. ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ನೇತೃತ್ವದ ತಂಡ 'ಗುರು' ಮತ್ತು 'ದ್ರೋಣಾಚಾರ್ಯರ 'ಗುರುಕುಲ' ರಚನೆಯ ಹಾರಾಟ ಪ್ರದರ್ಶನ ರೋಮಾಂಚನಗೊಳಿಸಿತು.

ಎಚ್‌ಎಎಲ್ ನಿರ್ಮಿಸಿದ ಲಘು ಯುದ್ಧ ಹೆಲಿಕಾಪ್ಟರ್ 'ಪ್ರಚಂಡ' ತನ್ನ ಸಾಮರ್ಥ್ಯವನ್ನು ವಿವಿಧ ಆಯಾಮಗಳಲ್ಲಿ ಪ್ರದರ್ಶಿಸಿತು. ಮುಂದೆ ಸಾಗಿದಷ್ಟೇ ವೇಗದಲ್ಲಿ ಹಿಮ್ಮುಖವಾಗಿಯೂ ವಿಂಗ್ ಕಮಾಂಡರ್ ರಾಜೀವ್ ದುಬೆ ಚಲಾಯಿಸಿದರು. ಸುಖೋಯಿ–30, ಮಿಗ್ ಯುದ್ಧ ವಿಮಾನಗಳು, ತೇಜಸ್ ಯುದ್ಧ ವಿಮಾನಗಳು ಸಹ ಬೆರಗುಗೊಳಿಸಿದವು. ಈ ಎಲ್ಲ ಕಸರತ್ತುಗಳನ್ನು ಪ್ರಧಾನಿ ಅವರು ಮುಂಚೂಣಿಯಲ್ಲಿ ಒಬ್ಬರೇ ಕುಳಿತು ವೀಕ್ಷಿಸಿದರು.

ನಂತರ, ವೇದಿಕೆ ಕಾರ್ಯಕ್ರಮದಲ್ಲಿ 'ಏರೋ ಇಂಡಿಯಾ–2023' ಅಂಚೆ ಚೀಟಿಯನ್ನು ಪ್ರಧಾನಿ ಬಿಡುಗಡೆಗೊಳಿಸಿ, ಭಾಷಣ ಮಾಡಿದರು. ಉದ್ಘಾಟನಾ ಸಮಾರಂಭದ ಔಪಚಾರಿಕತೆ ಮುಗಿಯುತ್ತಿದ್ದಂತೆಯೇ ವಾಯುನೆಲೆಯ ಮೇಲಿನ ಆಗಸದಲ್ಲಿ ಮತ್ತೊಮ್ಮೆ ಕಣ್ಣಿಗೆ ಹಬ್ಬವೇ ಸೃಷ್ಟಿಯಾಯಿತು.

ನಭಕ್ಕೆ ಮತ್ತೆ ಸುಖೋಯ್–30 ವಿಮಾನ ನೆಗೆಯಿತು. ಪೈಲಟ್‌ಗಳು ಹಾರಾಟದ ಕೌಶಲವನ್ನು ಪ್ರದರ್ಶಿಸಿದರು. ವಿವಿಧ ಲೋಹದ ಹಕ್ಕಿಗಳು ಒಂದೇ ಸಮನೆ ಮೇಲಕ್ಕೇರಿ ಆಗಸದ ಗರ್ಭದೊಳಗೆ ನುಸುಳಿ ಅಂಬರದಲ್ಲಿ ಉರುಳಾಡುತ್ತಲೇ ರುದ್ರ ನರ್ತನ ಮಾಡಿದವು. ಯುದ್ಧ ವಿಮಾನಗಳ ಘರ್ಜನೆಯಂತೂ ಪ್ರೇಕ್ಷಕರು ಮೈನವಿರೇಳುವಂತೆ ಮಾಡಿತು. ತುಮಕೂರಿನ ಕಾರ್ಖಾನೆಯಲ್ಲಿ ದೇಶಿಯವಾಗಿ ತಯಾರಿಸಿದ ಲಘು ಬಹುಬಳಕೆಯ ಹೆಲಿಕಾಪ್ಟರ್‌ನ ಚಾಕಚಕ್ಯತೆಯನ್ನು ಪ್ರದರ್ಶಿಸಲಾಯಿತು.

ಸೂರ್ಯಕಿರಣ ವಿಮಾನಗಳ ತಂಡದ ಪ್ರದರ್ಶನ ಪ್ರೇಕ್ಷಕರ ಮೈನವಿರೇಳಿಸಿತು. ಬೋಯಿಂಗ್ ಸಿ–17 ಗ್ಲೋಬ್ ಮಾಸ್ಟರ್ ಮುಂದೆ ಸಾಗಿದರೆ ಒಂಬತ್ತು ಸೂರ್ಯ ಕಿರಣ ವಿಮಾನಗಳು ಅದನ್ನು ಸಮಾನ ವೇಗದಲ್ಲಿ ಹಿಂಬಾಲಿಸಿದ್ದು ಆಕರ್ಷಕವಾಗಿತ್ತು. ನಂತರ, ಈ ವಿಮಾನಗಳು ಆಗಸವನ್ನು ಚುಂಬಿಸಿ ಧರೆಗೆ ಇಳಿಯುವುದು ನೋಡುಗರನ್ನು ಹುಬ್ಬೇರಿಸುವಂತೆ ಮಾಡಿತು. ಕೇವಲ 5 ಮೀಟರ್ ಅಂತರದಲ್ಲಿ ಹಾರಾಟ ಪ್ರದರ್ಶನವು ಕಣ್ಮನಸೆಳೆಯಿತು. ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿ ಸಾಗಿ ಕ್ಷಣಾರ್ಧದಲ್ಲಿ ಮಿಂಚಿ ಮರೆಯಾಗುವ ರೀತಿಯಲ್ಲಿ ನಡೆಸಿದ ಹಾರಾಟ ಪ್ರದರ್ಶನವೂ ಮೈನವಿರೇಳಿಸಿತು. ಇದೇ ವಿಮಾನಗಳು ಹೃದಯಕಾರದ ಚಿತ್ರ ರಚಿಸಿದ್ದು ಕಣ್ಮನಸೆಳೆಯಿತು. ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಲಘು ಯುದ್ಧ ಹೆಲಿಕಾಪ್ಟರ್‌ನಲ್ಲಿ ಹಾರಾಟ ನಡೆಸಿದರು.

'ಜಾಗತಿಕ ನಾಯಕತ್ವಕ್ಕೆ ರಾಜ್ಯದ ಕೊಡುಗೆ'

'ಭಾರತವು ಜಾಗತಿಕ ನಾಯಕತ್ವ ವಹಿಸಲು ಕರ್ನಾಟಕ ಅತ್ಯಂತ ದೊಡ್ಡ ಕೊಡುಗೆ ನೀಡಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. 'ಏರೋ ಇಂಡಿಯಾ–2023' ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಏರೋ ಇಂಡಿಯಾ 14ನೇ ಆವೃತ್ತಿಯು ಗಾತ್ರ, ಪ್ರದರ್ಶನ ಮತ್ತು ಕಾರ್ಯವೈಖರಿಯ ದೃಷ್ಟಿಯಿಂದ ಅತ್ಯಂತ ವಿಶೇಷ ಆವೃತ್ತಿಯಾಗಿದ್ದು, ಅಂತರರಾಷ್ಟ್ರೀಯ ಮಟ್ಟದ ಅತಿ ದೊಡ್ಡ ವೈಮಾನಿಕ ಪ್ರದರ್ಶನ' ಎಂದರು.ರಕ್ಷಣಾ ವಲಯದ ಶೇ 65ರಷ್ಟು ಉತ್ಪನ್ನಗಳನ್ನು ಬೆಂಗಳೂರಿನಲ್ಲಿ ತಯಾರಿಸಲಾಗುತ್ತಿದೆ. ರಾಜ್ಯದಲ್ಲಿ ರಕ್ಷಣಾ ಹಾಗೂ ಏರೋಸ್ಪೇಸ್ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು 45 ಸಾವಿರಕ್ಕೂ ಹೆಚ್ಚು ಯುವಕರನ್ನು ತೊಡಗಿಸಿಕೊಳ್ಳಲಾಗುವುದು' ಎಂದರು.

'ನೀವು ನಿಮ್ಮ ಹಕ್ಕು ಕಳೆದುಕೊಳ್ಳುತ್ತಿದ್ದೀರಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಯಲ್ಲಿ ಸೋಮವಾರ ನಡೆದ ಮೊದಲ ಹಂತದ ಬಜೆಟ್ ಅಧಿವೇಶನವು ಸಭಾಪತಿ ಜಗದೀಪ್ ಧನಕರ್ ಹಾಗೂ ವಿರೋಧ ಪಕ್ಷಗಳ ಸಂಸದರ ನಡುವಣ ಜಟಾಪಟಿಗೆ ಸಾಕ್ಷಿಯಾಯಿತು.

ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಒಪ್ಪಿಸಲೇಬೇಕೆಂದು ಪಟ್ಟು ಹಿಡಿದ ವಿರೋಧ ಪಕ್ಷಗಳ ಸಂಸದರು ಪದೇ ಪದೇ ಕಲಾಪಕ್ಕೆ ಅಡ್ಡಿಪಡಿಸಿದ್ದರಿಂದ ಬಜೆಟ್ ಅಧಿವೇಶನವನ್ನು ಮಾರ್ಚ್ 13ಕ್ಕೆ ಮುಂದೂಡಲಾಯಿತು.

ಸೋಮವಾರ ಕಲಾಪ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷಗಳ ಸಂಸದರು ಗದ್ದಲ ನಡೆಸಿದರು. ಎಎಪಿ ಸಂಸದ ಸಂಜಯ್ ಸಿಂಗ್ ಹಾಗೂ ಸಿಪಿಐ ಸಂಸದ ಪಿ.ಸಂತೋಷ್ ಕುಮಾರ್ ಅವರು ನೀಡಿದ್ದ ನೋಟಿಸ್ ಅನ್ನು ಧನಕರ್ ತಿರಸ್ಕರಿಸಿದರು. ಇದು ವಿರೋಧ ಪಕ್ಷದ ಸಂಸದರನ್ನು ಕೆರಳಿಸಿತು. ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜೆಪಿಸಿ ತನಿಖೆಗೆ ಒಪ್ಪಿಸುವಂತೆ ಆಗ್ರಹಿಸಿ ಘೋಷಣೆ ಕೂಗಿದರು. ಕಾಂಗ್ರೆಸ್ ಸಂಸದೆ ರಜನಿ ಪಾಟೀಲ್ ಮೇಲೆ ಹೇರಲಾಗಿರುವ ಅಮಾನತು ಆದೇಶ ರದ್ದುಪಡಿಸುವಂತೆಯೂ ಆಗ್ರಹಿಸಿದರು. ಹೀಗಾಗಿ ಸಭಾಪತಿಯವರು ಕೆಲ ಕಾಲ ಕಲಾಪ ಮುಂದೂಡಿದರು.

ಮತ್ತೆ ಕಲಾಪ ಆರಂಭವಾದಾಗ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾತನಾಡಲು ಧನಕರ್ ಅವಕಾಶ ನೀಡಿದರು.

ಖರ್ಗೆ ಅವರು ಮಾತನಾಡಲು ಆರಂಭಿಸಿದಾಗ ಆಡಳಿತಾರೂಢ ಪಕ್ಷದ ಕೆಲ ಸಂಸದರು ಘೋಷಣೆ ಕೂಗಿದರು. ಪ್ರತಿಯಾಗಿ ವಿರೋಧ ಪಕ್ಷಗಳ ಸಂಸದರೂ ಘೋಷಣೆ ಮೊಳಗಿಸಿದರು.

'ಸಮಸ್ಯೆಗಳ ಕುರಿತು ಬಹಳ ವೇದನೆಯಿಂದ ಮಾತನಾಡಿದ್ದೆ. ನಾನು ಪ್ರಯೋಗಿಸಿದ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ' ಎಂದು ಖರ್ಗೆ ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಧನಕರ್, 'ನೀವು ವಿರೋಧ ಪಕ್ಷದ ಸಂಸದರನ್ನು ಹಿಡಿದಿಟ್ಟುಕೊಳ್ಳುವ ಹಕ್ಕನ್ನು ಕಳೆದುಕೊಳ್ಳುತ್ತಿದ್ದೀರಿ. ಪ್ರತಿಬಾರಿಯೂ ಸದನದ ಒಳಗೆ ಹಾಗೂ ಹೊರಗೆ ಆರೋಪಗಳನ್ನು ಮಾಡುತ್ತಿದ್ದೀರಿ. ಇದು ಸರಿಯಲ್ಲ' ಎಂದು ಕಿಡಿಕಾರಿದರು.

'ಇಡೀ ಜಗತ್ತು ಅದಾನಿ ಪ್ರಕರಣದ ಕುರಿತು ಚರ್ಚೆ ನಡೆಸುತ್ತಿದೆ. ಪತ್ರಿಕೆಗಳಲ್ಲಿ ಈ ಸಂಬಂಧ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ಹೀಗಿದ್ದರೂ ಸದನದಲ್ಲಿ ಈ ವಿಚಾರದ ಕುರಿತ ಚರ್ಚೆಗೆ ಅವಕಾಶ ನೀಡುತ್ತಿಲ್ಲ' ಎಂದು ಕಾಂಗ್ರೆಸ್ ಸಂಸದ ದಿಗ್ವಿಜಯ್ ಸಿಂಗ್ ದೂರಿದರು.

ಲೋಕಸಭೆಯಲ್ಲಿನ ಬಜೆಟ್ ಅಧಿವೇಶನದ ಮೊದಲ ಭಾಗ ಸೋಮವಾರ ಕೊನೆಗೊಂಡಿದ್ದು, ಎರಡನೇ ಭಾಗವನ್ನು ಮಾರ್ಚ್ 13ಕ್ಕೆ ಮುಂದೂಡಲಾಯಿತು.

ರಾಹುಲ್‌ಗೆ ಹಕ್ಕುಚ್ಯುತಿ ನೋಟಿಸ್: ಸ್ಪೀಕರ್‌ಗೆ ಅಧೀರ್ ರಂಜನ್ ಪತ್ರ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಸ್ಪೀಕರ್ ಓಂ ಬಿರ್ಲಾ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ವೇಳೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆರೋಪ ಮಾಡಿದ್ದಕ್ಕಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಹಕ್ಕುಚ್ಯುತಿ ನೋಟಿಸ್ ನೀಡಿರುವುದನ್ನು ಅವರು ಪ್ರಶ್ನಿಸಿದ್ದಾರೆ.

'ಹಿಂಡನ್‌ಬರ್ಗ್ ರಿಸರ್ಚ್ ವರದಿಯಿಂದಾಗಿ ಷೇರು ಮಾರುಕಟ್ಟೆ ಪಾತಾಳಕ್ಕೆ ಇಳಿದಿತ್ತು. ಹೂಡಿಕೆದಾರರು ಸಾವಿರಾರು ಕೋಟಿ ಹಣ ಕಳೆದುಕೊಂಡಿದ್ದರು. ಈ ದೇಶದ ಜನರ ಪ್ರತಿನಿಧಿಯಾಗಿ ರಾಹುಲ್ ಅವರು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಿದ್ದರು. ಆ ಮೂಲಕ ಚುನಾಯಿತ ಜನಪ್ರತಿನಿಧಿಯಾಗಿ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದರು' ಎಂದು ಪತ್ರದಲ್ಲಿ ಹೇಳಿದ್ದಾರೆ.

ಚೆನ್ನೈ ಓಪನ್ ಟೆನಿಸ್ ಟೂರ್ನಿ: ಮುಕುಂದ್‌ಗೆ ಗೆಲುವು

ಮುಖ್ಯ ಸುತ್ತಿಗೆ ಸುಮಿತ್

ಚೆನ್ನೈ (ಪಿಟಿಐ): ಭಾರತದ ಸುಮಿತ್ ನಗಾಲ್ ಮತ್ತು ಶಶಿಕುಮಾರ್ ಮುಕುಂದ್ ಅವರು ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮುಖ್ಯ ಸುತ್ತು ತಲುಪಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ ಸೋಮವಾರ ಸುಮಿತ್ 6-1, 6-3ರಿಂದ ದಕ್ಷಿಣ ಕೊರಿಯಾದ ಜಿ ಸಂಗ್ ನ್ಯಾಮ್ ಅವರನ್ನು ಪರಾಭವಗೊಳಿಸಿದರು. ಮತ್ತೊಂದು ಹಣಾಹಣಿಯಲ್ಲಿ ಮುಕುಂದ್ 4-6, 6-4, 6-4ರಿಂದ ಚೀನಾ ತೈಪೆಯ ಜೇಸನ್ ಜಂಗ್ ಅವರನ್ನು ಮಣಿಸಿದರು.

ಅರ್ಹತಾ ಸುತ್ತಿನ ಇನ್ನೊಂದು ಹಣಾಹಣಿಯಲ್ಲಿ ದಿಗ್ವಿಜಯ್ ಪ್ರತಾಪ್ ಸಿಂಗ್ 2-6, 6-7 (2)ರಿಂದ ಆಸ್ಟ್ರೇಲಿಯಾದ ಜೇಮ್ಸ್ ಮೆಕಾಬೆ ಎದುರು ಎಡವಿದರು.

ಮುಖ್ಯ ಸುತ್ತಿನಲ್ಲಿ ಸದ್ಯ ಭಾರತದ ನಾಲ್ವರು ಆಟಗಾರರು ಸ್ಥಾನ ಪಡೆದಂತಾಗಿದೆ. ಪ್ರಜ್ಞೇಶ್ ಗುಣೇಶ್ವರನ್ ಮತ್ತು ರಾಮ್‌ಕುಮಾರ್ ರಾಮನಾಥನ್ ಈಗಾಗಲೇ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.

ಮುಕುಂದ್ ಅವರು ಪ್ರಧಾನ ಸುತ್ತಿನ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾದ ಮ್ಯಾಕ್ಸ್ ಪುರ್ಸೆಲ್ ಎದುರು ಆಡಲಿದ್ದಾರೆ.

ಸುಮಿತ್ ಅವರು ಮೊದಲ ಪಂದ್ಯದಲ್ಲಿ ಗ್ರೇಟ್ ಬ್ರಿಟನ್‌ನ, ನಾಲ್ಕನೇ ಶ್ರೇಯಾಂಕದ ರ್‍ಯಾನ್ ಪೆನಿಟ್ಸನ್ ಎದುರು ಕಣಕ್ಕಿಳಿಯುವರು.

ಸುಮಿತ್ ನಗಾಲ್ ಆಟದ ಪರಿ– ಪಿಟಿಐ ಚಿತ್ರ

'ಷೇರುಪೇಟೆ ನಿಯಂತ್ರಣ ವ್ಯವಸ್ಥೆ ಮೌಲ್ಯಮಾಪನಕ್ಕೆ ಅಭ್ಯಂತರವಿಲ್ಲ'

ಒಂದನೇ ಪುಟದಿಂದ...

ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯ ನಂತರ ಅದಾನಿ ಸಮೂಹದ ಷೇರುಗಳ ಮೌಲ್ಯದಲ್ಲಿ ಸುಮಾರು ₹10 ಲಕ್ಷ ಕೋಟಿಯಷ್ಟು ನಷ್ಟವಾಗಿದೆ. ಇದರಿಂದ ದೇಶದ ಹೂಡಿಕೆದಾರರಿಗೆ ನಷ್ಟವಾಗಿದೆ. ಇಂತಹ ನಷ್ಟವನ್ನು ತಪ್ಪಿಸಲು ಅಗತ್ಯ ವ್ಯವಸ್ಥೆ ಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಹಲವು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಕಳೆದ ವಾರ ವಿಚಾರಣೆಗೆ ಎತ್ತಿಕೊಂಡಿತ್ತು. ಆಗ, 'ಹೂಡಿಕೆದಾರರ ಹಿತಾಸಕ್ತಿ ರಕ್ಷಣೆಗೆ ಕಠಿಣವಾದ ನಿಯಂತ್ರಣ ವ್ಯವಸ್ಥೆ ಬೇಕು. ಈಗ ಇರುವ ನಿಯಂತ್ರಣ ವ್ಯವಸ್ಥೆಯ ಮೌಲ್ಯಮಾಪನವೂ ಆಗಬೇಕು. ಈಗಿನ ಸ್ಥಿತಿಯ ಪರಿಶೀಲನೆಗೆ ಸಮಿತಿ ರಚನೆಯಾಗಬೇಕು' ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ.ಪಾರ್ದೀವಾಲಾ ಅವರಿದ್ದ ಪೀಠವು ಹೇಳಿತ್ತು. ಈ ಬಗ್ಗೆ ಅಭಿಪ್ರಾಯ ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿತ್ತು.

ಈ ಬಗ್ಗೆ ಸರ್ಕಾರದ ನಿಲುವಿಗೆ ಸಂಬಂಧಿಸಿದ ಪ್ರಮಾಣಪತ್ರವನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಪೀಠಕ್ಕೆ ಸೋಮವಾರ ಸಲ್ಲಿಸಿದರು. 'ಇಂತಹ ಪರಿಸ್ಥಿತಿಗಳನ್ನು ನಿಯಂತ್ರಿಸಲು ಸೆಬಿ ಶಕ್ತವಾಗಿದೆ ಮತ್ತು ಸನ್ನದ್ಧವಾಗಿದೆ. ಆದರೆ, ಮೌಲ್ಯಮಾಪನ ವ್ಯವಸ್ಥೆ ಬೇಕು ಎಂಬುದರ ಅಭಿಪ್ರಾಯ ತಿಳಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದ್ದಕ್ಕೆ ಈ ಪ್ರತಿಕ್ರಿಯೆ ನೀಡುತ್ತಿದ್ದೇವೆ. ಈ ನಿಯಂತ್ರಣ ಸಂಸ್ಥೆಗಳಿಗೆ ಧಕ್ಕೆಯಾಗದೇ ಇರುವ ರೀತಿಯಲ್ಲಿ ಮೌಲ್ಯಮಾಪನ ಸಮಿತಿಯನ್ನು ರಚಿಸಲು ನಮ್ಮ ಅಭ್ಯಂತರವಿಲ್ಲ. ಸಮಿತಿಯಲ್ಲಿ ಯಾರು ಇರಬೇಕು ಎಂದು ಹೆಸರನ್ನು ಸೂಚಿಸಲು ಸರ್ಕಾರಕ್ಕೆ ಅವಕಾಶ ನೀಡಬೇಕು. ಆ ಹೆಸರುಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಾಗುತ್ತದೆ' ಎಂದು ಅವರು ಪೀಠಕ್ಕೆ ಹೇಳಿದರು.

ಆಗ ಪೀಠವು, 'ಬುಧವಾರ ಈ ಬಗ್ಗೆ ದಾಖಲೆಗಳನ್ನು ಸಲ್ಲಿಸಿ' ಎಂದು ಸೂಚಿಸಿತು. ಅರ್ಜಿಗಳ ವಿಚಾರಣೆಯನ್ನು ಫೆ.17ಕ್ಕೆ ಮುಂದೂಡಿತು ಎಂದು ಪಿಟಿಐ ವರದಿ ಮಾಡಿದೆ.

ಮುಖ್ಯಾಂಶಗಳು

- ಹಿಂಡನ್‌ಬರ್ಗ್ ವರದಿ– ಹೂಡಿಕೆದಾರರ ಸ್ವತ್ತಿಗೆ ನಷ್ಟ ಆರೋಪ
- ಹೂಡಿಕೆದಾರರ ಹಿತರಕ್ಷಣೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ
- ಕೇಂದ್ರ ಸರ್ಕಾರದ ಅಭಿಪ್ರಾಯ ಕೇಳಿದ್ದ ಸುಪ್ರೀಂ ಕೋರ್ಟ್

ನಜೀರ್‌ಗೆ ರಾಜ್ಯಪಾಲ ಹುದ್ದೆ: ಕಾಂಗ್ರೆಸ್‌ಗೆ ರಿಜಿಜು ತಿರುಗೇಟು

ನವದೆಹಲಿ/ಮುಂಬೈ (ಪಿಟಿಐ): ರಾಜ್ಯಪಾಲರನ್ನಾಗಿ ಸುಪ್ರಿಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಬ್ದುಲ್ ನಜೀರ್ ಅವರನ್ನು ನೇಮಕ ಮಾಡಿರುವ ಕೇಂದ್ರ ಸರ್ಕಾರದ ನಡೆಯನ್ನು ಟೀಕಿಸಿರುವ ಕಾಂಗ್ರೆಸ್‌ಗೆ ಕೇಂದ್ರ ಸಚಿವ ಕಿರಣ್ ರಿಜಿಜು ತಿರುಗೇಟು ನೀಡಿದ್ದಾರೆ. ರಾಜ್ಯಪಾಲರ ನೇಮಕಾತಿಯನ್ನು ಅವರು ಸಮರ್ಥಿಸಿಕೊಂಡಿದ್ದಾರೆ.

'ವ್ಯವಸ್ಥೆಯೊಂದು ರಾಜ್ಯಪಾಲರ ನೇಮಕದ ವಿರುದ್ಧ ನಿಂತಿದೆ. ಭಾರತವನ್ನು ಇನ್ನು ತಮ್ಮ ಖಾಸಗಿ ಸೊತ್ತು ಎಂದು ಪರಿಗಣಿಸಲಾಗದು ಎಂಬುದನ್ನು ಅವರು ಅರ್ಥಮಾಡಿಕೊಳ್ಳುವುದು ಒಳಿತು' ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಸಂವಿಧಾನದ ನಿರ್ದೇಶನದಂತೆ ಸರ್ಕಾರ ನಡೆಯುತ್ತಿದೆ ಎಂದಿರುವ ರಿಜಿಜು, ತಮ್ಮ ಟ್ವೀಟ್‌ನಲ್ಲಿ ಯಾರ ಹೆಸರನ್ನೂ ಉಲ್ಲೇಖಿಸಿಲ್ಲ.

ಆರು ರಾಜ್ಯಪಾಲರನ್ನು ಸರ್ಕಾರವು ಭಾನುವಾರ ನೇಮಕ ಮಾಡಿತ್ತು. ನಜೀರ್ ಅವರನ್ನು ಆಂಧ್ರ ಪ್ರದೇಶ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ನಜೀರ್ ಅವರ ನೇಮಕಾತಿಯು ನ್ಯಾಯಾಂಗ ಸ್ವಾತಂತ್ರ್ಯಕ್ಕೆ ಬೆದರಿಕೆ ಎಂಬುದಾಗಿ ಕಾಂಗ್ರೆಸ್ ಆರೋಪಿಸಿದೆ.

ರಾಜಕೀಯವಾಗಿ ಮಹತ್ವದ ಅಯೋಧ್ಯೆ, ತ್ರಿವಳಿ ತಲಾಖ್, ನೋಟು ರದ್ದತಿಯಂತಹ ಪ್ರಕರಣಗಳ ವಿಚಾರಣೆ ನಡೆಸಿ ತೀರ್ಪು ನೀಡಿದ್ದ ಪೀಠದಲ್ಲಿ ಇದ್ದ ನ್ಯಾಯಮೂರ್ತಿ ನಜೀರ್ ಅವರು ಇದೇ ಜನವರಿ 4ರಂದು ನಿವೃತ್ತರಾಗಿದ್ದರು.

ಠಾಕೂರ್ ಸಮರ್ಥನೆ: ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರನ್ನು ಆಂಧ್ರ ಪ್ರದೇಶದ ರಾಜ್ಯಪಾಲರನ್ನಾಗಿ ನೇಮಕ ಮಾಡಿರುವುದನ್ನು ಕೇಂದ್ರ ಸಚಿವ ಅನುರಾಗ್ ಠಾಕೂರ್ ಸೋಮವಾರ ಸಮರ್ಥಿಸಿಕೊಂಡಿದ್ದಾರೆ.

'ಅರ್ಹ ವ್ಯಕ್ತಿಗೆ ಯಾವುದೇ ಹುದ್ದೆಯನ್ನು ನೀಡಬಹುದು. ಆ ವ್ಯಕ್ತಿಯ ಸಾಮರ್ಥ್ಯವನ್ನು ಪ್ರಶ್ನಿಸಬಾರದು' ಎಂದು ಅವರು ಇಲ್ಲಿ ಸೋಮವಾರ ತಿಳಿಸಿದರು.

ಗಿಲ್ ಐಸಿಸಿ ತಿಂಗಳ ಆಟಗಾರ

ದುಬೈ (ಪಿಟಿಐ): ಭಾರತದ ಬ್ಯಾಟರ್ ಶುಭಮನ್ ಗಿಲ್ ಅವರು ಜನವರಿ ತಿಂಗಳ ಐಸಿಸಿ ಆಟಗಾರ ಗೌರವಕ್ಕೆ ಭಾಜನರಾಗಿದ್ದಾರೆ. ಏಕದಿನ ಮಾದರಿಯಲ್ಲಿ ತೋರಿದ ಉತ್ತಮ ಆಟಕ್ಕಾಗಿ ಅವರಿಗೆ ಈ ಗೌರವ ಒಲಿದಿದೆ.

ಕಳೆದ ತಿಂಗಳು ಶ್ರೀಲಂಕಾ ಮತ್ತು ನ್ಯೂಜಿಲೆಂಡ್ ತಂಡಗಳ ಎದುರು ನಡೆದ ಏಕದಿನ ಸರಣಿಗಳಲ್ಲಿ 23 ವರ್ಷದ ಗಿಲ್ ಮಿಂಚಿದ್ದರು. ಮೂರು ಶತಕಗಳನ್ನು ಒಳಗೊಂಡ 567 ರನ್ ಗಳಿಸಿದ್ದರು. ಕಿವೀಸ್ ವಿರುದ್ಧದ ಸರಣಿಯ ಮೊದಲ ಪಂದ್ಯದಲ್ಲಿ ಸಿಡಿಸಿದ ಅಬ್ಬರದ ದ್ವಿಶತಕವೂ (208) ಅದರಲ್ಲಿ ಸೇರಿದೆ.

ತಿಂಗಳ ಆಟಗಾರ ಪ್ರಶಸ್ತಿಯ ಸ್ಪರ್ಧೆಯಲ್ಲಿ ಗಿಲ್ ಅವರು ಸಹ ಆಟಗಾರ ಮೊಹಮ್ಮದ್ ಸಿರಾಜ್ ಮತ್ತು ನ್ಯೂಜಿಲೆಂಡ್‌ನ ಡೆವೊನ್ ಕಾನ್ವೆ ಅವರನ್ನು ಹಿಂದಿಕ್ಕಿದ್ದಾರೆ.

ಶುಭಮನ್ ಗಿಲ್– ಎಎಫ್‌ಪಿ ಚಿತ್ರ

ಗ್ರೇಸ್‌ಗೆ ಗೌರವ: ಇಂಗ್ಲೆಂಡ್‌ನ 19 ವರ್ಷದೊಳಗಿನವರ ಮಹಿಳಾ ತಂಡದ ನಾಯಕಿ ಗ್ರೇಸ್ ಸ್ಕ್ರಿವೆನ್ಸ್ ಅವರು ತಿಂಗಳ ಆಟಗಾರ್ತಿ ಗೌರವ ಪಡೆದಿದ್ದಾರೆ. ಈ ಪ್ರಶಸ್ತಿ ಪಡೆದ ಅತಿ ಕಿರಿಯ ಆಟಗಾರ್ತಿ ಎನಿಸಿಕೊಂಡರು.

ಫುಟ್‌ಬಾಲ್: ವೆಹಿಕಲ್ಸ್ ಎಫ್‌ಸಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯಪ್ರಕಾಶ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ವೆಹಿಕಲ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ವೆಹಿಕಲ್ಸ್ 3–1ರಿಂದ ಅಲ್ ಫತೇಹ್ ತಂಡವನ್ನು ಸೋಲಿಸಿತು. ಸೂರ್ಯಪ್ರಕಾಶ್ 23 ಮತ್ತು 48ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಲತೇಶ್ ಎಸ್. (47ನೇ ನಿ.) ಒಂದು ಗೋಲು ಗಳಿಸಿದರು.

ಅಲ್ ಫತೇಹ್ ತಂಡದ ಜೈನ್ ಶರೀಫ್ (39ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಮತ್ತೊಂದು ಪಂದ್ಯದಲ್ಲಿ ರಾಯಲ್ಸ್ ಎಫ್‌ಸಿ 1–0ಯಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ಎಫ್‌ಸಿ ತಂಡವನ್ನು ಸೋಲಿಸಿತು. ವಿಜೇತ ತಂಡಕ್ಕಾಗಿ ಕೆ. ಅರುಣ್ (69ನೇ ನಿ.) ಗೋಲು ಹೊಡೆದರು.

ಮಂಗಳವಾರ ನಡೆಯಲಿರುವ ಪಂದ್ಯಗಳಲ್ಲಿ ರೂಟ್ಸ್ ಎಫ್‌ಎಸ್– ಬೆಂಗಳೂರು ಸಿಟಿ ಎಫ್‌ಸಿ, ಸಿಐಎಲ್ ಎಫ್‌ಸಿ– ಮೊಹಮ್ಮಡನ್ ಸ್ಪೋರ್ಟಿಂಗ್ ಎಫ್‌ಸಿ ಸೆಣಸಲಿವೆ.

ಇಂದಿನಿಂದ ನೆಟ್‌ಬಾಲ್ ಟೂರ್ನಿ

ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಬೆಂಗಳೂರು ಸೌಂದರ್ಯ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಅಖಿಲ ಭಾರತ ಅಂತರ ಕಾನೂನು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ನೆಟ್‌ಬಾಲ್ ಚಾಂಪಿಯನ್‌ಶಿಪ್‌ಅನ್ನು ಫೆಬ್ರುವರಿ 14ರಿಂದ 17ರವರೆಗೆ ಇಲ್ಲಿಯ ನಾಗಸಂದ್ರ ಸೌಂದರ್ಯ ಕಾನೂನು ಮಹಾವಿದ್ಯಾಲಯದ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಸೌಂದರ್ಯ ಶಿಕ್ಷಣ ಸಂಸ್ಥೆಯ ನಿರ್ದೇಶಕ ಕೀರ್ತನ್ ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ. 'ದೇಶದ 74 ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ. ಇದಕ್ಕಾಗಿ ಕಾನೂನು ವಿಶ್ವವಿದ್ಯಾಲಯದ ಕ್ರೀಡಾಂಗಣವನ್ನು ಅವರಣವನ್ನು ಸಕಲರೀತಿಯಲ್ಲಿ ಸಜ್ಜುಗೊಳಿಸಲಾಗಿದೆ' ಎಂದು ಕೀರ್ತನ್ ಕುಮಾರ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿತ್ರಾ ರಾಮಕೃಷ್ಣ ಜಾಮೀನು ಪ್ರಶ್ನಿಸಿದ್ದ ಸಿಬಿಐ ಅರ್ಜಿ ವಜಾ

ನವದೆಹಲಿ (ಪಿಟಿಐ): ಬ್ರೋಕರ್‌ಗಳಿಗೆ ತಮ್ಮ ಸರ್ವರ್‌ಗಳನ್ನು ಷೇರು ಮಾರುಕಟ್ಟೆಯಲ್ಲಿ ಇರಿಸುವ ಸೌಲಭ್ಯ ಕಲ್ಪಿಸುವಲ್ಲಿ (ಕೊ- ಲೊಕೇಷನ್) ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ರಾಷ್ಟ್ರೀಯ ಷೇರು ವಿನಿಮಯ (ಎನ್‌ಎಸ್‌ಇ) ಮಾಜಿ ಕಾರ್ಯನಿರ್ವಾಹಕ ನಿರ್ದೇಶಕಿ ಚಿತ್ರಾ ರಾಮಕೃಷ್ಣ ಅವರಿಗೆ ದೆಹಲಿ ಹೈಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಸೋಮವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಬೇಲಾ ಎಂ. ತ್ರಿವೇದಿ ಅವರಿದ್ದ ಪೀಠವು, 'ಜಾಮೀನು ಆದೇಶದಲ್ಲಿ ಮಧ್ಯಪ್ರವೇಶಿಸಲು ಸಕಾರಣಗಳಿಲ್ಲ' ಎಂದು ಹೇಳಿತು.

ಸಿಕ್ಕಿಂನಲ್ಲಿ 4.3 ತೀವ್ರತೆ ಭೂಕಂಪ

ಗ್ಯಾಂಗ್ಟಕ್ (ಪಿಟಿಐ): ಸಿಕ್ಕಿಂನಲ್ಲಿ ಸೋಮವಾರ ಬೆಳಿಗ್ಗೆ ರಿಕ್ಟರ್ ಮಾಪಕದಲ್ಲಿ 4.3 ತೀವ್ರತೆಯ ಭೂಕಂಪ ಸಂಭವಿಸಿದೆ.

ಸಿಕ್ಕಿಂ ಉತ್ತರ ಭಾಗದಲ್ಲಿರುವ ಪಶ್ಚಿಮ ಸಿಕ್ಕಿಂ ಜಿಲ್ಲೆಯ ಯುಕ್ಸೋಮ್ ಎಂಬ ಪಟ್ಟಣದಲ್ಲಿ ಭೂಮಿ ಕಂಪಿಸಿದೆ ಎಂದು ರಾಷ್ಟ್ರೀಯ ಭೂಕಂಪನ ಕೇಂದ್ರ ಮಾಹಿತಿ ನೀಡಿದೆ.

'ದ್ವೇಷ ಬಿತ್ತನೆ ರಾಷ್ಟ್ರ ದ್ರೋಹ'

ನವದೆಹಲಿ (ಪಿಟಿಐ): ಧರ್ಮಗಳ ಮಧ್ಯೆ ಬಿರುಕು ಮೂಡಿಸಲು ನಡೆಸುವ ಯತ್ನವನ್ನು 'ರಾಷ್ಟ್ರ ಅಪರಾಧ' ಎಂದು ಪರಿಗಣಿಸಬೇಕು ಎಂದು ಜಮೈತ್ ಉಲೇಮಾ–ಇ–ಹಿಂದ್ ಭಾನುವಾರ ಅಭಿಪ್ರಾಯಪಟ್ಟಿದೆ.

ದೆಹಲಿಯ ರಾಮಲೀಲಾ ಮೈದಾನದಲ್ಲಿ ಮೂರು ದಿನಗಳ ಕಾಲ ನಡೆದ ಪಸ್ಮಾಂದಾ ಮುಸ್ಲಿಮರ 34ನೇ ಸಾಮಾನ್ಯ ಸಭೆಯಲ್ಲಿ ಜಮೈತ್ ಅಧ್ಯಕ್ಷ ಮೌಲಾನ ಮಹಮೂದ್ ಮದನಿ ಅವರು ಸಭೆ ಉದ್ದೇಶಿಸಿ ಓದಿದ ಸಂದೇಶದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಲಾಗಿದೆ.

ಕ್ಷೇತ್ರ ಪುನರ್ ವಿಂಗಡಣೆ: ಅರ್ಜಿ ವಜಾ

ನವದೆಹಲಿ (ಪಿಟಿಐ): ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಗೆ ಸಂಬಂಧಿಸಿ, ಪುನರ್ ವಿಂಗಡಣಾ ಆಯೋಗವನ್ನು ರಚಿಸಿರುವ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಕಾಶ್ಮೀರದ ಇಬ್ಬರು ನಿವಾಸಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಎ.ಎಸ್.ಓಕಾ ಅವರ ಪೀಠ ನಡೆಸಿತು. ಕಳೆದ ವರ್ಷದ ಡಿಸೆಂಬರ್ 1ರಂದು ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ತೀರ್ಪು ಕಾಯ್ದಿರಿಸಿತ್ತು.

ಮಹಿಳಾ ಪ್ರೀಮಿಯರ್ ಲೀಗ್: ವಿದೇಶಿ ಆಟಗಾರ್ತಿಯರಲ್ಲಿ ಗಾರ್ಡನರ್, ಸಿವರ್‌ಗೆ ಅಧಿಕ ಮೌಲ್ಯ

ಆರ್‌ಸಿಬಿಗೆ ಸ್ಮೃತಿ; ದೀಪ್ತಿಗೆ ಜಾಕ್‌ಪಾಟ್

ಮುಂಬೈ (ಪಿಟಿಐ): ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಕ್ರಿಕೆಟ್ ಟೂರ್ನಿಯ ಆಟಗಾರ್ತಿಯರ ಹರಾಜು ಪ್ರಕ್ರಿಯೆಯಲ್ಲಿ ಭಾರತದ ಬ್ಯಾಟರ್ ಸ್ಮೃತಿ ಮಂದಾನ ಅವರಿಗೆ ಜಾಕ್‌ಪಾಟ್ ಒಲಿದಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಅವರಿಗೆ ₹ 3.40 ಕೋಟಿ ನೀಡಿ ತನ್ನದಾಗಿಸಿಕೊಂಡಿದೆ. ಮುಂಬೈನಲ್ಲಿ ಸೋಮವಾರ ನಡೆದ ಹರಾಜಿನಲ್ಲಿ ಮಂದಾನ ಅವರನ್ನು ಸೆಳೆದುಕೊಳ್ಳಲು ಮುಂಬೈ ಇಂಡಿಯನ್ಸ್ ಮತ್ತು ಆರ್‌ಸಿಬಿ ನಡುವೆ ತುರುಸಿನ ಸ್ಪರ್ಧೆ ಏರ್ಪಟ್ಟಿತ್ತು. ಅಂತಿಮವಾಗಿ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲು ಆರ್‌ಸಿಬಿ ಯಶಸ್ವಿಯಾಯಿತು.

ಮಂದಾನ ಅವರಿಗೆ ಹೋಲಿಸಿದರೆ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ನಿರೀಕ್ಷಿತ ಮೌಲ್ಯ ಗಳಿಸಲಿಲ್ಲ. ಮುಂಬೈ ಇಂಡಿಯನ್ಸ್ ₹ 1.80 ಕೋಟಿ ಮೊತ್ತಕ್ಕೆ ಅವರನ್ನು ತಂಡಕ್ಕೆ ಸೇರಿಸಿಕೊಂಡಿತು.

ಭಾರತದ 10 ಆಟಗಾರ್ತಿಯರು ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯ ಗಳಿಸಿದರು. ಆಲ್‌ರೌಂಡರ್ ದೀಪ್ತಿ ಶರ್ಮಾ, ಎರಡನೇ ಅತ್ಯಧಿಕ ಬೆಲೆ ಪಡೆದ ಭಾರತದ ಆಟಗಾರ್ತಿ ಎನಿಸಿಕೊಂಡರು. ಅವರು ₹2.60 ಕೋಟಿ ಮೊತ್ತಕ್ಕೆ ಯು.ಪಿ ವಾರಿಯರ್ಸ್ ತಂಡದ ಪಾಲಾದರು.

ಜೆಮಿಮಾ ರಾಡ್ರಿಗಸ್ ₹ 2.20 ಕೋಟಿ ಹಾಗೂ ರಿಚಾ ಘೋಷ್ ₹ 1.90 ಕೋಟಿ ಮೌಲ್ಯ ಪಡೆದುಕೊಂಡರು. ಇವರಿಬ್ಬರು ಭಾನುವಾರ ನಡೆದಿದ್ದ ಪಾಕಿಸ್ತಾನ ವಿರುದ್ಧದ ಟಿ20 ಪಂದ್ಯದಲ್ಲಿ ಮಿಂಚಿದ್ದರು. ಇದು ಕೂಡಾ ಅವರ ಮೌಲ್ಯ ಹೆಚ್ಚಲು ಕಾರಣವಾಯಿತು.

ವಿದೇಶಿ ಆಟಗಾರ್ತಿಯರಲ್ಲಿ ಆಸ್ಟ್ರೇಲಿಯಾದ ಆಫ್‌ಸ್ಪಿನ್ ಆಲ್‌ರೌಂಡರ್ ಆ್ಯಶ್ಲೆ ಗಾರ್ಡನರ್ ಮತ್ತು ಇಂಗ್ಲೆಂಡ್‌ನ ನಥಾಲಿ ಸಿವರ್ ಬ್ರಂಟ್ ಅತಿಹೆಚ್ಚು ಮೌಲ್ಯ ಪಡೆದರು. ಅವರು ತಲಾ ₹ 3.20 ಕೋಟಿಗೆ ಗುಜರಾತ್ ಜೈಂಟ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳ ಪಾಲಾದರು.

ಭಾರತದ ಯಸ್ತಿಕಾ ಭಾಟಿಯಾ ಮತ್ತು ವೇಗದ ಬೌಲರ್ ರೇಣುಕಾ ಸಿಂಗ್ ಅವರು ತಲಾ ₹ 1.50 ಕೋಟಿ ಪಡೆದುಕೊಂಡರೆ, ದೇವಿಕಾ ವೈದ್ಯ ₹ 1.40 ಕೋಟಿ ಮೌಲ್ಯ ಗಳಿಸಿದರು.

ಪೂಜಾ ವಸ್ತ್ರಕರ್ ₹ 1.90 ಕೋಟಿ ಗಿಟ್ಟಿಸಿಕೊಂಡು ಅಚ್ಚರಿ ಮೂಡಿಸಿದರು. ಇವರು ಮುಂಬೈ ಇಂಡಿಯನ್ಸ್ ತಂಡದ ಪಾಲಾದರು.

ಮಹಿಳಾ ಕ್ರಿಕೆಟ್‌ನ ಅತ್ಯುತ್ತಮ ನಾಯಕಿಯರಲ್ಲಿ ಒಬ್ಬರಾಗಿರುವ ಆಸ್ಟ್ರೇಲಿಯಾದ ಮೆಗ್ ಲ್ಯಾನಿಂಗ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡ ₹ 1.10 ಕೋಟಿ ನೀಡಿ ಬಿಡ್‌ನಲ್ಲಿ ಜಯಿಸಿತು.

ಇಂಗ್ಲೆಂಡ್‌ನ ಬೌಲರ್ ಸೋಫಿ ಎಕ್ಸೆಲ್‌ಸ್ಟೋನ್, ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ಮೆರಿಜನ್ ಕಾಪ್, ನ್ಯೂಜಿಲೆಂಡ್‌ನ ಅಮೇಲಿ ಕೆರ್ ಅವರೂ ಹೆಚ್ಚಿನ ಮೊತ್ತ ಗಳಿಸಿದರು.

ಪ್ರತಿ ಫ್ರಾಂಚೈಸ್‌ಗಳಿಗೆ ತಲಾ ₹12 ಕೋಟಿ ಪರ್ಸ್ ಮೌಲ್ಯ ನಿಗದಿಪಡಿಸಲಾಗಿತ್ತು. ಆರ್‌ಸಿಬಿ ತಂಡ ತನ್ನ ಮೊದಲ ನಾಲ್ವರು ಆಟಗಾರ್ತಿಯರಿಗೆ ₹ 7.10 ಕೋಟಿ ಖರ್ಚು ಮಾಡಿತು. ಉಳಿದ ಮೊತ್ತದಿಂದ ಇತರ ಆಟಗಾರ್ತಿಯರನ್ನು ತಂಡಕ್ಕೆ ಸೇರಿಸಿಕೊಂಡಿತು.

ಸ್ಮೃತಿ, ಅಲಿಸಾ ಸೇರಿದಂತೆ 24 ಆಟಗಾರ್ತಿಯರಿಗೆ ತಲಾ ₹ 50 ಲಕ್ಷ ಮೂಲಬೆಲೆ ನಿಗದಿ ಮಾಡಲಾಗಿತ್ತು. ಅದರಲ್ಲಿ ಭಾರತದ 14 ಮತ್ತು ವಿದೇಶದ 10 ಆಟಗಾರ್ತಿಯರಿದ್ದರು.

ಪ್ರತಿ ತಂಡಕ್ಕೆ ಕನಿಷ್ಠ 15 ಮತ್ತು ಗರಿಷ್ಠ 18 ಆಟಗಾರ್ತಿಯರನ್ನು ಹೊಂದಲು ಅವಕಾಶವಿತ್ತು. ಚೊಚ್ಚಲ ಟೂರ್ನಿ ಮಾರ್ಚ್ 4ರಿಂದ 26ರವರೆಗೆ ಆಯೋಜನೆಯಾಗಿದೆ. ಒಟ್ಟು 22 ಪಂದ್ಯಗಳು ನಡೆಯಲಿವೆ.

ಜೆಮಿಮಾ ರಾಡ್ರಿಗಸ್ ದೀಪ್ತಿ ಶರ್ಮಾ

ಡಬ್ಲ್ಯುಪಿಎಲ್ ತಂಡಗಳು (ಮೌಲ್ಯ ₹ಗಳಲ್ಲಿ)

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಆಟಗಾರ್ತಿ	ಮೌಲ್ಯ
ಸ್ಮೃತಿ ಮಂದಾನ	3.40 ಕೋಟಿ
ರಿಚಾ ಘೋಷ್	1.90 ಕೋಟಿ
ಎಲ್ಲೈಸ್ ಪೆರಿ	1.70 ಕೋಟಿ
ರೇಣುಕಾ ಸಿಂಗ್	1.50 ಕೋಟಿ
ಸೋಫಿ ಡಿವೈನ್	50 ಲಕ್ಷ
ಹೆಥರ್ ನೈಟ್	40 ಲಕ್ಷ
ಮೇಗನ್ ಶಟ್	40 ಲಕ್ಷ
ಕನಿಕಾ ಅಹುಜಾ	35 ಲಕ್ಷ
ಎರಿನ್ ಬರ್ನ್ಸ್	30 ಲಕ್ಷ
ಡೇನ್ ವಾನ್ ನೀಕರ್ಕ್	30 ಲಕ್ಷ
ಪ್ರೀತಿ ಬೋಸ್	30 ಲಕ್ಷ
ಕೋಮಲ್ ಜಂಜದ್	25 ಲಕ್ಷ
ಸಹನಾ ಪವಾರ್	10 ಲಕ್ಷ
ದಿಶಾ ಕಸಾತ್	10 ಲಕ್ಷ
ಇಂದ್ರಾಣಿ ರಾಯ್	10 ಲಕ್ಷ
ಶ್ರೇಯಾಂಕಾ ಪಾಟೀಲ್	10 ಲಕ್ಷ
ಪೂನಂ ಖೆಮ್ನಾ	10 ಲಕ್ಷ
ಆಶಾ ಶೋಭನಾ	10 ಲಕ್ಷ

ಯು.ಪಿ ವಾರಿಯರ್ಸ್

ದೀಪ್ತಿ ಶರ್ಮಾ	2.60 ಕೋಟಿ
ಸೋಫಿ ಎಕ್ಸೆಲ್‌ಸ್ಟೋನ್	1.80 ಕೋಟಿ
ತಹ್ಲಿಯಾ ಮೆಕ್‌ಗ್ರಾಥ್	1.40 ಕೋಟಿ
ದೇವಿಕಾ ವೈದ್ಯ	1.40 ಕೋಟಿ
ಶಬ್ನಂ ಇಸ್ಮಾಯಿಲ್	1 ಕೋಟಿ
ಗ್ರೇಸ್ ಹ್ಯಾರಿಸ್	75 ಲಕ್ಷ
ಅಲಿಸಾ ಹೀಲಿ	70 ಲಕ್ಷ
ಅಂಜಲಿ ಸರವಣಿ	55 ಲಕ್ಷ
ರಾಜೇಶ್ವರಿ ಗಾಯಕವಾಡ್	40 ಲಕ್ಷ
ಶ್ವೇತಾ ಶೆರಾವತ್	40 ಲಕ್ಷ
ಕಿರಣ್ ನವಗಿರೆ	30 ಲಕ್ಷ
ಲಾರೆನ್ ಬೆಲ್	30 ಲಕ್ಷ
ಎಸ್.ಯಶಶ್ರೀ	10 ಲಕ್ಷ
ಲಕ್ಷ್ಮಿ ಯಾದವ್	10 ಲಕ್ಷ
ಪಾರ್ಶ್ವಿ ಚೋಪ್ರಾ	10 ಲಕ್ಷ
ಸಿಮ್ರಾನ್ ಶೇಕ್	10 ಲಕ್ಷ

ಮುಂಬೈ ಇಂಡಿಯನ್ಸ್

ನಥಾಲಿ ಸಿವರ್ ಬ್ರಂಟ್	3.20 ಕೋಟಿ
ಪೂಜಾ ವಸ್ತ್ರಕರ್	1.90 ಕೋಟಿ
ಹರ್ಮನ್‌ಪ್ರೀತ್ ಕೌರ್	1.80 ಕೋಟಿ
ಯಸ್ತಿಕಾ ಭಾಟಿಯಾ	1.50 ಕೋಟಿ
ಅಮೇಲಿ ಕೆರ್	1 ಕೋಟಿ
ಅಮನ್‌ಜ್ಯೋತ್ ಕೌರ್	50 ಲಕ್ಷ
ಹೇಯ್ಲಿ ಮ್ಯಾಥ್ಯೂಸ್	40 ಲಕ್ಷ
ಕ್ಲೋ ಟ್ರೈಯನ್	30 ಲಕ್ಷ
ಹೆಥರ್ ಗ್ರಹಾಂ	30 ಲಕ್ಷ
ಇಸಾಬೆಲಾ ವಾಂಗ್	30 ಲಕ್ಷ
ಪ್ರಿಯಾಂಕಾ ಬಾಲಾ	20 ಲಕ್ಷ
ಧಾರಾ ಗುಜ್ಜರ್	10 ಲಕ್ಷ
ಸೈಕಾ ಇಶಾಕ್	10 ಲಕ್ಷ
ಹುಮೈರಾ ಖಾಜಿ	10 ಲಕ್ಷ
ಸೋನಂ ಯಾದವ್	10 ಲಕ್ಷ
ನೀಲಂ ಬಿಷ್ಟ್	10 ಲಕ್ಷ
ಜಿಂತಿಮಣಿ ಕಲಿತಾ	10 ಲಕ್ಷ

ಗುಜರಾತ್ ಜೈಂಟ್ಸ್

ಆ್ಯಶ್ಲೆ ಗಾರ್ಡನರ್	3.20 ಕೋಟಿ
ಬೆಥ್ ಮೂನಿ	2 ಕೋಟಿ
ಸ್ನೇಹ ರಾಣಾ	75 ಲಕ್ಷ
ಜಾರ್ಜಿಯಾ ವೇರ್‌ಹಂ	75 ಲಕ್ಷ
ಅನಾಬೆಲ್ ಸದರ್ಲೆಂಡ್	70 ಲಕ್ಷ
ಸೋಫಿ ಡಂಕ್ಲಿ	60 ಲಕ್ಷ
ಹರ್ಲೀನ್ ಡಿಯೊಲ್	40 ಲಕ್ಷ
ದಿಯೆಂದ್ರ ಡಾಟಿನ್	60 ಲಕ್ಷ
ಸುಷ್ಮಾ ವರ್ಮಾ	60 ಲಕ್ಷ
ತನುಜಾ ಕನ್ವರ್	50 ಲಕ್ಷ
ಅಶ್ವಿನಿ ಕುಮಾರಿ	35 ಲಕ್ಷ
ಎಸ್.ಮೇಘನಾ	30 ಲಕ್ಷ
ಮಾನಸಿ ಜೋಷಿ	30 ಲಕ್ಷ
ಡಿ.ಹೇಮಲತಾ	30 ಲಕ್ಷ
ಮೋನಿಕಾ ಪಟೇಲ್	30 ಲಕ್ಷ
ಹರ್ಲಿ ಗಲಾ	10 ಲಕ್ಷ
ಪರುಣಿಕಾ ಸಿಸೊಡಿಯಾ	10 ಲಕ್ಷ
ಶಬ್ನಂ ಶಕೀಲ್	10 ಲಕ್ಷ

ಡೆಲ್ಲಿ ಕ್ಯಾಪಿಟಲ್ಸ್

ಜೆಮಿಮಾ ರಾಡ್ರಿಗಸ್	2.20 ಕೋಟಿ
ಶಫಾಲಿ ವರ್ಮಾ	2 ಕೋಟಿ
ಮೆರಿಜನ್ ಕಾಪ್	1.50 ಕೋಟಿ
ಮೆಗ್ ಲ್ಯಾನಿಂಗ್	1.10 ಕೋಟಿ
ಅಲೈಸ್ ಕ್ಯಾಪ್ಸಿ	75 ಲಕ್ಷ
ಶಿಖಾ ಪಾಂಡೆ	60 ಲಕ್ಷ
ಜೆಸ್ ಜೊನಾಸೆನ್	50 ಲಕ್ಷ
ಲಾರಾ ಹ್ಯಾರಿಸ್	45 ಲಕ್ಷ
ರಾಧಾ ಯಾದವ್	40 ಲಕ್ಷ
ಮಿನು ಮನ್ನಿ	30 ಲಕ್ಷ
ತಾನಿಯಾ ಭಾಟಿಯಾ	30 ಲಕ್ಷ
ಪೂನಂ ಯಾದವ್	30 ಲಕ್ಷ
ಸ್ನೇಹಾ ದೀಪ್ತಿ	30 ಲಕ್ಷ
ಅರುಂಧತಿ ರೆಡ್ಡಿ	30 ಲಕ್ಷ
ಟೈಟಸ್ ಸಾಧು	25 ಲಕ್ಷ
ಜೆಸಿಯಾ ಅಖ್ತರ್	20 ಲಕ್ಷ
ತಾರಾ ನೊರಿಸ್	10 ಲಕ್ಷ
ಅಪರ್ಣಾ ಮೊಂಡಲ್	10 ಲಕ್ಷ

ಸ್ಮೃತಿಗೆ ನಾಯಕತ್ವ?

ಸ್ಮೃತಿ ಮಂದಾನ ಅವರಿಗೆ ಆರ್‌ಸಿಬಿ ತಂಡದ ನಾಯಕತ್ವದ ಜವಾಬ್ದಾರಿ ಲಭಿಸುವ ಸಾಧ್ಯತೆಯಿದೆ. 'ಸ್ಮೃತಿ ಅವರಿಗೆ ನಾಯಕತ್ವದ ಅನುಭವ ಇದೆ. ಆದ್ದರಿಂದ ಅವರು ನಾಯಕಿಯಾಗುವ ಸಾಧ್ಯತೆಯೇ ಅಧಿಕ' ಎಂದು ಆರ್‌ಸಿಬಿ ತಂಡದ ನಿರ್ದೇಶಕ ಮೈಕ್ ಹೆಸನ್ ಹೇಳಿದ್ದಾರೆ. 'ಮಂದಾನ ಮತ್ತು ಆಸ್ಟ್ರೇಲಿಯಾದ ಎಲ್ಲೈಸ್ ಪೆರಿ ಅವರನ್ನು ಎಲ್ಲರೂ ಬಲ್ಲರು. ಇಬ್ಬರನ್ನೂ ತಂಡಕ್ಕೆ ಸೇರಿಸಿಕೊಳ್ಳಬೇಕೆಂಬ ಗುರಿ ಇಟ್ಟುಕೊಂಡು ಹರಾಜಿಗೆ ಬಂದಿದ್ದೆವು' ಎಂದು ತಿಳಿಸಿದ್ದಾರೆ.

ಹರ್ಮನ್‌ಪ್ರೀತ್ (ಮುಂಬೈ ಇಂಡಿಯನ್ಸ್), ಮೆಗ್ ಲ್ಯಾನಿಂಗ್ (ಡೆಲ್ಲಿ ಕ್ಯಾಪಿಟಲ್ಸ್), ಬೆಥ್ ಮೂನಿ (ಗುಜರಾತ್ ಜೈಂಟ್ಸ್) ಮತ್ತು ದೀಪ್ತಿ ಶರ್ಮಾ (ಯುಪಿ ವಾರಿಯರ್ಸ್) ಅವರು ವಿವಿಧ ತಂಡಗಳ ನೇತೃತ್ವ ವಹಿಸುವ ಸಾಧ್ಯತೆಯಿದೆ.

ಶ್ರೀಲಂಕಾದ ಹರ್ಷಿತಾ ಸಮರವಿಕ್ರಮ ಬ್ಯಾಟಿಂಗ್ ಪರಿ– ಎಎಫ್‌ಪಿ ಚಿತ್ರ

ಟಿ20 ವಿಶ್ವಕಪ್: ಶ್ರೀಲಂಕಾಕ್ಕೆ ಜಯ

ಕೇಪ್‌ಟೌನ್ (ಪಿಟಿಐ): ಹರ್ಷಿತಾ ಸಮರವಿಕ್ರಮ ಹಾಗೂ ನೀಲಾಕ್ಷಿ ಡಿಸಿಲ್ವಾ ಅವರ ಜೊತೆಯಾಟದ ಬಲದಿಂದ ಶ್ರೀಲಂಕಾ ತಂಡವು ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗೆಲುವು ಸಾಧಿಸಿತು.

ಭಾನುವಾರ ರಾತ್ರಿ ನಡೆದ ಎ ಗುಂಪಿನ ಪಂದ್ಯದಲ್ಲಿ ಶ್ರೀಲಂಕಾ 7 ವಿಕೆಟ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಸೋಲಿಸಿತು.

ಟಾಸ್ ಗೆದ್ದು ಬ್ಯಾಟ್ ಮಾಡಿದ ಬಾಂಗ್ಲಾ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 126 ರನ್ ಗಳಿಸಿತು. ಸೋಭಾನ ಮೊಸ್ತರಿ (29) ಮತ್ತು ನಿಗರ್ ಸುಲ್ತಾನಾ (28) ಬಾಂಗ್ಲಾಕ್ಕೆ ಅಲ್ಪ ಕಾಣಿಕೆ ನೀಡಿದರು. ಎದುರಾಳಿ ತಂಡದ ಒಶಾದಿ ರಣಸಿಂಗೆ (23ಕ್ಕೆ 3) ಅವರ ದಾಳಿಗೆ ಬಾಂಗ್ಲಾ ನಲುಗಿತು.

ಗುರಿ ಬೆನ್ನತ್ತಿದ ಶ್ರೀಲಂಕಾ 10 ಎಸೆತಗಳು ಬಾಕಿ ಇರುವಂತೆಯೇ 3 ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು. ತಂಡವು ಒಂದು ಹಂತದಲ್ಲಿ 26 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 104 ರನ್ ಕಲೆ ಹಾಕಿದ ಹರ್ಷಿತಾ (ಔಟಾಗದೆ 69) ಹಾಗೂ ನೀಲಾಕ್ಷಿ (ಔಟಾಗದೆ 41) ಗೆಲುವಿನ ರೂವಾರಿಗಳಾದರು.

ಬಾಂಗ್ಲಾ ವೇಗಿ ಮರೂಫಾ ಅಖ್ತರ್ (26ಕ್ಕೆ 3) ಅವರ ಪ್ರಯತ್ನಕ್ಕೆ ಫಲ ಲಭಿಸಲಿಲ್ಲ.

ಇಂಗ್ಲೆಂಡ್‌ಗೆ ಜಯ: ಪಾರ್ಲ್‌ನಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಅಲಿಸ್ ಕ್ಯಾಪ್ಸೆ ಅವರ ಅಬ್ಬರದ ಅರ್ಧಶತಕದ (51, 22ಎ) ಬಲದಿಂದ ಇಂಗ್ಲೆಂಡ್ ತಂಡವು 4 ವಿಕೆಟ್‌ಗಳಿಂದ ಐರ್ಲೆಂಡ್ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಐರ್ಲೆಂಡ್ 18.2 ಓವರ್‌ಗಳಲ್ಲಿ 105 ರನ್ ಗಳಿಸಿ ಆಲೌಟ್ ಆಯಿತು. ಇಂಗ್ಲೆಂಡ್ 14.2 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 107 ರನ್ ಗಳಿಸಿ ಗೆದ್ದಿತು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 8ಕ್ಕೆ 126 (ಶಮಿಮಾ ಸುಲ್ತಾನಾ 20, ಸೋಭಾನ ಮೊಸ್ತರಿ 29, ನಿಗರ್ ಸುಲ್ತಾನಾ 28; ಒಶಾದಿ ರಣಸಿಂಗೆ 23ಕ್ಕೆ 3, ಚಾಮರಿ ಅಟಪಟ್ಟು 19ಕ್ಕೆ 2). ಶ್ರೀಲಂಕಾ: 18.2 ಓವರ್‌ಗಳಲ್ಲಿ 3ಕ್ಕೆ 129 (ಹರ್ಷಿತಾ ಸಮರವಿಕ್ರಮ ಔಟಾಗದೆ 69, ನೀಲಾಕ್ಷಿ ಡಿಸಿಲ್ವಾ ಔಟಾಗದೆ 41; ಮರುಫಾ ಅಖ್ತರ್ 23ಕ್ಕೆ 3). ಫಲಿತಾಂಶ: ಶ್ರೀಲಂಕಾ ತಂಡಕ್ಕೆ ಏಳು ವಿಕೆಟ್‌ಗಳ ಜಯ

ಏಷ್ಯಾ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಭಾರತಕ್ಕೆ ಕಜಕಸ್ತಾನ ಸವಾಲು

ದುಬೈ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಪಿ.ವಿ.ಸಿಂಧು ಮತ್ತು ಎಚ್.ಎಸ್. ಪ್ರಣಯ್ ನೇತೃತ್ವದ ಭಾರತ ತಂಡವು ಏಷ್ಯಾ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ ಕಜಕಸ್ತಾನ ಸವಾಲು ಎದುರಿಸಲಿದೆ.

ಮಂಗಳವಾರದಿಂದ ಇಲ್ಲಿ ನಡೆಯಲಿರುವ ಚಾಂಪಿಯನ್‌ಷಿಪ್‌ನ ಬಿ ಗುಂಪಿನ ಪಂದ್ಯದಲ್ಲಿ ಭಾರತ ಜಯ ಗಳಿಸುವ ನೆಚ್ಚಿನ ತಂಡ ಎನಿಸಿದೆ.

ಕಳೆದ ವರ್ಷ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಬಳಿಕ ಸಿಂಧು ಗಾಯದ ಕಾರಣ ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಆಡಿರಲಿಲ್ಲ. ಜನವರಿಯಲ್ಲಿ ಮಲೇಷ್ಯಾ ಓಪನ್ ಮತ್ತು ಇಂಡಿಯಾ ಓಪನ್ ಟೂರ್ನಿಗಳಲ್ಲಿ ಕಣಕ್ಕಿಳಿದಿದ್ದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಸಿಂಧು ಜೊತೆಗೆ ಆಕರ್ಷಿ ಕಶ್ಯಪ್ ಇದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಪ್ರಣಯ್ ಅವರೊಂದಿಗೆ ಲಕ್ಷ್ಯ ಸೇನ್ ಆಡಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ– ಧ್ರುವ ಕಪಿಲ, ಕೃಷ್ಣಪ್ರಸಾದ್ ಗರಗ– ವಿಷ್ಣುವರ್ಧನ್ ಗೌಡ್ ಪಿ., ಮಹಿಳಾ ಡಬಲ್ಸ್‌ನಲ್ಲಿ ತ್ರಿಶಾ ಜೋಲಿ– ಗಾಯತ್ರಿ ಗೋಪಿಚಂದ್, ಅಶ್ವಿ ಭಟ್– ಶಿಖಾ ಗೌತಮ್, ಮಿಶ್ರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್– ತನಿಶಾ ಕ್ರಾಸ್ಟೊ ಕಣಕ್ಕಿಳಿಯುವರು.

ತಂಡಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಪ್ರತಿ ಗುಂಪಿನ ಅಗ್ರ ಎರಡು ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸಲಿವೆ.

ಪಿ.ವಿ.ಸಿಂಧು– ಪಿಟಿಐ ಚಿತ್ರ

ಕ್ರಿಕೆಟ್: ಮೂರನೇ ಟೆಸ್ಟ್‌ಗೆ ಇಂದೋರ್ ಆತಿಥ್ಯ

ನವದೆಹಲಿ (ಪಿಟಿಐ): ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೆಸ್ಟ್ ಸರಣಿಯ ಮೂರನೇ ಪಂದ್ಯವನ್ನು ಧರ್ಮಶಾಲಾ ಬದಲು ಇಂದೋರ್‌ನಲ್ಲಿ ಆಯೋಜಿಸಲು ಬಿಸಿಸಿಐ ನಿರ್ಧರಿಸಿದೆ.

ಧರ್ಮಶಾಲಾ ಕ್ರೀಡಾಂಗಣದ ಔಟ್‌ಫೀಲ್ಡ್, ಆಟಕ್ಕೆ ಯೋಗ್ಯವಲ್ಲದ ಕಾರಣ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಬಿಸಿಸಿಐ ಮೂಲಗಳು ಹೇಳಿವೆ. ಇಲ್ಲಿನ ಅಂಗಳದ ಔಟ್‌ಫೀಲ್ಡ್‌ಗೆ ಹೊಸದಾಗಿ ಮಣ್ಣು ಹಾಕಿ ಹುಲ್ಲು ಬೆಳೆಸಲಾಗಿತ್ತು.

'ಮಾರ್ಚ್ 1 ರಿಂದ 5ರ ವರೆಗೆ ಧರ್ಮಶಾಲಾದ ಎಚ್‌ಪಿಸಿಎ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಟೆಸ್ಟ್ ಪಂದ್ಯವನ್ನು ಇಂದೋರ್‌ನ ಹೋಳ್ಕರ್ ಕ್ರೀಡಾಂಗಣಕ್ಕೆ ಸ್ಥಳಾಂತರಿಸಲಾಗಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ.

'ಅತಿಯಾದ ಚಳಿಯ ಕಾರಣ ಔಟ್‌ಫೀಲ್ಡ್‌ಅನ್ನು ನಿಗದಿತ ಸಮಯದಲ್ಲಿ ಸಜ್ಜುಗೊಳಿಸಲು ಸಾಧ್ಯವಾಗಿಲ್ಲ. ಅಂಗಳದಲ್ಲಿ ಹುಲ್ಲು ಬೆಳೆಯಲು ಇನ್ನೂ ಕೆಲವು ಸಮಯ ಬೇಕು' ಎಂದು ತಿಳಿಸಿದ್ದಾರೆ.

ಬಿಸಿಸಿಐ ಪಿಚ್ ಕ್ಯುರೇಟರ್ ತಪಸ್ ಚಟರ್ಜಿ, ಧರ್ಮಾಶಾಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಔಟ್‌ಫೀಲ್ಡ್ ಇನ್ನೂ ಸಿದ್ಧಗೊಂಡಿಲ್ಲ ಎಂದು ಅವರು ವರದಿ ನೀಡಿದ್ದರು. ಎಚ್‌ಪಿಸಿಎ ಕ್ರೀಡಾಂಗಣದಲ್ಲಿ ಕಳೆದ ಒಂದು ಋತುವಿನಿಂದ ಯಾವುದೇ ಪಂದ್ಯ ಆಯೋಜನೆಯಾಗಿಲ್ಲ. ಹಿಮಾಚಲ ಪ್ರದೇಶ ತಂಡ ತನ್ನ ರಣಜಿ ಪಂದ್ಯಗಳನ್ನು ನಾದೌನ್‌ನಲ್ಲಿರುವ ಕ್ರೀಡಾಂಗಣದಲ್ಲಿ ಆಡಿತ್ತು.

ಫ್ರಾಂಚೈಸ್ ಕ್ರಿಕೆಟ್‌ಗೆ ಮಾರ್ಗನ್ ವಿದಾಯ

ಲಂಡನ್ (ಪಿಟಿಐ): ಏಕದಿನ ಕ್ರಿಕೆಟ್ ವಿಶ್ವಕಪ್ ವಿಜೇತ ಇಂಗ್ಲೆಂಡ್ ತಂಡದ ನಾಯಕ ಏಯಾನ್ ಮಾರ್ಗನ್ ಅವರು ಸೋಮವಾರ ಫ್ರಾಂಚೈಸ್ ಮಾದರಿ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

36 ವರ್ಷದ ಮಾರ್ಗನ್ ಅವರು ಕಳೆದ ವರ್ಷ ಜುಲೈನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಪ್ರಕಟಿಸಿದ್ದರು.

ಜೊಕೊವಿಚ್

ರ‍್ಯಾಂಕಿಂಗ್: ಜೊಕೊವಿಚ್ ಸ್ಥಾನ ಅಬಾಧಿತ

ಪ್ಯಾರಿಸ್ (ಎಎಫ್‌ಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಅಮೆರಿಕದ ಟೇಲರ್ ಫ್ರಿಟ್ಜ್ ಒಂದು ಸ್ಥಾನ ಬಡ್ತಿ ಪಡೆದು ಏಳನೇ ಸ್ಥಾನಕ್ಕೇರಿದ್ದಾರೆ.

25 ವರ್ಷದ ಫ್ರಿಟ್ಜ್ ಅವರಿಗೆ ಇದು ಜೀವನಶ್ರೇಷ್ಠ ರ‍್ಯಾಂಕಿಂಗ್ ಆಗಿದೆ.ಭಾನುವಾರ ಡಲ್ಲಾಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ಎಟಿಪಿ ಟೂರ್ ಟ್ರೋಫಿ ಜಯಿಸಿದ ಚೀನಾದ ಮೊದಲ ಆಟಗಾರ ಎನಿಸಿಕೊಂಡ ವು ಯಿಬಿಂಗ್ 39 ಸ್ಥಾನಗಳ ಏರಿಕೆ ಕಂಡಿದ್ದು, 58ನೇ ಸ್ಥಾನಕ್ಕೆ ತಲುಪಿದ್ದಾರೆ.



Terms and conditions apply. ^Warranty cover for 3 years / 1 Lakh km, whichever ends earlier. *Available in Tiago XZ+ and Tigor XZ+. Images and illustrations are indicative and for information purposes only. All Features/specifications are not available in all variants and may vary for different variants. Specifications/features are subject to change without prior information. Please consult an authorised Tata Motors dealer for latest information on features/specifications before deciding to place an order. Colours may vary due to printing limitations. Local taxes and Octroi extra.

KHT MOTORS Whitefield: 7506023988; Domlur: 7506024006, Kolar: 8291028427

KROPEX AUTO Hosur Road: 7506024016, Koramangala: 9167395364, Sarjapur road: 8291202713, Mahadevapura: 8291052641

PRERANA MOTORS Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334

ADISHAKTI CARS Hebbal: 7506023837; Dasarahalli: 9167982568

KEY MOTORS Kanakapura Road: 7506023980, Mysore Road: 9167395034, Kanakapura City: 9619041506, BG Road: 9167395164, Sunkadakatte Magadi Road: 9167882027, Nelamangala: 9167881890

SREE AUTO Tumkur: 7506024318, Chitradurga: 9619033465, Tiptur: 9619050469, Kunigal: 8879046819, Chikkaballapur: 8879046290